ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ 2000 ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ .ಅನುಬಂಧ (v)

(9) ನಿಯಮ 69ರ ಮೇರೆಗೆ

ವಿಷಯ : ತೆಂಗಿನ ಮರಗಳಿಗೆ ತಗಲಿರುವ ನುಸಿರೋಗ

ಅಧ್ಯಕ್ಷರು : ಈಗ ವಿರೋಧ ಪಕ್ಷದವರು ಯಾರು ಸ್ಥಾನದಲಿಲ್ಲ, ಈಗಾಗಲೇ ಇದರ ಬಗ್ಗೆ ಚರ್ಚೆ ಮುಗಿದಿರುವುದರಿಂದ ಮಾನ್ಯ ಸಚಿವರಾದ ಶ್ರೀ ಅಲ್ಲಂವೀರಭದ್ರಪ್ಪನವರು ಉತ್ತರ ಕೊಡಬೇಕು.

+ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಹಿರಿಯ ಶಾಸಕರಾದಂತಹ ಮಾನ್ಯ ರಾಜುಗೌಡ ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕರ್ನಾಟಕ ರಾಜ್ಯದಲ್ಲಿ ತೆಂಗಿನಮರಗಳಿಗೆ ತಗಲಿರುವ ನುಸಿರೋಗದ ಬಗ್ಗೆ ಬಹಳಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 4 ಲಕ್ಷ 65 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗಿನಬೆಳೆಯನ್ನು ಬೆಳೆಯಲಾಗುತ್ತದೆ. ಇದರಲ್ಲಿ ಸುಮಾರು 7 ಲಕ್ಷ ತೆಂಗಿನಮರಗಳಿದ್ದು ಸುಮಾರು 3 ಲಕ್ಷ 120 ಮಿಲಿಯನ್ ತೆಂಗಿನಕಾಯಿ ಉತ್ಪಾದನೆಯಾಗುತ್ತಿದೆ. ಈ ನುಸಿರೋಗ ನಮ್ಮ ರಾಜ್ಯದಲ್ಲೇ ಅಲ್ಲ ಇಡೀ ವಿಶ್ವದಲ್ಲೆಲ್ಲಾ ಹರಡಿದೆ. ನಮ್ಮ ರಾಜ್ಯದಲ್ಲಿ 1998ರಲ್ಲಿ ಈ ರೋಗವನ್ನು ಗುರುತಿಸಲಾಗಿದೆ, ಈಗಾಗಲೇ ನಮ್ಮ ಹಿರಿಯಮಾಜಿ ಸಚಿವರಾದಂಥ ಬೈರೇಗೌಡರವರು ಕೂಡ 1998ರಲ್ಲಿ ನುಸಿರೋಗವನ್ನು ಡೆಮಾನ್‌ಸ್ಟ್ರೇಷನ್ ಮಾಡಿ ಔಷಧಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಕೆಲವು ಶಾಸಕರು ಈ ರೋಗದ ಬಗ್ಗೆ ಇಲಾಖೆಯವರು ಗಮನಹರಿಸಿಲ್ಲವೆಂದು ಹೇಳಿದ್ದಕ್ಕೆ 1998ರಲ್ಲಿ ನಾನೇ ಖುದ್ದಾಗಿ ಇಂಜಕ್ಷನ್ ಕೊಟ್ಟಿದ್ದೇನೆಂದು ಮಾನ್ಯ ಬೈರೇಗೌಡರು ಹೇಳಿದರು. ಅವರು ಬಹಳಷ್ಟು ಅನುಭವದ ಮಾತುಗಳನ್ನು ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್ : ನಿನ್ನೆಯ ದಿವಸ ಈ ವಿಷಯದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ವಿಧಾನಪರಿಷತ್ತಿಗೆ ಕಳುಹಿಸುವ ಸಲುವಾಗಿ ತುರ್ತಾಗಿ ಬಿಲ್‌ನ್ನು ಮಂಡನೆ ಮಾಡಿದರು. ಆದ್ದರಿಂದ ನಾನು ಪೂರ್ತಿ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಸಂಪೂರ್ಣವಾಗಿ ಮಾತನಾಡಿದ ಮೇಲೆ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ನನ್ನ ಚರ್ಚೆಯನ್ನು ಅರ್ಧಕ್ಕೆ ನಿಲ್ಲಿಸುವಂತೆ ತಾವು ರೂಲಿಂಗ್‌ನ್ನು ಕೊಟ್ಟು ಮಾನ್ಯ ಸಚಿವರಿಂದ ಉತ್ತರ ಕೊಡಿಸುವುದಾದರೆ ನನ್ನದೇನು ಅಭ್ಯಂತರವಿಲ್ಲ.

ಅಧ್ಯಕ್ಷರು : ತಾವು ಈಗಾಗಲೇ ಹೆಚ್ಚು ಕಡಿಮೆ ಈ ವಿಚಾರದ ಬಗ್ಗೆ ಪೂರ್ಣವಾಗಿ ಮಾತನಾಡಿದ್ದೀರಿ, ಆದ್ದರಿಂದ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಮೇಲೆ ತಾವು ಕ್ಲಾರಿಫಿಕೇಷನ್‌ನ್ನು ಕೇಳಬಹುದು.

ಶ್ರೀ ಬಿ. ಸೋಮಶೇಖರ್ : ಇನ್ನು ನಾನು ಸಂಪೂರ್ಣವಾಗಿ ಈ ವಿಷಯದ ಬಗ್ಗೆ ಮಾತನಾಡಿಲ್ಲ. ಬಿಲ್ ಕೌನ್ಸಿಲ್‌ಗೆ ಹೋಗಬೇಕಾಗಿದೆ ಎಂದು ಇಲ್ಲಿ ಬೇಗನೆ ಮಂಡನೆ ಮಾಡಬೇಕೆಂದು ಹೇಳಿನನ್ನಚರ್ಚೆಯ ಮಧ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಬಿಲ್‌ನ್ನು ಮಂಡನೆ ಮಾಡಿದರು. ನಾನು ಮಾತನಾಡುವುದನ್ನು ಮಧ್ಯದಲ್ಲೇ ಮೊಟಕು ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ನಾನು ಇನ್ನು ಕೆಲವು

ವಿಚಾರಗಳನ್ನುಸಂ ಪೂರ್ಣವಾಗಿ ಹೇಳಿಲ್ಲ. ಆದರೆ ಈಗಲೇ ಉತ್ತರ ಹೇಳಿದರೆ ಹೇಗೆ?

ಅಧ್ಯಕ್ಷರು : ಇಲ್ಲಿ ಯಾರಾದರೂ ಮಾತನಾಡುವುದಾದರೆ ಮಾತನಾಡಿ ಎಂದು ಕೇಳಿದೆ, ಆದರೆ ತಾವು ಯಾರು ಇರಲಿಲ್ಲ.

ಶ್ರೀ ಬಿ. ಸೋಮಶೇಖರ್ : ಬೇರೆ ವಿಚಾರ ಬಂದಾಗ, ಬಂದು ಮಾತನಾಡೋಣವೆಂದು ನಾವೆಲ್ಲರೂ ವಾಕ್ ಔಟ್ ಮಾಡಿದ್ದೆವು ಅಷ್ಟೆ ಅಷ್ಟರಲ್ಲಿ ಆಗಲೇ ನೀವು ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತಿದ್ದೀರಿ.

ಅಧ್ಯಕ್ಷರು : ನಾನು ಇಲ್ಲಿ ಕೇಳಿದಾಗ ಯಾರು ಸದಸ್ಯರಿಲ್ಲದಿದ್ದರೆ ನಾನು ಏನೆಂದು ತಿಳಿದುಕೊಳ್ಳಲಿ? ಇದರ ಬಗ್ಗೆ ಮಾತನಾಡಲು ಯಾರು ಇಲ್ಲವೆಂದು ತಿಳಿದುಕೊಳ್ಳಬೇಕಷ್ಟೆ.

ಶ್ರೀ ಬಿ. ಸೋಮಶೇಖರ್ : ಇನ್ನು 10 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಆದ್ದರಿಂದ ನನಗೊಂದು ಅವಕಾಶ ಕೊಡಿ.

ಅಧ್ಯಕ್ಷರು : 10 ನಿಮಿಷದಲ್ಲಿ ತಮ್ಮ ಮಾತನ್ನು ಮುಗಿಸಬೇಕು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು)

12.40 ಪಿ.ಎಂ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿನ ಕೆಲವು ವಿಚಾರಗಳನ್ನು ನಾನು ಹೇಳಿದೆ. ಈ ನುಸಿಪೀಡೆ ರೋಗ ನಮ್ಮ ಕರ್ನಾಟಕದಲ್ಲಿ ಬಂದು ಇಡೀ ರೈತರಲ್ಲಿ ಬಹಳ ಗಾಬರಿಯನ್ನುಂಟುಮಾಡಿದೆ. ಇದನ್ನೇ ನಂಬಿಕೊಂಡಿರತಕ್ಕ ರೈತರು ತಮ್ಮ ಭವಿಷ್ಯದ ಬಗ್ಗೆ ಬಹಳ ಚಿಂತೆಯನ್ನು ಮಾಡುತ್ತಿದ್ದಾರೆ. ಸರ್ಕಾರ ಈ ದಿಕ್ಕಿನಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳದೆ ಬೇರೆ ದಿಕ್ಕಿನಲ್ಲಿ ಹೋಗುತ್ತಿದೆ. ಕೃಷಿ ಇಲಾಖೆಯ ಇರಬಹುದು, ಕೃಷಿ ವಿಶ್ವವಿದ್ಯಾನಿಲಯ ಇರಬಹುದು ತೋಟಗಾರಿಕೆ ಇಲಾಖೆ ಇರಬಹುದು ಸರ್ಕಾರ ವಿರಬಹುದು. ಇದನ್ನು ಯಾವ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗಿತ್ತೊ ಆ ದಿಕ್ಕಿನಲ್ಲಿ ಯೋಚನೆ ಮಾಡದೆ, ಎಲ್ಲಿ ರೋಗವಿದೆ ಆ ರೋಗವನ್ನು ಗುರುತಿಸದೆ ಆ ರೋಗಕ್ಕೆ ಔಷಧಿಯನ್ನು ಕೊಡದೆ ಇನ್ನಾವುದೋ ರೋಗಕ್ಕೆ ಕೊಡುವ ಔಷಧಿಯನ್ನು ಕೊಡುವುದಕ್ಕೆ ಹೊರಟಿದ್ದಾರೆ. ಇದರಿಂದ ನುಸಿ ರೋಗ ನಿವಾರಣೆಯಾಗುವುದಿಲ್ಲವೆಂದು ಸ್ಪಷ್ಟ ತೀರ್ಮಾನವಾಗುತ್ತದೆ. ವಿಜ್ಞಾನಿಗಳು ಒಂದು ಸಾರಿ ಹೇಳುತ್ತಾರೆ ಮಾನೊಕ್ರೋಟೊ ಫಾನ್ ಡೈಕೊಫಾಲ್ ಶಿಫಾರಸ್ಸು ಮಾಡಿ ಎಂದು.

ಶ್ರೀ ಅಲ್ಲಂವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ ಮಾನ್ಯ ಸದಸ್ಯರಾದ ಸೋಮಶೇಖರ್‌ರವರು 27ನೇ ಹಾಗೂ 28ನೇ ತಾರೀಖು ಆ ವಿಷಯ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಾಗ ಡಿಫರೆಂಟ್ ಆಫ್ ಒಪೀನಿಯನ್ ಕೊಟ್ಟಿರುವ ಬಗ್ಗೆ ಅವರು ಈ ವಿಷಯವನ್ನು ಹೇಳಿದ್ದಾರೆಂದು ಹೇಳಿದ್ದೇನೆ. ಮಾನ್ಯ ಬೈರೇಗೌಡರಿಗೆ ವಿಷಯ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಈ ವಿಷಯ ಹೌಸ್‌ನಲ್ಲಿ ಐದಾರು ಸಾರಿ ಬಂದಿದೆ. ಅವರು ಮಾತನಾಡುವುದು ಬೇಡವೆಂದು ನಾನು ಹೇಳುವುದಿಲ್ಲ. ಅವರು ಹಿಂದೆ ಮಾತನಾಡುವ ಕಾಲಕ್ಕೆ ವಿಷಯ ಹೇಳಿದ್ದಾರೆ. ಬೇರೆ ವಿಷಯ ಹೇಳಿ ಎಂದು ಹೇಳುತ್ತಿದ್ದೇನೆ ನಾನು ಅವರು ಮಾತನಾಡುವುದಕ್ಕೆ ಅಬ್ಜೆಕ್ಟ್ ಮಾಡುವುದಿಲ್ಲ. ನಿಮ್ಮ ಚರ್ಚೆಯನ್ನು ಸ್ವಾಗತ ಮಾಡುತ್ತೇನೆ ಇದರಿಂದ ರೈತರಿಗೆ ಪರಿಹಾರ ಸಿಗಲಿ ಎಂದು ನಾವು ಸಹ ಯೋಜನೆ ಮಾಡುತ್ತಿದ್ದೇವೆ.

+ಶ್ರೀ ಬಿ. ಸೋಮಶೇಖರ್ : ನೀವು ಸಹ ಇದೇ ವಿಚಾರದಲ್ಲಿ ಉತ್ತರ ಕೊಟ್ಟಿದ್ದೀರಿ. ಆ ಉತ್ತರದಲ್ಲಿ ಏನು ಹೇಳಿದ್ದೀರಿ ಅಂದರೆ, ನಾವು ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆ ಔಷಧಿಯನ್ನು ಸಿಂಪರಣೆ ಮಾಡಿದ್ದೇವೆ, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ತಂಡ ಮಾಡಿದ್ದೇವೆ ಅವರು ಸಿಂಪರಣೆ ಮಾಡುತ್ತಿದ್ದಾರೆಂದು ಉತ್ತರ ಕೊಟ್ಟಿದ್ದೀರಿ. ಇದರಿಂದ ಈವೊಂದು ಪೀಡೆಯನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ರೋಗ ಬೇರೆ ಕಡೆಯೂ ಇದೆ. ನಿಮ್ಮ ಸರ್ಕಾರದ ಉತ್ತರವನ್ನು ನೋಡಿದರೆ ಏನೋ ಹೊಸ ವಿಚಾರಗಳನ್ನು ಹೇಳುತ್ತಿದ್ದಾರೆಂದು ಅನ್ನಿಸುತ್ತದೆ. ಸಿರೆಂಡ್ ಟೆಕ್ನಾಲಜಿಯೆಂದು 1994ರಲ್ಲಿ ಒಬ್ಬ ಅಸಿಸ್ಟೆಂಟ್ ಪ್ರೊಫೆಸರ್ ವಿಜ್ಞಾನಿ ಔಷಧಿಯನ್ನು ಕಂಡು ಹಿಡಿದಿದ್ದಾರೆ. ಅದನ್ನು ಯೂನಿವರ್ಸಿಟಿಗೆ ಕಳುಹಿಸುತ್ತಾರೆ. ಯೂನಿವರ್ಸಿಟಿಗೆ ಕಳುಹಿಸಿದ ಮೇಲೆ ಇದರ ಬಗ್ಗೆ ವಿವಿಧ ಹಂತಗಳಲ್ಲಿ ಚರ್ಚೆಯಾಗುತ್ತದೆ. ಚರ್ಚೆಯಾಗಿ ಅದನ್ನು ಪಿಒಪಿ (ಪ್ಯಾಕೇಜ್ ಆಫ್ ಪ್ರಾಕ್ಟೀಸ್‌ಗಾಗಿ) ಇದನ್ನು ಸಿಂಪರಣೆ ಮಾಡಬಹುದೆಂದು ಯೂನಿವರ್ಸಿಟಿಯವರು ತೀರ್ಮಾಣ ತೆಗೆದುಕೊಳ್ಳುತ್ತಾರೆ. ಅಷ್ಟರಲ್ಲಿ ಅವರಿಗಿಂತ ಮೇಲಿರತಕ್ಕ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅದನ್ನು ಅಲ್ಲಿಯೇ ನಿಲ್ಲಿಸಿ. ತಮ್ಮದೇ ಆದಂತಹ ಒಂದು ವಿಧಾನವನ್ನು ಇಲಾಖೆಗೆ ಕಳುಹಿಸುತ್ತಾರೆ. ಈವೊಂದು ಚಿಕಿತ್ಸೆಯನ್ನು ಕೊಡಬಹುದೆಂದು ಹೇಳಿ ಇಲಾಖೆಗೆ ಕಳುಹಿಸಿಕೊಡುತ್ತಾರೆ. ಆ ಚಿಕಿತ್ಸೆಯನ್ನು ನಿಮ್ಮ ತೋಟಗಾರಿಕೆ ಇಲಾಖೆಯವರು ಸ್ವಲ್ಪ ದಿವಸ ಮಾಡುತ್ತಾರೆ ಈವೊಂದು ಚಿಕಿತ್ಸೆಯಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಗೊತ್ತಾದ ಮೇಲೆ ತೋಟಗಾರಿಕೆ ಇಲಾಖೆಯಿಂದಲೇ ಅದನ್ನು ನಿಲ್ಲಿಸುತ್ತಾರೆ. ನೋಟಿಫಿಕೇಶನ್ ಅನ್ನು ತಾವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ದಿನಾಂಕ 31-3-1999ರಲ್ಲಿ ಅದರ ಬಗ್ಗೆ ಸ್ವಲ್ಪ ಪುನರ್ ಪರಿಶೀಲನೆ ಮಾಡಬೇಕಾಗಿದೆ ಈವೊಂದು ವಿಧಾನ ಸರಿಯಾದ ರೀತಿಯಲ್ಲಿ ಆಗಿಲ್ಲ. ಅಸಿಸ್ಟೆಂಟ್ ಪ್ರೊಫೆಸರ್ ಕೊಟ್ಟಿರತಕ್ಕಂ ಶಿಫಾರಸು ಸರಿಯಿಲ್ಲ. ಅವರ ವಿಧಾನ ಯಾವುದೇ ಪಿಒಪಿ (ಪ್ಯಾಕೇಜ್ ಆಫ್ ಪ್ರಕ್ಟೀಸ್‌ನಲ್ಲಿ) ಅಪ್ರೂವಲ್ ಆಗಲಿಲ್ಲ ಅದನ್ನು ಕಳುಹಿಸುವುದಕ್ಕಾಗುವುದಿಲ್ಲವೆಂದು ನಿಲ್ಲಿಸುತ್ತಾರೆ. ಅದು ಅಷ್ಟಕ್ಕೆ ನಿಲ್ಲುತ್ತದೆ. ಮತ್ತೆ ಇನ್ನೊಂದು ಟೆಕ್ನಾಲಜಿ ಹೊರಗಡೆ ಬಿಡುವುದಕ್ಕೆ ಬಿಟ್ಟಿಲ್ಲ. ನಾನು ಮೊದಲೇ ಹೇಳಿದ್ದೇನೆ ಯೂನಿವರ್ಸಿಟಿ ಒಳಗಡೆ ಚರ್ಚೆಯಾಗಿ ತೆಗೆದುಕೊಂಡಿರತಕ್ಕ ತೀರ್ಮಾನವನ್ನು ಹೊರಗಡೆ ಬಿಡದೆ, ಅಲ್ಲಿನ ಮುಖ್ಯಸ್ಥರು ತಮ್ಮದೇ ಆದಂತಹ ವಿಧಾನದ ಚಿಕಿತ್ಸೆಯನ್ನು ನಾನೇ ಮಾಡಿ ದ್ದೇನೆಂದು ಕೃಷಿಮೇಳದಲ್ಲಿ ಅವರದೇ ಆದ ಒಂದು ಪ್ರದರ್ಶನದಲ್ಲಿ ಕೃಷಿ ಸಚಿವರ ಸಮ್ಮುಖ ದೂರದರ್ಶನದಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರಚಾರ ಮಾಡಿ ಈವೊಂದು ವಿಧಾನದಲ್ಲಿ ಮಾಡಬೇಕೆಂದು ಮಾಡುತ್ತಾರೆ. ಅದಕ್ಕೆ ಯಾವುದೇ ರೀತಿಯಾದ ಸಮ್ಮತಿ ಸಿಗಲಿಲ್ಲ. ಯೂನಿವರ್ಸಿಟಿಯ ಟೆಕ್ನಿಕಲ್ ಕಮಿಟಿಯೊಳಗಡೆ ಸಮ್ಮತಿ ಸಿಕ್ಕಿಲ್ಲ. ಅದು ಇವತ್ತು ಬೋಗಸ್ ಆಗಿ ನಡೆಯುತ್ತಿದೆ. ಮಾನೊಕ್ರೊಟೊಫಾಸ್ ಡೈಕೊಫಾಲ್ ಹಾನಿಕಾರಕವೆಂದು ಗೊತ್ತಿದ್ದರೂ ಏಳೆಂಟು ಕಂಪನಿಗಳು ಸ್ಪೂರಿಯಸ್ ಮೆಡಿಏನ್ ಸಪ್ಲೈ ಮಾಡತಕ್ಕದ್ದು ಇದೆ. ಇನ್ನೊಂದು ಕಡೆ ಈವೊಂದು ವಿಧಾನದಿಂದ ಯಾವುದೇ ಉಪಯೋಗವಾಗಿಲ್ಲ ವೆಂದು ತೀರ್ಮಾನಕ್ಕೆ ಬಂದಿದ್ದರೂ ಮತ್ತೊಂದು ಕಡೆ ವ್ಯಾಪಾರಸ್ಥರು ಸ್ಪೂರಿಯಸ್ ಕಂಪನಿಗಳವರು ಕಡಿಮೆ ದರದಲ್ಲಿ ಮಾರ್ಕೆಟ್‌ನಲ್ಲಿ ಬಿಟ್ಟಿರತಕ್ಕದ್ದು ಇದೆ. ಹತ್ತು ಲೀಟರ್ ಹಾಕತಕ್ಕದ್ದು 20 ಲೀಟರ್ ಹಾಕುವುದರಿಂದ ಏನೂ ಪ್ರಯೋಜನವಾಗಿಲ್ಲ. ಹೀಗಾಗಿ ರೈತರು ಯಾವ ವಿಧಾನವನ್ನು ಅನುಸರಿಸಬೇಕೆಂದು ಕಂಗಾಲಾಗಿದ್ದಾರೆ. ಸರ್ಕಾರ ಇದರ ಬಗ್ಗೆ ಯಾವುದು ಒಂದು ತೀರ್ಮಾನ ತೆಗೆದುಕೊಂಡಿಲ್ಲ. ಯಾವುದೇ ನಿಜವಾದ ಚಿಕಿತ್ಸೆ, ಯಾವ ವಿಧಾನವನ್ನು ರೈತರಿಗೆ ಶಿಫಾರಸು ಮಾಡಬೇಕು ಎನ್ನತಕ್ಕದ್ದು ಅದರ ಬಗ್ಗೆ ಸರ್ಕಾರ ತೀರ್ಮಾನ ಕೊಡಲಿಲ್ಲ. ಇವತ್ತು ಬೋಗಸ್

ಶಿಫಾರಸು ಬಂದಿರುವುದರಿಂದ ರೈತರು ಕತ್ತಲಿನಲ್ಲಿದ್ದಾರೆ. ಅದಕ್ಕೆ ಏನು ಮಾಡಬೇಕು? ಶಿಫಾರಸ್ಸು ಏನಿದೆ ಪಿಒಪಿ ಒಳಗೆ ಅದನ್ನು ಹೊರಗಡೆ ಬಿಡಿಸಬೇಕು. ನಿಜವಾದ ವಿಜ್ಞಾನಿಗಳು ಯಾರು ಈ ಔಷಧಿಯನ್ನು ಕಂಡುಹಿಡಿದಿದ್ದಾರೆ ಯಾವ ವಿಧಾನ ಸಕ್ಸಸ್‌ಫುಲ್ ಆಗಿದೆ ಅದನ್ನು ನೀವು ಹೊರಗಡೆ ಬಿಡಬೇಕು. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಎಕ್ಸ್‌ಪರಿಮೆಂಟ್ ಪ್ಲಾಂಟ್‌ಗಳು ಇವೆ . ಇದರಲ್ಲಿ ನೀವು ಏನಾದರೂ ಎಕ್ಸ್‌ಪರಿಮೆಂಟ್ ಮಾಡಿದ್ದೀರಾ? ಅಲ್ಲಿ ಮಾಡಲಿಲ್ಲ. ಅಲ್ಲಿನತೆಂಗಿ ನಮರಗಳಿಗೂ ಸಹ ಈ ರೋಗ ತಟ್ಟಿದೆ. ಈ ಔಷಧಿಯಿಂದ ಏನೂ ಪ್ರಯೋಜನ ಆಗಲಿಲ್ಲ. ಯೂನಿವರ್ಸಿಟಿಯವರು ಏಕಿದ್ದಾರೆ? ವಿಜ್ಞಾನಿಗಳು ಯಾರಿದ್ದಾರೆ ಅವರು ದೊಡ್ಡವರಾಗಿರಲಿ, ಚಿಕ್ಕವರಾಗಿರಲಿ ಯಾವ ವಿಧಾನವನ್ನು ಚಿಕ್ಕವರು ಕಂಡುಹಿಡಿದಿದ್ದರೂ ಸಹ ರೈತರ ಅನುಕೂಲಕ್ಕೋಸ್ಕರ ದೇಶದ ಪ್ರಗತಿಗೋಸ್ಕರ ಆವೊಂದು ವಿಧಾನವನ್ನು ಬೀಡಬೇಕಾಗಿತ್ತು. ಇವತ್ತು ಏನಾಗಿದೆ ಅಂದರೆ ನಿಜವಾಗಿ ಈವೊಂದು ವಿಧಾನವನ್ನು ಕಂಡು ಹಿಡಿದವರನ್ನು ಬಾಯಿಮುಚ್ಚಿದ್ದಾರೆ. ಅದರ ಬಗ್ಗೆ ಕೋರ್ಟ್‌ಗೆ ಹೋಗಿ ಇಂಜೆನ್‌ಕ್ಷನ್ ತಂದಿದ್ದಾರೆ. ಅದಕ್ಕೆ ಯೂನಿವರ್ಸಿಟಿಯವರು ಅನುಮತಿಯನ್ನು ಕೊಟ್ಟಿದ್ದಾರೆಯ? ಟೆಕ್ನಿಕಲ್ ರೀಸರ್ಚ್ ರಿಪೋರ್ಟ್‌ಗಳಿವೆ. ಆ ಕಾನ್ಫಿಡೆನ್ಸಿಯಲ್ ರಿಪೋರ್ಟ್‌ಗಳನ್ನು ಕೋರ್ಟ್‌ಗೆ ಕೊಡಬೇಕಾದರೆ ಯಾರು ಅನುಮತಿಯನ್ನು ಕೊಟ್ಟಿದ್ದಾರೆ? ಇದು ವೈಯಕ್ತಿಕವಾದ ಕಾಂಟ್ರಿಬ್ಯೂಷನ್ ಯಾರದು ಇಲ್ಲ. ಯಾವುದೇ ಪ್ರೊಫೆಸರ್ ಆಗಲಿ ಯಾವುದೇ ವಿಜ್ಞಾನಿಗಳಾಗಲಿ ಯಾರು ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಸರ್ಕಾರದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ಸರ್ಕಾರದ ಪರವಾಗಿ ಏನಾದರೂ ಒಂದು ವಿಧಾನವನ್ನು ಕಂಡುಹಿಡಿದಿದ್ದರೆ ಅದರ ಕೀರ್ತಿ ಸರ್ಕಾರಕ್ಕೆ ಹೋಗಬೇಕೇ ಹೊರತು ವೈಯಕ್ತಿಕವಾಗಿ ಯಾರಿಗೂ ಹೋಗತಕ್ಕದ್ದು ಅಲ್ಲ. ಆದರೆ ಏನು ಮಾಡಿದ್ದು ಅಂದರೆ, ನಿಜವಾಗಿ ಮಾಡಿದವರ ಬಾಯಿ ಮುಚ್ಚಿಸಿ ಅವರು ಮಾತನಾಡದ ಹಾಗೆ ಇಟ್ಟು, ಸುಳ್ಳು ಪ್ರಚಾರವನ್ನು ಮಾಡಿ ಮಾಡದಿರತಕ್ಕ ವ್ಯಕ್ತಿ ಮಾಡಿದ್ದಾರೆಂದು ಹೇಳಲಿಕ್ಕೆ ಹೊರಟಿದ್ದಾರೆ. ಇದು ರೈತರಿಗೂ ಮಾಡಿರತಕ್ಕ ಮೋಸ. ಇದರ ಬಗ್ಗೆ ಸರ್ಕಾರ ನಿಲುವ ತೆಗೆದುಕೊಳ್ಳಬೇಕು. ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಹೆಚ್ಚಿಗೆ ಹೇಳುವುದಿಲ್ಲ ಎಲ್ಲವನ್ನು ಹೇಳಿ ಆಗಿದೆ. ಇನ್ನೊಂದು ಕಡೆ ಹೊಸ ವಿಧಾನವನ್ನು ವಿಠಲಮಲ್ಯ ಇನ್ಸ್ಟಿಟ್ಯೂಟ್‌ನವರು ಕಂಡುಹಿಡಿದಿದ್ದಾರೆ. ಅದು ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಹಿಂದಿನ ವೈಸ್‌ಚಾನ್ಸಲರ್ ಆಗಿದ್ದ ಡಾ॥ ವೀರೇಶ್, ಡಾ॥ ಸುಬ್ಬರಾವ್ ಚೀಫ್ ಎಕ್ಸಿಕ್ಯೂಟೀವ್ ಆಫೀಸರ್ ವಿಠಲ್‌ಮಲ್ಯ ರೀಸರ್ಚ್ ಸೆಂಟರ್ ಅಲ್ಲಿ ಒಂದು ಹೊಸವಿಧಾನವನ್ನು ಕಂಡುಹಿಡಿದಿದ್ದಾರೆ. ಅವರು ಸಾಲ್ಯುನೀಮ್ ಎನ್ನುವ ಒಂದು ಔಷಧಿಯನ್ನು ಕಂಡುಹಿಡಿದಿದ್ದಾರೆ. ಈ ಬೇವಿನ ಬೀಜ ಏನಿದೆ ಅದರಿಂದ ಒಂದು ಬೆಳಿಯ ಸಲ್ಯೂಷನ್ ಬರುತ್ತದೆ. ಬೀಜ ಬೆಳ್ಳಗಿರುತ್ತದೆ ಮತ್ತು ಅದರ ಸುತ್ತ ಒಂದು ಪದರ ಇರುತ್ತದೆ. ಅದು ಬಹಳ ನೈಸಾ ಗಿರುತ್ತದೆ. ಈ ಒಂದು ಅಂಶವನ್ನು ಉಪಯೋಗಿಸಿಕೊಂಡು ಹೊಸದಾಗಿ ಪಾಲ್ಯುನೀಮ್ ಎನ್ನುವ ಒಂದು ಔಷಧಿಯನ್ನು ಕಂಡುಹಿಡಿದಿದ್ದಾರೆ. ಇದನ್ನು ಉಪಯೋಗಿಸಿ ಸೀರೆಂಜ್ ಟೆಕ್ನಾಲಜಿ ಮುಖಾಂತರ ಈ ರೋಗವನ್ನು ತಡೆಗಟ್ಟಬಹುದು ಎಂದು ಪ್ರಯೋಗ ಮಾಡಿದ್ದಾರೆ. ಇದನ್ನು ಯೂನಿವರ್ಸಿಟಿಯವರು ಮಾಡುವುದಕ್ಕೆ ಆಗಿಲ್ಲ. ಇದು ಖಾಸಗಿ ಸಂಸ್ಥೆಯವರು ಮಾಡಿರತಕ್ಕದ್ದನ್ನು ಇವರು ಒಪ್ಪಿಕೊಂಡಿಲ್ಲ. ಯೂನಿವರ್ಸಿಟಿಯವರು ಅವರು ಅಷ್ಟೊಂದು ಯಶಸ್ವಿಯಾಗಿ ಮಾಡಿದ್ದರೂ ಕೂಡ ಬೇರೆಯವರು ಮಾಡಿದ್ದರೂ ಸಹ ಅದಕ್ಕೆ ಒಪ್ಪಿಗೆಕೊಟ್ಟು ಪ್ಯಾಕೇಜ್‌ಆಫ್‌ಪ್ರಾಕ್ಟೀಸ್‌ನಲ್ಲಿ ತಂದು ಅದನ್ನು ಬಿಡುಗಡೆ ಮಾಡಿಲ್ಲ. ಖಾಸಗಿಯವರು ಮಾಡಿದ್ದು ಏನು, ನಿಮ್ಮ ತಜ್ಞರು ಮಾಡಿರತಕ್ಕದ್ದು ಏನು? ಅದನ್ನು ಮಾಡಬೇಕಾದರೆ ಇದರಲ್ಲಿ ಕೆಲವು ರಾಜಕೀಯ ಇದೆ. ಇದು ವೈಯಕ್ತಿಕವಾದಂಥ ಪ್ರತಿಷ್ಠೆ , ಅಸೂಯೆ,

ಸಂಕುಚಿತ ಭಾವನೆ. ಇಷ್ಟೇ ಇದರಲ್ಲಿ ಇರತಕ್ಕದ್ದು. ಇಲ್ಲಿ ರೈತರ ಹಿತದೃಷ್ಟಿಯನ್ನು ನೋಡಬೇಕು. ವೈಯಕ್ತಿಕ ಪ್ರತಿಷ್ಠೆ ಇದ್ದರೆ ಅವರನ್ನು ಸರ್ಕಾರ ಮನೆಗೆ ಕಳಿಸಬೇಕು. ಆದರೆ ಸರ್ಕಾರದವರು ನಿಜವಾಗಿ ಯಾರು ಕಂಡುಹಿಡಿದಿದ್ದಾರೆ ಅವರನ್ನು ಗುರುತಿಸಿ, ಅವರ ರಿಪೋರ್ಟನ್ನು ತೆಗೆದುಕೊಂಡು ಮತ್ತು ಏನೇನು ವಿವಾದಗಳು ನಡೆದಿದೆ, ಎಷ್ಟು ವರ್ಷಗಳ ಕಾಲ ಯಾರು ಕೋರ್ಟಿಗೆ ಕಳಿಸಿದರು, ಯಾರು ಅದಕ್ಕೆ ಅನುಮತಿ ಕೊಟ್ಟರು ಎಂಬುದನ್ನು ನೋಡಬೇಕು. ಯಾರು ನಿಜವಾಗಿ ಕಂಡುಹಿಡಿದಿದ್ದಾರೆ ಅವರ ಬಾಯಿಯನ್ನು ಮುಚ್ಚಿಸಿದ್ದಾರೆ. ಯಾರು ಮಜರೈಸ್ ಮಾಡಿದ್ದಾರೆ, ಯಾರು ಕಂಡುಹಿಡಿದಿರುವುದನ್ನೂ ಬೇರೆಯವರು ತೆಗೆದುಕೊಂಡಿದ್ದಾರೆ ಮತ್ತು ಅವರಿಗೆ ಪ್ರಚಾರಸಿಕ್ಕಿದೆ. ಇದು ಬಹಳ ದುರ್ದೈವದ ಸಂಗತಿ. ಸರ್ಕಾರ ಯಾರು ಸುತ್ತಮುತ್ತ ಓಡಾಡುತ್ತಾರೆ , ಅವರನ್ನು ಟ್ಯಾಂಪರ್ ಮಾಡತಕ್ಕದ್ದು ಅಲ್ಲ. ನಿಜವಾಗಿ ಯಾರು ಮಾಡಿದ್ದಾರೆ ಅವರನ್ನು ಗುರುತಿಸಿ, ಎಲ್ಲಿ ಅನಾಹುತವಾಗಿದೆಯೆಂದು ಹೇಳಿ ಕ್ರಮ ತೆಗೆದುಕೊಳ್ಳಬೇಕು. ಇನ್ನು ಮುಂದೆ ಪ್ಯಾಕೇಜ್ ಆಫ್ ಪ್ರಾಕ್ಟೀಸ್‌ನಲ್ಲಿ ಏನು ಒಪ್ಪಿಗೆಯಿಂದ ಅದನ್ನು ಬಿಡುಗಡೆ ಮಾಡಬೇಕು. ಸರ್ಕಾರದವರೇ ಒಂದು ಆಂದೋಳನ ರೀತಿಯಲ್ಲಿಇದನ್ನು ತೆಗೆದುಕೊಳ್ಳಬೇಕು. ಏಕೆಂದರೆ ಖಾಸಗಿ ಸಂಸ್ಥೆಯವರು ಕಂಡುಹಿಡಿದಿರತಕ್ಕದ್ದು ಇವತ್ತು ಖಾಸಗಿಯವರು ಉಪಯೋಗಿಸುತ್ತಿದ್ದಾರೆ, ಬೇರೆ ಖಾಸಗಿಯವರು ತೆಗೆದುಕೊಂಡು ಹೋಗುತ್ತಿದ್ದಾರೆ. ಆದರೆ ಸರ್ಕಾರ ಇನ್ನೂ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅದನ್ನು ಇವತ್ತು ಮಾಡಬೇಕೆಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಮಾನ್ಯ ಕೃಷಿ ಸಚಿವರು ಇದ್ದಾರೆ, ಕಡತ ತರಿಸಿ ಕೂಲಂಕುಷವಾಗಿ ನೋಡಬೇಕು. ಮಾನ್ಯ ಕೃಷಿಸಚಿವರು, ಪ್ರೊಚಾನ್ಸಲರ್ ಇದ್ದಾರೆ. ಇಲ್ಲಿ ವಿಜ್ಞಾನಿಗಳು ಯಾರು ಕಣ್ಣುಮುಚ್ಚಾಲೆಯಾಡಿದ್ದಾರೆ ಎಂಬುದನ್ನು ಅವರು ಕಡತ ತರಿಸಿ ನೋಡಲಿ. ವೈಸ್‌ಚಾನ್ಸಲರ್‌ನ್ನು ಕರೆಸಿ. ಯಾರು ನಿಜವಾಗಿ ಯಾರನ್ನು ಹತ್ತಿಕ್ಕಿದ್ದಾರೆ, ಯಾರು ಸುಳ್ಳು ಪ್ರಚಾರ ಮಾಡಿಕೊಂಡು ಹೊರಟಿದ್ದಾರೆ ಮತ್ತು ಯಾರು ಏತಕ್ಕೋಸ್ಕರ ಕೋರ್ಟಿಗೆ ಹೋಗಿದ್ದಾರೆ ಇದಕ್ಕೆ ಕಾರಣವೇನು? ಇದರ ಬಗ್ಗೆ ಸಮಗ್ರವಾಗಿ ತಾವು ತನಿಖೆಯನ್ನು ನಡೆಸಬೇಕು. ಕೋರ್ಟಿನಲ್ಲಿ ಆಗಿರುವುದನ್ನು ತೆಗೆಸಬೇಕು. ಸರಿಯಾದ ರೀತಿಯಲ್ಲಿ ಈ ಪೀಡೆಯನ್ನು ತಡೆಗಟ್ಟುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಇದು ವರೆಗೆ ಸರ್ಕಾರ ಇದರಲ್ಲಿ ವಿಫಲವಾಗಿದೆ. ಇನ್ನುಮುಂದೆಯಾದರೂ ಇದನ್ನು ಸರಿಪಡಿಸಬೇಕು ಎಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ಈಗ ಏನಾಗಿದೆ ಎಂದರೆ ಇವತ್ತು ಈ ವಿಧಾನವನ್ನು ಕರ್ನಾಟಕದಲ್ಲಿ ಮಲ್ಯ ಇನ್ಸ್ಟಿಟ್ಯೂಟನವರು ಕಂಡುಹಿಡಿದಿರತಕ್ಕದ್ದು. ಅಸಿಸ್ಟೆಂಟ್ ಪ್ರೊಫೆಸರ್ ಅರಸೀಕೆರೆಯಲ್ಲಿರತಕ್ಕವರು ಇದನ್ನುಕಂಡುಹಿಡಿದಿದ್ದಾರೆ. ಆದರೆ ಅವರು ಕಂಡುಹಿಡಿದುರುವುದನ್ನು ಹೊರಗಡೆ ಹೇಳುವುದಕ್ಕೆ ಬಿಡುತ್ತಿಲ್ಲ. ಇದನ್ನು ನಾವು ತೆಗೆದುಕೊಂಡರೆ ನಮ್ಮ ರಾಜ್ಯ ಹೆಸರು ತೆಗೆದುಕೊಳ್ಳಬಹುದು. ಕೇರಳದವರಿಗೆ ಈ ಒಂದು ವಿಧಾನವನ್ನುನಾವು ಕೊಡಬಹುದು. ದಕ್ಷಿಣದ ಈ ಮೂರು ರಾಜ್ಯಗಳಲ್ಲಿ ಶೇಕಡಾ 85ರಷ್ಟು ಈ ತೆಂಗಿನ ಉತ್ಪಾದನೆಯಾಗುತ್ತಿದ್ದು ಕಾಡುವ ಈ ರೋಗವನ್ನು ತಡೆಗಟ್ಟಬಹುದು. ಇಲ್ಲದಿದ್ದರೆ ಇನ್ನು ಬರತಕ್ಕಂಥ ದಿವಸಗಳಲ್ಲಿ ಈ ತೆಂಗು ಬೆಳೆಗಾರರು ಸರ್ವನಾಶವಾಗುತ್ತಾರೆ. ಅದಕ್ಕೆ ಈ ಮೂರು ರಾಜ್ಯದವರನ್ನೂ ಕರೆಸಿ. ಅಲ್ಲಿನ ವಿಜ್ಞಾನಿಗಳು, ಇಲ್ಲಿಯ ವಿಜ್ಞಾನಿಗಳು ಎಲ್ಲರೂ ಸೇರಿ ತೀವ್ರಗತಿಯಿಂದ ಒಂದು ಕಾರ್ಯಕ್ರಮವನ್ನು ಮಾಡಬೇಕು. ಇಲ್ಲದಿದ್ದರೆ ಇದು ಒಂದು ಕಡೆ ತಡೆಮಾಡಿದರೆ ಇನ್ನೊಂದು ಕಡೆ ಹಬ್ಬುತ್ತದೆ. ಮಳೆಗಾಲ ಬಂದರೆ ಮತ್ತೆ ಇದು ಜಾಸ್ತಿಯಾಗುತ್ತದೆ. ಆದ್ದರಿಂದ ತಕ್ಷಣ ಈ ಬಗ್ಗೆ ಕಾರ್ಯೋನ್ಮುಖರಾಗಬೇಕು. ಆ ರೀತಿಮಾಡಬೇಕೆಂದು ಆಗ್ರಹಪೂರ್ವಕವಾಗಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಉಪಾಧ್ಯಕ್ಷರೇ, ಈ ತೆಂಗು ಬೆಳೆಗೆ ನುಸಿ ರೋಗ ಬಂದಿರತಕ್ಕದ್ದು ಕಳೆದ ಸುಮಾರು ಹತ್ತು ವರ್ಷಗಳಿಂದ ಇದೆ. ಕಳೆದ ಎರಡು ವರ್ಷಗಳಿಂದ ಇದು ಬಹಳಷ್ಟು ಜಾಸ್ತಿಯಾಗಿ ರೈತರು ಕಣ್ಣೀರು ಹಾಕತಕ್ಕಂಥ ಪರಿಸ್ಥಿತಿ ಬಂದಿದೆ. ಈ ನುಸಿರೋಗ ಹೊಸದಾಗಿ ಬಂದಿರತಕ್ಕದ್ದು ಏನೂ ಅಲ್ಲ. ಇದು ಯಾವಾಗ ಬರುತ್ತದೆ, ಯಾವಾಗ ಬರುವುದಿಲ್ಲ ಎನ್ನತಕ್ಕದ್ದು ಸಂಶೋಧನೆ ಆಗಬೇಕಾಗಿರತಕ್ಕಂಥ ವಿಷಯ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇವತ್ತು ನುಸಿರೋಗ ಸುಮಾರು 3 ಲಕ್ಷ 65 ಸಾವಿರ 875 ಮರಗಳಿಗೆ ಅಟ್ಯಾಕ್ ಆಗಿದೆ. ಪ್ರತಿ ಏಳು ದಿವಸಕ್ಕೆ ಒಂದು ಸಲ ಇದು ಡಬಲ್ಆಗಿ ಇನ್ನೂ ಬೇರೆ ಬೇರೆ ಮರಗಳಿಗೆ ಇದು ಹರಡತಕ್ಕಂಥಾದ್ದು ಇದೆ. ಈಗ ಸುಮಾರು ಎರಡು ತಿಂಗಳ ಹಿಂದೆ ಮೂರು ಲಕ್ಷ ಅರವತ್ತೈದು ಸಾವಿರ ಮರಗಳಿಗೆ ಅಟ್ಯಾಕ್ ಆಗಿದೆ. ಒಟ್ಟು ಈಗ ಹತ್ತರಿಂದ ಹದಿನೈದು ಲಕ್ಷ ಮರಗಳಿಗೆ ಇವತ್ತಿನ ದಿವಸ ಅಟ್ಯಾಕ್ ಆಗಿದೆ. ಇದರಲ್ಲಿ ಸ್ವಲ್ಪ ಇತಿಹಾಸ ಇದೆ. ಈ ಮರಗಳಿಗೆ ನಾವು ಔಷಧಿಯನ್ನು ಕೊಡತಕ್ಕದ್ದು ಸುಮಾರು ಹತ್ತು ವರ್ಷಗಳಿಂದ ಮಾಡುತ್ತಿದ್ದೇವೆ. ಮೊದಲು ಕಪ್ಪುತಲೆಹುಳ ಎನ್ನತಕ್ಕದ್ದು 1990-91ನೇ ಇಸವಿಯಲ್ಲಿ ಪ್ರಾರಂಭವಾಯಿತ್ತು. ಆಗ ನಾವು ವಿಧಾನಪರಿಷತ್ತಿನಲ್ಲಿ ಇದ್ದಾಗ ಬಹಳಷ್ಟು ಇದರ ಬಗ್ಗೆ ಚರ್ಚೆ ಮಾಡಿದ್ದೆವು. ಇದಕ್ಕೆ ನೋವೋಕ್ರಾನ್‌ನ್ನು ಬೇರು ಮೂಲಕ ಕಟ್ಟಬೇಕು ಎನ್ನುವ ಆದೇಶವನ್ನು ಕೊಟ್ಟರು. ಆ ಹತ್ತು ವರ್ಷಗಳಿಂದ ಸಹಿತ ಪ್ರತಿವರ್ಷ ಎರಡುಸಾರಿ ಬೇರು ಮೂಲಕ ನೋವೋಕ್ರಾನನ್ನು ಕೊಡುತ್ತಿದ್ದೇವೆ. ಆದರೆ ಇವತ್ತು ಯಾವುದಕ್ಕೆ ಕಪ್ಪುತಲೆ ಹುಳ ಅಟ್ಯಾಕ್ ಆಗಿದೆ ಅದೆಲ್ಲ ತೆಂಗಿನ ಮರಗಳು ಸಹಿತ ವಿಷಭರಿತ ಆಗಿಬಿಟ್ಟಿವೆ. ಇವತ್ತು ಏನು ನೀವು ಹೊಸದಾಗಿ ಔಷಧಿಯನ್ನು ಬೇರು ಮೂಲಕ ಕೊಡಬೇಕೆಂದು ಹೇಳುತ್ತಿದ್ದೀರಿ ಮೊನೊಪ್ರೊಟೋಫಾಸ್ -ಇದರಿಂದ ಏನೂ ಉಪಯೋಗ ಆಗುವುದಿಲ್ಲ. ಏಕೆಂದರೆ ತೆಂಗಿನ ಮರಗಳು ಇವತ್ತು ವಿಷಭರಿತ ವೃಕ್ಷವಾಗಿಬಿಟ್ಟಿವೆ. ಎಷ್ಟು ಔಷಧಿಯನ್ನು ಕೊಟ್ಟರೂ ಕೂಡ ವಿಷ ಕೆಳಗೆ ಬಾರ ದಿರ ತಕ್ಕಂಥ ವಾತಾವರಣ ನಿರ್ಮಾಣವಾಗಿದೆ. ಸೀಮಾರೇಖೆಯನ್ನು ಮೀರಿತಕ್ಕಂಥ ಒಂದು ವಾತಾವರಣ ನಿರ್ಮಾಣವಾಗಿರುವುದನ್ನು ಇವತ್ತು ಸರ್ಕಾರ ಅರಿಯಬೇಕಾಗಿದೆ. ಇದಾದಮೇಲೆ ಮಾನ್ಯ ಸೋಮಶೇಖರ್ ಅವರು ಹೇಳಿದ ರೀತಿಯಲ್ಲಿ ಕಾಂಡದ ಮೂಲಕ ಔಷಧಿಯನ್ನು ಕೊಡತಕ್ಕದ್ದು, ಇದು ವಿಪರೀತಕ್ಕೆ ಹೋಯಿತು. ಕಾಂಡದ ಮೂಲಕ ಔಷಧಿಯನ್ನು ಮರಕ್ಕೆ ಕೊಟ್ಟರೆ ಎಲ್ಲಿ ಔಷಧಿಯನ್ನು ಕೊಡುತ್ತಾರೆ, ಆ ಭಾಗ ಪೂರ್ತಿ ಕೊಳೆತು ತೆಂಗಿನ ರಸ ಹೊರಬರುವುದನ್ನು ನಾವು ಕಾಣುತ್ತಿದ್ದೇವೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಒಂದು ರೋಗಕ್ಕೆ ಔಷಧಿಯನ್ನು ಕೊಟ್ಟರೆ ಇನ್ನೊಂದು ರೋಗ ಅದಕ್ಕೆ ತಗುತ್ತದೆ. ಬೇರಿನ ಮೂಲಕ ಔಷಧಿಯನ್ನು ಕೊಟ್ಟಂಥ ಸಂದರ್ಭದಲ್ಲಿ ಸುತ್ತ ಇರುವ ಬೇರುಗಳು ಸಾಯತಕ್ಕಂಥಾದ್ದು ಇದೆ. ಕಾಂಡದ ಮೂಲಕ ಔಷಧಿಯನ್ನು ಕೊಟ್ಟರೆ ಕಾಂಡದ ಸುತ್ತ ಕೊಳೆತು ಕಾಂಡದ ಮೂಲಕ ಮರದ ರಸ ಬಂದು ತೆಂಗಿನ ಗಿಡ ಸಾಯತಕ್ಕದ್ದು ನಾವು ಇವತ್ತು ನೋಡುತ್ತಿದ್ದೇವೆ. ಈ ಎರಡು ಹಂತಗಳಲ್ಲೂ ಸಹಿತ ಫಲಪ್ರದವಾಗಿಲ್ಲ ಎನ್ನತಕ್ಕದ್ದನ್ನು ಸರ್ಕಾರ ಮತ್ತು ತಜ್ಞರು ಅರಿತು ಒಂದು ಪರೋಪ ಜೀವಿಯನ್ನು ಬಿಡಬೇಕು. ಇದು ಕಪ್ಪುತಲೆಹುಳಕ್ಕೆ ಮಾತ್ರನಾನು ಹೇಳುತ್ತಾ ಇರತಕ್ಕದು. ಕೇರಳದ ತಜ್ಞರು ಹೇಳುವ ರೀತಿಯಲ್ಲಿ ವೀಪಾಸ್ಟೇಜ್‌ನಲ್ಲಿ ಇದ್ದಂಥ ಸಂದರ್ಭದಲ್ಲಿ ತೆಂಗಿನಗಿಡಕ್ಕೆ ಆ ಒಂದು ಪರೋಪ ಜೀವಿಯನ್ನು ಬಿಡತಕ್ಕಂಥ ಕಾರ್ಯಕ್ರಮ ಹಮ್ಮಿಕೊಂಡ ಮೇಲೆ ಪೀಡೆ ಸ್ವಲ್ಪ ಕಡಿಮೆಯಾಗುತ್ತ ಬಂದಿದೆ. ಕಳೆದ ಒಂದು -ಒಂದೂವರೆ ವರ್ಷದಿಂದ ಈ ನುಸಿರೋಗ ಮತ್ತೆ

ತೆಂಗಿನ

ಮರಕ್ಕೆ ಪ್ರಭಾವ ಬೀರತಕ್ಕದ್ದು ಹೆಚ್ಚಾಗಿದೆ. ಈ ನುಸಿರೋಗ ನೂರಾರು ವರ್ಷಗಳಿಂದ ಇರತಕ್ಕಂಥ ಬಾಧೆ. ಕಳೆದು ಎರಡು ವರ್ಷಗಳಿಂದ ಏಕೆ ಜಾಸ್ತಿಯಾಗಿದೆ ಎಂಬುದು ಇವತ್ತು ಸಂಶೋಧನೆ ಆಗಬೇಕಾದ ವಿಷಯ. ಇವತ್ತು ನಮ್ಮ ಜಿಲ್ಲೆಗೆ 21 ಲಕ್ಷ 45 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ನಾವು ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿದ್ದೇವೆ. ಯಾರು ತೆಂಗಿನ ಮರಕ್ಕೆ ಔಷಧಿಯನ್ನು ಕೊಡುತ್ತಾರೆ ಪಕ್ಕದಲ್ಲಿರುವ ತೋಟದಲ್ಲಿಯೂ ಕೊಡದೇಹೋದರೆ ಔಷಧಿಯ ಪ್ರಭಾವ ಇದ್ದರೂ ಸಹಿತ ಅದು ಬರೇ ನಲ್ವತ್ತು ದಿವಸಗಳು ಮಾತ್ರ ಇರುತ್ತದೆ. ಈ ಪ್ರಭಾವ ಇಳಿದ ಮೇಲೆ ಪಕ್ಕದಲ್ಲಿರತಕ್ಕಂಥ ನುಸಿರೋಗ ಮತ್ತೆ ಈ ತೆಂಗಿನ ಮರಕ್ಕೆ ಬಂದು ಯಾವುದೇ ರೀತಿಯ ಅನುಕೂಲ ಕಾಣುತ್ತಿಲ್ಲ. ಈ ರೋಗ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಬಹಳ ಹೆಚ್ಚಿನ ಪ್ರಮಾಣದಲ್ಲಿ ತೆಂಗಿನ ಮರಕ್ಕೆ ಬಂದು ಪುನಃ ಫೆಬ್ರವರಿ-ಮಾರ್ಚ್‌ನಲ್ಲಿ ಏಕೆ ಈ ರೋಗ ಹರಡುತ್ತಾ ಇಲ್ಲ ಎನ್ನತಕ್ಕಂಥಾದ್ದು ಮುಖ್ಯವಾದ ಪ್ರಶ್ನೆ. ಈಗ ಮಾನ್ಯ ಸೋಮಶೇಖರ್ ಅವರು ಇದು ಮಳೆಗಾಲದಲ್ಲಿ ಜಾಸ್ತಿಯಾಗಿದೆ ಎಂದು ಹೇಳಿದರು ಇಲ್ಲ. ಇದು ಮಳೆಗಾಲದಲ್ಲಿ ಪೂರ್ಣಮಟ್ಟದಲ್ಲಿ ಕಡಿಮೆಯಾಗುತ್ತದೆ. ಆದರೆ ಬೇಸಿಗೆ ಕಾಲದಲ್ಲಿ ಈ ಕಪ್ಪುತಲೆಹುಳು ಮತ್ತು ನುಸಿರೋಗ ಜಾಸ್ತಿಯಾಗುವುದನ್ನು ನಾವು ಕಾಣುತ್ತಿದ್ದೇವೆ. ಈ ರೀತಿಯಾಗಿ ಈ ಎರಡು ವಿಷಯಗಳನ್ನು ಗಮನಿಸಬೇಕಾಗುತ್ತದೆ. ನುಸಿರೋಗಕ್ಕೆ ಎರಡು ಹಂತದಲ್ಲಿ ಔಷಧಿಯನ್ನು ನಾವು ಕೊಡಬೇಕು. ಮೊದಲನೇ ಹಂತದಲ್ಲಿ ಬೇರಿನ ಮೂಲಕ ಮೊನೋಫ್ರೋಟೋಫಾಸನ್ನು ಕೊಡಬೇಕು. ಎರಡನೇ ಹಂತದಲ್ಲಿ ಡೈಕೋಫಾಲ್‌ನ್ನು ಸ್ಪ್ರೇ ಮಾಡಬೇಕು. ಒಂದನೇ ಹಂತದ ಕ್ರಮವನ್ನು ಈಗ ಮುಗಿಸಲಾಗಿದೆ. ಬೇರಿನ ಮೂಲಕ ಔಷಧಿಯನ್ನು ತೆಂಗಿನ ಮರಕ್ಕೆ ಕೊಡತಕ್ಕದ್ದು ಒಂದನೇ ಹಂತದ ಮುಗಿದುಹೋಗಿದೆ. ಎರಡನೇ ಹಂತದ ಕಾರ್ಯಕ್ರಮವನ್ನು ಈಗ ಹಮ್ಮಿಕೊಳ್ಳಬೇಕಾಗಿದೆ. ಆದಾದ ಹದಿನೈದು-ಇಪ್ಪತ್ತು ದಿವಸಕ್ಕೆ ಆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇವತ್ತು 40- 50 ಅಡಿ ಎತ್ತರದ ತೆಂಗಿನ ಮರಗಳು ಇವೆ, ಆ ತೆಂಗಿನಮರಕ್ಕೆ ಡೈಕೋಫಾಲ್‌ನ್ನು ಸಿಂಪರಣೆ ಮಾಡಬೇಕಾದದ್ದು ಸಾಧ್ಯವೇ ಎನ್ನುವುದು ಈಗ ಚರ್ಚೆ ಮಾಡಬೇಕಾದ ವಿಷಯ. ತಜ್ಞರು ಇದರ ಬಗ್ಗೆ ಸಂಶೋಧನೆ ಮಾಡಬೇಕು. 40 ಅಡಿ ಇರುವ ಮರಕ್ಕೆ ಎಲ್ಲಿಂದ ನಾವು ಸ್ಪ್ರೇ ಮಾಡುವುದಕ್ಕೆ ಸಾಧ್ಯ ? ಸರ್ಕಾರದ ಹಣ ಇಲ್ಲಿ ದುರುಪಯೋಗವಾಗುತ್ತಿದೆ. ಸರ್ಕಾರ ಈಗ ಹಣ ಕೊಡುತ್ತಿದೆ, ಔಷಧಿಯನ್ನು ಕೊಡುತ್ತಿದೆ ಮತ್ತು ಔಷಧಿಯನ್ನು ಸ್ಪ್ರೇ ಮಾಡಿದ್ದೇವೆ. ಕಳೆದ ಹತ್ತು ವರ್ಷಗಳಿಂದ ನಾನು ನೋಡುತ್ತ ಬಂದಿದ್ದೇನೆ. ಮೊದಲಬಾರಿಗೆ ಸರ್ಕಾರ ಈಗ ಒಳ್ಳೆಯ ಔಷಧಿ ಕೊಟ್ಟಿದೆ. ಹಿಂದೆ ಕೊಟ್ಟಿರತಕ್ಕಂಥಾದ್ದೆಲ್ಲ ಔಷಧಿಯನ್ನು ನಾನು ತೆಂಗಿನ ತೋಟದಲ್ಲಿ ಪ್ರಯೋಗ ಮಾಡಿದ್ದೇನೆ. ಆದರೆ ಯಾವುದೇ ಔಷಧಿಗಳು ಸರಿಯಾಗಿ ಕೆಲಸ ನಿರ್ವಹಣೆ ಮಾಡಿಲ್ಲ. ಪ್ರಥಮಬಾರಿಗೆ ಕೊಟ್ಟಿರತಕ್ಕಂಥ ಔಷಧಿ ಈಗ ಕೆಲಸ ಮಾಡುತ್ತಿದೆ. ಆದರೆ ಸಿಂಪರಣೆ ಮಾಡಬೇಕು ಎನ್ನತಕ್ಕಂಥಾದ್ದು ಏನಿದೆ . . .

ಶ್ರೀ ಕೆ.ಎಚ್.ರಂಗನಾಥ್ : ನಾನು ಕೂಡ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಬಗ್ಗೆ ಎರಡು ತಿಂಗಳ ಹಿಂದೆ ಪ್ರಸ್ತಾಪ ಮಾಡಿದ್ದೆ. ಅದು ರೀಸರ್ಚ್ ಆದಹಾಗೆ ಕಾಣಲಿಲ್ಲ. ಕೆಲವು ರೈತರು ಏನು ಹೇಳುತ್ತಿದ್ದಾರೆ ಎಂದರೆ ಬೇವಿನ ಹಿಂಡಿಯನ್ನು ನಾವು ಗೊಬ್ಬರವಾಗಿ ಪ್ರತಿವರ್ಷ ಬಿಡದೆ ಬಳಸಿದರೆ ಇದು ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ನನಗೆ ಇನ್ನೂರು - ಮುನ್ನೂರು ತೆಂಗಿನ ಮರಗಳ ತೋಟ ಇದೆ. ಬೇವಿನ ಹಿಂಡಿಯನ್ನು ನಾನು ಉಪಯೋಗ ಮಾಡಿದ್ದು ಈ ವರ್ಷ ನಮಗೆ

ತೊಂದರೆಯಾಗಿಲ್ಲ. ನನಗೇನೂ ಬಂದಿಲ್ಲ ಎಂದು ಕೆಲವರು ಹೇಳುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳಿಗೆ ಮತ್ತು ಸಮಗೆಲ್ಲರಿಗೂ ಕೂಡ ಸರಿಯಾದ ದಿಕ್ಕಿನಲ್ಲಿ ತಿಳುವಳಿಕೆ ದೊರೆತಿಲ್ಲ. ಕೃಷಿ ವಿಶ್ವ ವಿದ್ಯಾ ನಿಲಯದ ಲ್ಲಿ ಇದಕ್ಕೆ ಸರಿಯಾದ ಸಂಶೋಧನೆ ಆಗದ ಹೊರತು ನಮಗೆ ಪರಿಹಾರ ಸಿಕ್ಕಿದಹಾಗೆ ಕಾಣುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸದಸ್ಯರು ಸರ್ಕಾರದಿಂದ ಕೊಡತಕ್ಕಂಥ ಮಾನೊಕ್ರೋಟೊಫಾಸ್ ಇರಬಹುದು ಅಥವಾ ಡೈಕೊಪಾಲ್ ಇರಬಹುದು. ಅದು ಗುಣಮಟ್ಟದ್ದು ಎನ್ನತಕ್ಕಂಥ ಪ್ರಶಂಸೆಯನ್ನು ಮಾಡಿ ಹೇಳಿದ್ದಾರೆ. ಬಹಳ ಸಂತೋಷ ನಾನು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ನಾವು ಏನೇನು ಎಚ್ಚರಿಕೆ ಕಾರ್ಯಕ್ರಮ ಹಾಕಿದ್ದೇವೆಂಬುದನ್ನು ಸರ್ಕಾರದ ಪರವಾಗಿ ಹೇಳುತ್ತೇನೆ. ನಾವು ಕೊಡತಕ್ಕಂತಾದ್ದು ಕೇವಲ ಮೆಡಿಸಿನ್ಸ್‌ಗೆ ಮಾತ್ರ. ಅದು ಡೈಕೋಡಾಲ್ ಇರಬಹುದು, ಮಾನೋಕ್ರೋಟೊಫಾಸ್ ಇರಬಹುದು. ಆದರೆ, ನಾವು ಮೇಲೆ ಹತ್ತಿ ಹೋಗುವುದಕ್ಕೆ ಲೇಬರ್ ಚಾರ್ಜಸ್‌ನ್ನು ಕೊಡಾತ್ತಾ ಇಲ್ಲ. ಹಣ ದುರುಪಯೋಗವಾಗುತ್ತದೆಂದು ತಾವು ಹೇಳಿದ್ದೀರಿ. ಇಲ್ಲಿಹಣ ದುರುಪಯೋಗವಾಗುತ್ತದೆಂದು ತಾವು ಹೇಳಿದ್ದೀರಿ. ಇಲ್ಲಿ ಹಣ ದುರುಪಯೋಗವಾಗುವುದಕ್ಕೆ ಅವಕಾಶವೇ ಇಲ್ಲ. ನಾವು ಕೊಡತಕ್ಕಂತಾದ್ದು ರೈತರ ಪಾರ್ಟಿಸಿಪೇಷನ್‌ನಿಂದ ಮಾತ್ರ, ಅವರ ಚಾಯ್ಸ್ ಪ್ರಕಾರ ನಾವು ಕೊಡುತ್ತಾ ಇದ್ದೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮೊದಲಿನ ಹಂತದ ಕಾರ್ಯಕ್ರಮ, ಬೇರಿನ ಮೂಲಕ ಔಷಧಿಕೊಡ ತಕ್ಕಂತಾದ್ದು, ಇದು ಎಲ್ಲಾ ರೈತರಿಗೂ ಸಾಧ್ಯವಿದೆ. ಈ ಕೆಲಸವನ್ನು ಮಾಡುತ್ತಾ ಇದ್ದಾರೆ. ಸರ್ಕಾರ ಈಗ ಸಿಂಪರಣೆ ಮಾಡಬೇಕೆಂದು ಇದೆ. 40-50 ಅಡಿ ಎತ್ತರಕ್ಕೆ ನಾವು ಸಿಂಪರಣೆಯನ್ನು ಮಾಡಬೇಕಾಗುತ್ತದೆ. ರೈತರುಗಳಿಗೆ ನಾವು ಔಷಧಿಯನ್ನು ಕೊಡುತ್ತೇವೆ. ಯಾವ ಮೂಲಕ ಮಾಡಲಿಕ್ಕೆ ಸಾಧ್ಯ ಎಂಬುದನ್ನು ಇವತ್ತು ಚಿಂತನೆ ಮಾಡಬೇಕಾಗಿದೆ. ನನ್ನ ಜಿಲ್ಲೆಯಲ್ಲಿ ಇದಕ್ಕೆ ಸುಮಾರು 19 ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇದೆ. 2 ಲಕ್ಷ 45 ಸಾವಿರ ರೂಪಾಯಿ ಬೇರೆ ರೀತಿಯಿಂದ ಕೊಡತಕ್ಕ ಔಷಧಿಗೆ ಖರ್ಚಾ ಗುತ್ತಿದೆ. ಇನ್ನು ಸಿಂಪರಣೆಯನ್ನು ಎರಡು ಹಂತದಲ್ಲಿ ಮಾಡಬೇಕಾಗಿದೆ. ಆ ಎರಡು ಹಂತಕ್ಕೆ 19ಲಕ್ಷ ರೂಪಾಯಿಗಳು ಖರ್ಚಾಗುತ್ತದೆ ಹಿಂದೆ ಕೆಂಪುತಲೆ ಹುಳ ಎಂಬುದು ನೆಲಗಡಲೆ ಬೆಳೆಗೂ ಬಂತು. ಇದಕ್ಕೆ ಹಿಂದಿನ ಎಲ್ಲಾ ಸರ್ಕಾರಗಳು ಔಷಧಿಯನ್ನು ಕೊಟ್ಟರು. ಇದೆಲ್ಲವೂ ಸಹಿತ ಬೇರೆ ಬೇರೆ ಕಾಫಿ ತೋಟಗಳವರಿಗೆ ಮಾರಿಕೊಂಡ ಉದಾಹರಣೆಗಳು ಇವೆ. ಹೀಗೆ ಸಬ್ಸಿಡಿ ರೇಟಿನಲ್ಲಿರತಕ್ಕ ವಸ್ತುಗಳು ನಾಳೆ ಏನಾದರೂ ದುರುಪಯೋಗ ಆಗಬಹುದು ಎಂಬ ಮಾತನ್ನು ಹೇಳುತ್ತಾ ಇದ್ದೆ. ಏಕೆಂದರೆ, ಸಲಕರಣೆ ಇಲ್ಲದೇ ಹೋದರೆ ಅವರು ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಸುಮ್ಮನೆ ನಾವು ಹಣವನ್ನು ಖರ್ಚು ಮಾಡಿದ್ದೇವೆಂಬುದನ್ನು ತೋರಿಸಬೇಕಾಗುತ್ತದೆ. ಸಿಂಪರಣೆಯನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ತೋಟಗಾರಿಕಾ ಸಚಿವರು ಮೊನ್ನೆ ಕೆಮ್ಮಣ್ಣುಗುಂಡಿಗೆ ಬಂದಿದ್ದರು. ತಮಿಳುನಾಡಿನಲ್ಲಿ 40-50 ಅಡಿ ಎತ್ತರಕ್ಕೆ ಹೋಗತಕ್ಕ ಸ್ಪ್ರೇಯರ್‌ಗಳನ್ನು ಅವರು ತಯಾರು ಮಾಡಿದ್ದರು. ಅದನ್ನು ಬರೆದು, ವಿಶ್ವವಿದ್ಯಾನಿಲಯಕ್ಕೆ ತರಿಸಿಕೊಂಡು, ಇಲ್ಲೊಂದುಸಾರಿ ಅದನ್ನು ಪ್ರದರ್ಶನ ಮಾಡಿ, ಅದು ಆಗುತ್ತದೋ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ. ಆ ನಿಟ್ಟಿನಲ್ಲಿ ನಾವು ಕೆಲಸ ಮಾಡಿದರೆ ಮಾತ್ರ, ಮೇಲಕ್ಕೆ ತೆಂಗಿನ ಗೊಂಚಲಿಗೆ ಹೋಗಿ ಔಷಧಿಯನ್ನು ಬಿಡಬಹುದು. ಇಲ್ಲದೇ ಹೋದರೆ. ಇನ್ನು ಯಾವುದೇ ರೀತಿಯಿಂದ ಉಪಯೋಗವಾಗುವುದಿಲ್ಲವೆಂದು

ನಾವು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕೋಸ್ಕರ ಆ ನಿಟ್ಟಿನಲ್ಲಿ, ಈ ಸ್ಪ್ರೇಯರ್‌ಗಳನ್ನು ತರಿಸಿ, ಆ ಸ್ಪ್ರೇಯರ್ ಮುಖಾಂತರತೆಂಗಿ ನ ಮರಗಳಿಗೆ ಆ ಗೊಂಚಲಿಗೆ ಔಷಧಿಯನ್ನು ಸಿಂಪರಣೆ ಮಾಡತಕ್ಕ ಕೆಲಸವನ್ನು ಮೊದಲು ಮಾಡಬೇಕಾಗುತ್ತದೆ. ಇಲ್ಲವಾದರೆ ನನ್ನ ಸ್ಪಷ್ಟ ಅಭಿಪ್ರಾಯ ಇದೆ, ಈಗ ಕೊಟ್ಟಿರತಕ್ಕ ಹಣವನ್ನು ವಾಪಸ್ ತೆಗೆದುಕೊಳ್ಳುವುದು ಸೂಕ್ತ. ಯಾರೂ ಸ್ಪ್ರೇ ಮಾಡಲಿಕ್ಕೆ ಆಗುವುದಿಲ್ಲ. ನಾನೂ ಒಬ್ಬ ರೈತ. ನನ್ನ ಕೈಲೂ ಆಗುವುದಿಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ : ಕೇರಳದಲ್ಲಿ ಈ ಔಷಧಿಗಳನ್ನು ಮೇಲೇರಿ ಇವತ್ತು ಸಿಂಪರಣೆ ಮಾಡುತ್ತಿದ್ದಾರೆ. ಅಲ್ಲಿ ಮಾಡುವುದಾದರೆ, ಇಲ್ಲಿ ನಮ್ಮ ಕೈಲಿ ಆಗುವುದಿಲ್ಲವೆಂದರೆ ಹೇಗೆ. ನಾವೂ ಮಾಡಬಹುದು. ಸರ್ಕಾರ ಯಾರನ್ನಾದರೂ ಕರೆದುಕೊಂಡು ಮಾಡುವುದಕ್ಕಾಗುತ್ತದೆಯೇ?

ಶ್ರೀ ಕೆ.ಬಿ.ಮಲ್ಲಿಕಾರ್ಜುನ : ಕೇರಳದಲ್ಲಿ ತೆಂಗಿನ ಮರಗಳನ್ನು ನೀವು ನೋಡಿಲ್ಲ. 10 ಅಡಿ, 5 ಅಡಿಗೊಂದು ತೆಂಗಿನ ಮರ ಇದೆ. ಒಂದು ತೆಂಗಿನ ಮರಕ್ಕೆ ಹತ್ತಿದರೆ, ಸುತ್ತ ಇರತಕ್ಕ 20 ತೆಂಗಿನ ಮರಗಳಿಗೆ ಅವನು ಸ್ಪ್ರೇ ಮಾಡಬಹುದು. ನಮ್ಮಲ್ಲಿ ಕನಿಷ್ಠ 30 ಅಡಿ ಅಂತರದಲ್ಲಿ ತೆಂಗಿನ ಮರಗಳು ಇವೆ. ಇದು 30 ಅಡಿ ಅಂತರಕ್ಕೆ ಹೋಗುವುದಿಲ್ಲ. ಆದ್ದರಿಂದ, ಅಲ್ಲಿರತಕ್ಕ ಟೆಕ್ನಾಲಜಿಗೂ, ಇಲ್ಲಿರತಕ್ಕಂಥ ಟೆಕ್ನಾಲಜಿಗೂ ವ್ಯತ್ಯಾಸ ಇದೆ. ಆ ಸ್ಪ್ರೇಯರುಗಳನ್ನು ನೀವೂ ತಂದು ಒಂದು ಸಾರಿ ಪ್ರದರ್ಶನ ಮಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಉಪಾಧ್ಯಕ್ಷರೇ, ತೆಂಗಿನ ಮರಗಳಿಗೆ 50 ಅಡಿ ಅಲ್ಲ, 100 ಅಡಿ ಹತ್ತಿ ರೈತರು ಔಷಧಿಯನ್ನು ಸಿಂಪರಣೆ ಮಾಡತಕ್ಕ ವ್ಯವಸ್ಥೆ ಇದೆ. ರೈತರಿಗೆ ಔಷಧಿ ಕೊಟ್ಟರೆ, ಅವರು ಈ ಕೆಲಸವನ್ನು ಮಾಡುತ್ತಾರೆ. ಏಕೆಂದರೆ, ಅವರು 50 ಅಡಿ ಅಲ್ಲ, 100 ಅಡಿ, 150 ಅಡಿ ಹತ್ತಿ ಹಾಕುತ್ತಾರೆ. ಅವರು ಬದುಕಬೇಕು ಎಂದಾಗ ರೈತರು ಹಾಕಿಯೇ ಹಾಕುತ್ತಾರೆ. ಸರ್ಕಾರದವರು ಔಷಧಿ ಕೊಡುವ ವ್ಯವಸ್ಥೆ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಅತ್ಯಂತ ಉತ್ತಮವಾಗಿ 12 ವಿಭಾಗ ಮಾಡಿ, ಕೆಲಸ ಮಾಡಿದ್ದಾರೆ. 50 ಅಡಿ ಹತ್ತುವುದಕ್ಕಾಗುವುದಿಲ್ಲ, ಔಷಧಿ ಕೊಟ್ಟರೆ ಸಾಯುತ್ತೇನೆ ಎಂಬುದಲ್ಲ. ಇವತ್ತು ಔಷಧಿ ಕೊಟ್ಟರೆ ರೈತರು ಹತ್ತಿ ಸಿಂಪರಣೆ ಮಾಡಿಯೇ ಮಾಡುತ್ತಾರೆ. ಇದಕ್ಕೆ ಏನೂ ಕಾಳಜಿ ಮಾಡಬೇಕಾಗಿಲ್ಲ. ಮಾನ್ಯ ಸದಸ್ಯರು ಹೇಳಿದರೀತಿ ಇಲ್ಲ. ನಾವು 50 ಅಡಿ ಅಲ್ಲ, 100 ಅಡಿ ಹತ್ತಿಸಿ ಔಷಧಿ ಹಾಕಿಸುತ್ತೇವೆ ದಯವಿಟ್ಟು ಅವರು ಬರಲಿ. ಅದಕ್ಕಾಗಿ ಆ ಚರ್ಚೆ ಬೇಕಿಲ್ಲ.

ಶ್ರೀ ವಿ. ಕೃಷ್ಣಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು 50 ಅಡಿ 100 ಅಡಿ ಹತ್ತುತ್ತಾರೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನಮ್ಮ ಬೆಂಗಳೂರು ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕಿನಲ್ಲೂ ತೆಂಗಿನ ಮರಗಳು ಇವೆ. ನಮ್ಮ ಸ್ನೇಹಿತರು ಹೇಳಿದಹಾಗೆ ಬುಡಕ್ಕೆ ಎಲ್ಲರೂ ಔಷಧಿಯನ್ನು ಹಾಕಿದ್ದೇವೆ. ಮೇಲೆ ಸಿಂಪಡಿಸುವುದಕ್ಕೆ ಯಾರ ಕೈಲಿಂದಲೂ ಸಾಧ್ಯವಾಗಿಲ್ಲ.

ಶ್ರೀ ಬಿ.ಆರ್. ನೀಲಕಂಠಪ್ಪ : ಸರ್ಕಾರದವರು ಔಷಧಿ ಕೊಟ್ಟರೆ, ರೈತರು ಆ ಕೆಲಸವನ್ನು ಮಾಡುತ್ತಾರೆ. ನಮ್ಮ ಕಡೆ ಸಾವಿರಾರು ತೆಂಗಿನ ಮರಗಳಿವೆ. ನಾವು ಮಾಡಿದ್ದೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : 50 ಅಡಿ ಎತ್ತರದ ಮರಗಳಿಗೆ ಯಾರಾದರೂ ಒಂದು ಅಥವಾ ಎರಡು ಮರಗಳಿಗೆ ಹತ್ತಿ ಸಂಪರಣೆ ಮಾಡಬಹುದು. ಆದರೆ, ಇದು ರೈತರಿಗೆ ಆಗದೇ ಇರತಕ್ಕ ಪರಿಸ್ಥಿತಿ

ಹೀಗಾಗಿ ಇವತ್ತು ತೆಂಗಿನ ಮರಗಳು ಪೂರ್ತಿ ವಿಷವಾಗಿರುವುದನ್ನು ನೋಡುತ್ತಿದ್ದೇವೆ. ಇದರಿಂದ ಆಗತಕ್ಕ ಹಾನಿ ಏನಾಗಿದೆ ಎಂದರೆ, ಆ ಸದನದಲ್ಲಿರತಕ್ಕ ಎಲ್ಲಾ ಸದಸ್ಯರೂ ನೋಡಿರಬಹುದು. ಯಾರೂ ಇವತ್ತು ರಸ್ತೆಯಲ್ಲಿ ಎಳನೀರನ್ನು ಕುಡಿಯುವುದಕ್ಕೆ ಪ್ರಯತ್ನ ಮಾಡುತ್ತಾ ಇಲ್ಲ. ಇವತ್ತಿನ ದಿವಸ ಎಳನೀರು ವಿಷ ಆಗಿದೆ, ಎಳನೀರನ್ನು ಕುಡಿಯಬಾರದು ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ನಮ್ಮಲ್ಲೇ ಬೇಸಿಗೆ ಕಾಲದಲ್ಲಿ 4 ರೂಪಾಯಿಗೆ ಎಳನೀರು ಹೋಗುತ್ತಾ ಇತ್ತು. ಆದರೆ, ಇವತ್ತಿನ ದಿವಸ ಒಂದೂವರೆ ರೂಪಾಯಿಗೆ ಎಳನೀರನ್ನು ಕೇಳುತ್ತಾ ಇಲ್ಲ. ರೈತ ಇವತ್ತಿನ ದಿವಸ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾನೆ. ಅದಾದ ಮೇಲೆ ಕಾಯಿಯೂ ಸಹಿತ, ಮುಂದಿನ ವರ್ಷದಲ್ಲಿ ಕರ್ನಾಟಕ ರಾಜ್ಯದಲ್ಲಿ ತೆಂಗಿನ ಕಾಯಿಗೂ ಬೆಲೆ ಬಂದಂಥ ವಾತಾವರಣ ಇದೆ. ಏಕೆಂದರೆ, ಎರಡು ವರ್ಷ, ಒಂದು ವರ್ಷಕ್ಕೆ ಇಳುವರಿ ಕಡಿಮೆ ಬಂದಿರುವುದು ಒಂದು ಬಂದಿರತಕ್ಕ ಇಳುವರಿಯಲ್ಲೂ ವಿಷವಾಗಿದೆ ಎಂಬ ಭಾವನೆ ಜನಗಳಲ್ಲಿ ಬಂದಿದೆ. ಹಾಗಾಗಿ ಈ ನಿಟ್ಟಿನಲ್ಲಿ ಈ ಔಷಧಿ ಕೊಡತಕ್ಕ ಸಂಧರ್ಬದಲ್ಲಿ ಆಸ್ಪ್ರೇಯರ್‌ಗಳನ್ನು ತರಿಸಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಸಿ. ಬೈರೇಗೌಡ : ನಾನು ಈ ಸ್ಪ್ರೇಯರ್‌ಗಳನ್ನು ಕೊಯಮತ್ತೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅದು ಇನ್ನೂ ಕೂಡ ಡೆವಲಪ್‌ಮೆಂಟ್ ಸ್ಟೇಜ್‌ನಲ್ಲಿದೆ. ಅದು ಕಮರ್ಷಿಯಲ್ ಪ್ರೊಡಕ್ಷನ್ ಆಗಿ ರೈತರ ಕೈಗೆ, ಸರ್ಕಾರದ ಕೈಗೆ ಬರತಕ್ಕಂಥ ಹಂತದಲ್ಲಿ ಇಲ್ಲ. ಅವರಿನ್ನೂ ಪ್ರಯತ್ನ ಮಾಡುತ್ತಿದ್ದಾರೆ. ಅವರು ಇತ್ತೀಚೆಗೆ ಅದನ್ನು ಪೂರ್ತಿಯಾಗಿ ಅಭಿವೃದಿ ಪಡಿಸಿದ್ದಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ. ನಾನು ಕೊಯಮತ್ತೂರಿಗೇ ಅಲ್ಲದೆ ಭೂಪಾಲ್‌ಗೂ ಕೂಡ ಹೋಗಿ ಹೇಳಿ ಬಂದಿದ್ದೇನೆ. ಈ ಸ್ಪ್ರೇಯರ್ ಅತಿ ಅವಶ್ಯಕವಾಗಿ ಬೇಕಾಗಿರ ತಕ್ಕಂತಾದ್ದು, ತೆಂಗು, ಅಡಿಕೆ ಮತ್ತು ಮಾವಿನ ಮರಗಳಿಗೆ ಸ್ಪ್ರೇ ಮಾಡಬೇಕಾಗಿದ್ದರೆ. ಸ್ಪ್ರೇ ಮಾಡತಕ್ಕಂತಾವರು ಕೈ, ಕಾಲು ತಪ್ಪಿ ಬಿದ್ದು ಸತ್ತಿರತಕ್ಕಂಥ ಉದಾಹರಣೆಗಳೂ ಕೂಡ ಇದೆ. ಆದ್ದರಿಂದ ಇದು ಅತಿ ಅವಶ್ಯಕವಾಗಿ ಆಗಬೇಕೆಂಬುದನ್ನು ಅಲ್ಲಿಯ ವಿಜ್ಞಾನಿಗಳನ್ನು ಭೇಟಿ ಮಾಡಿ ಹೇಳಿ ಬಂದಿದ್ದೇನೆ. ನಮ್ಮ ರಾಜ್ಯದವರೂ ಸಹ ಆ ಸಂಶೋಧನೆಯಲ್ಲಿ ಭಾಗವಹಿಸಿ, ಅವರಿಗೆ ಈ ಸಂಶೋಧನೆಗೆ ಏನಾದರೂ ಹಣ ಕೊಡಬೇಕಾಗಿದ್ದರೆ ಬಿಡುಗಡೆ ಮಾಡಿ, ಆ ಸ್ಪ್ರೇಯರ್‌ನ್ನು ಡೆವಲಪ್ ಮಾಡಬೇಕಾಗಿರುವುದು ಬಹಳ ಅವಶ್ಯಕತೆ ಇದೆ. ಇಲ್ಲದೇ ಇದ್ದರೆ, ತೆಂಗು, ಮಾವು, ಅಡಿಕೆ ಬೆಳೆ ಉಳಿಯುವುದಿಲ್ಲ. ಎತ್ತರ ಬೆಳೆದು ಫಲ ಬಿಡತಕ್ಕ ಮರಗಳು ಯಾವುವು ಇವೆ, ಅದು ಹಸಲು ಇರಬಹುದು ಅಥವಾ ಬೇರೆ ಯಾವುದೇ ಇರಬಹುದು. ಇಂತಹ ಮರಗಳಿಗೆ ಮುಂದೆ ಏನಾದರೂ ರೋಗ ಬಂದಾಗ ಸ್ಪ್ರೇ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈ ವಿಚಾರದಲ್ಲೂ ಕೂಡ ಅದರ ಬಗ್ಗೆ, ಅದನ್ನು ಡೆವಲಪ್ ಮಾಡುವುದಕ್ಕೆ ಏನೂದಾರೂ ಹಣ ಬೇಕಾಗಿದ್ದರೆ, ಬಿಡುಗಡೆ ಮಾಡಬೇಕು. ನಮ್ಮ ಕೃಷಿ ವಿಶ್ವವಿದ್ಯಾನಿಲಯದಲ್ಲಿಯೇ ಅಗ್ರಿಕಲ್ಚರಲ್ ಇಂಜನಿಯರಿಗ್ ವಿಂಗ್ ಇದೆ. ಅವರಿಗಾದರೂ ಹೇಳಿ, ಇದನ್ನು ಡೆವಲಪ್ ಮಾಡಬೇಕಾಗಿರುವುದು ಬಹಳ ಮುಖ್ಯ ಇರತಕ್ಕಂತಾದ್ದು. ಆದ್ದರಿಂದ, ಈ ಕೆಲಸವನ್ನು ಅತಿ ಜಾಗ್ರತೆಯಾಗಿ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೇ, ಈಗ ಸೀಮಿತವಾಗಿರತಕ್ಕ ವಿಷಯದಲ್ಲಿ ಚರ್ಚೆ. ಇದು ಹೊಸ ಪ್ರಯೋಗ. ಕರ್ನಾಟಕದಲ್ಲಿ ತೆಂಗಿನ ಮರಗಳಿಗೆ 50-60 ಅಡಿ ಮೇಲಕ್ಕೆ ಹೋಗಿ ಸ್ಪ್ರೇ ಮಾಡತಕ್ಕ ಪ್ರಮೇಯ ಪ್ರಾರಂಭವಾಗಿರುವುದು ಈಗ. ಇದರ ಬಗ್ಗೆ ಕೆಲವು ಶಾಸಕರುಗಳ ಅಭಿಪ್ರಾಯ ಏನೆಂದರೆ, ನೇರವಾಗಿ ರೈತರೂ ಕೂಡ ಇದರ ಪ್ರಯೋಗ ಮಾಡುತ್ತಿದ್ದಾರೆ ಎನ್ನತಕ್ಕಂತಾದ್ದು. ತಾವೇನು ಆತಂಕವನ್ನು ವ್ಯಕ್ತಪಡಿಸುತ್ತಿದ್ದೀರಿ, ನೂರಕ್ಕೆ ನೂರರಷ್ಟು ನಾನು ಅದನ್ನು ಒಪ್ಪುತ್ತೇನೆ. ಕೆಲವು ಕಡೆ,

ಉದಾಹರಣೆಗೆ ನಮ್ಮ ತುಮಕೂರು ಜಿಲ್ಲೆಯಲ್ಲಿ 50-60 ಅಡಿ ಹತ್ತತಕ್ಕ ಬೇಕಾದಷ್ಟು ಜನ ಇದ್ದಾರೆ. ಅವರು ಹತ್ತಿ ಸ್ಪ್ರೇ ಮಾಡುವುದು. ಹೇಗೆ ಮಾಡುತ್ತಾರೆಂದರೆ, ಒಂದು ಪೈಪನ್ನು ಕಟ್ಟಿಕೊಂಡು ಹತ್ತುತ್ತಾರೆ. ಇಲ್ಲಿಂದ ಪಂಪ್ ಮಾಡಿ ಪುನಃ ಸ್ಪ್ರೇ ಮಾಡತಕ್ಕಂತಾದ್ದು ನಡೆಯುತ್ತಾ ಇದೆ. ನೀವು ಹೇಳುವುದು ಹೊಸದಾಗಿ ಸ್ಪ್ರೇ ಮಾಡತಕ್ಕಂತಾದ್ದು, ಕೆಳಗೆ ಇಟ್ಟುಕೊಂಡು ಸ್ಪ್ರೇ ಮಾಡತಕ್ಕಂಥ ಸಂಶೋಧನೆ ಬಗ್ಗೆ ಸಲಹೆ ಕೊಟ್ಟಿದ್ದೀರಿ. ಅದು ಸರ್ಕಾರದ ಗಮನದಲ್ಲಿದೆ. ಅದರ ಬಗ್ಗೆ ಚಿಂತನೆ ಮಾಡೋಣ. ಉತ್ತರ ಕೊಡತಕ್ಕ ಸಂದರ್ಭದಲ್ಲಿ ಕೊಡೋಣ. ಕೇರಳದಲ್ಲಿ ಆ ರೀತಿಯಾದ ಸ್ಪ್ರೇಯರ್‌ಗಳನ್ನು ಟ್ರಾಕ್ಟರುಗಳಿಗೆ ಕಟ್ಟಿ ಸ್ಪ್ರೇ ಮಾಡತಕ್ಕಂತಾದ್ದನ್ನು ಮಾಡಿದ್ದಾರೆ. ಅದರ ಬಗ್ಗೆಯೂ ಕೂಡ ಮಾಹಿತಿಯನ್ನು ತರಿಸಿದ್ದೇವೆ, ಅದಕ್ಕೆ ಕಾರ್ಯಕ್ರಮವನ್ನು ಹಾಕುತ್ತಾ ಇದ್ದೇವೆ. ಇದರ ಬಗ್ಗೆ ನಾನು ಆಮೇಲೆ ಉತ್ತರ ಹೇಳುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಸ್ಪ್ರೇಯರನ್ನು ಬೆನ್ನಿಗೆ ಕಟ್ಟಿಕೊಂಡು ಮೇಲೆ ಹೋಗುವುದನ್ನು ತಾವು ಹೇಳಿದ್ದೀರಿ. ಒಂದು ಮರಕ್ಕೆ ಸ್ಪ್ರೇ ಮಾಡಬೇಕೆಂದರೆ ಕನಿಷ್ಟ 10 ರೂಪಾಯಿಗಳ ಖರ್ಚು ಬರುತ್ತದೆ. ದೊಡ್ಡ ರೈತರು ಇದನ್ನು ಮಾಡಬಹುದು, ಸಣ್ಣ ರೈತರು ಇದನ್ನು ಮಾಡುವುದಕ್ಕೆ ಆಗುವುದಿಲ್ಲ,

1. 10 ಪಿ.ಎಂ.

ಕಷ್ಟವಾಗುತ್ತದೆ. ಸರ್ಕಾರ ತೋಟಗಾರಿಕೆ ಇಲಾಖೆಗೆ ಕೆಲವು ಸ್ಪ್ರೇಯರ್ಸ್‌ನ್ನು ತರಿಸಿ ಆ ಮೂಲಕ ಪ್ರಯೋಗ ಮಾಡಬೇಕಾಗುತ್ತದೆ. ಸರ್ಕಾರ ಸ್ಪ್ರೇಯರ್ಸ್‌ನ್ನು ಉಪಯೋಗ ಮಾಡತಕ್ಕಂಥಾದ್ದನ್ನು ಮಡಬೇಕು. ಇಲ್ಲದಿದ್ದರೆ ಈ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಎಷ್ಟೇ ಔಷಧಿಯನ್ನು ಕೊಟ್ಟು ಹಣ ಖರ್ಚು ಮಾಡಿದರೂ ಅದರಿಂದ ಏನೂ ಪ್ರಯೋಜನವಾಗುವಿದಿಲ್ಲ. ಈ ಬಗ್ಗೆ ಸರ್ಕಾರ ವ್ಯಾಪಕವಾದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಇವತ್ತು ಎಳನೀರು, ತೆಂಗಿನಕಾಯಿ ಬೆಲೆ ಬಹಳ ಕಡಿಮೆಯಾಗಿದೆ. ಬೆಳೆ ಎಲ್ಲಿ ಹಾಳಾಗಿದೆ ಆ ರೈತರನ್ನು ಸರ್ಕಾರ ಗುರುತಿಸಿ ಅವರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ. ಇವತ್ತು ಸರ್ಕಾರ ಎಲ್ಲರಿಗೂ ಪರಿಹಾರವನ್ನು ಕೊಡು ತ್ತಿದೆ. ಸಾಯುತ್ತಿರುವಂತಹ ಎಲ್ಲಾ ಬೆಳೆಗಳಿಗೂ ನಾವು ಪರಿಹಾರವನ್ನು ಕೊಡುತ್ತಿದ್ದೇವೆ. ಸುಮಾರು 30-40 ವರ್ಷಗಳ ಕಾಲ ಬಾಳತಕ್ಕಂಥ ತೆಂಗಿನ ಮರಗಳು ಇವತ್ತಿನದಿವಸ ತಾವು ಈ ಬೆಳೆಗೆ ಪರಿಹಾರವನ್ನು ಕೊಡದಿದ್ದರೂ ಚಿಂತೆಯಿಲ್ಲ. ಕೃಷಿ ಇಲಾಖೆಯಿಂದ, ತೋಟಗಾರಿಕಾ ಇಲಾಖೆಯಿಂದ ಎಲ್ಲೆಲ್ಲಿ ಈ ನುಸಿ ರೋಗದಿಂದ ತೆಂಗಿನ ಮರಗಳು ಹಾಳಾಗಿ ಹೋಗಿವೆ ಅಲ್ಲಿರುವ ತೆಂಗಿನ ಮರಗಳನ್ನು ಗುರುತು ಮಾಡಿ ಅಂತಹ ತೆಂಗಿನ ಮರಗಳಿಗಾದರೂ ತಾವು ಪರಿಹಾರವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ತಾವು ಮೊದಲು ಕರ್ನಾಟಕ, ಕೇರಳ ಮತ್ತು ತಮಿಳುನಾಡು ಸರ್ಕಾರಗಳು ಸೇರಿ ಒಂದು ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ . ಪಲ್ಸ್‌ಪೋಲಿಯೋ ಕಾರ್ಯಕ್ರಮವನ್ನು ಸರ್ಕಾರ ಯಾವ ರೀತಿ ಹಮ್ಮಿಕೊಂಡಿತ್ತೋ ಆ ರೀತಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಕೇರಳದಲ್ಲಿ ನುಸಿರೋಗ ತಡೆಗಟ್ಟಲು ಅವರು ಕಾರ್ಯಕ್ರಮ ಹಮ್ಮಿಕೊಂಡರೆ ಅದು ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಈಗ ನಮ್ಮ ಸದನದಲ್ಲಿ ನುಸಿ ರೋಗದ ಬಗ್ಗೆ ಚರ್ಚೆ ಮಾಡಲು ಆಯಿತಲ್ಲ, ಹಾಗೆ ಒಂದೊಂದು ದಿವಸ ಒಂದೊಂದು ಚೂರು ಚೂರು, ಈಗ 15 ದಿವಸದಿಂದ ಕಾಯುತ್ತಿದ್ದೇವೆ. ಇವತ್ತು ಬರುತ್ತದೆ ಅಂದ ತಕ್ಷಣ ಮತ್ತೆ ನಾಳೆ ಎಂದುಹೇಳುತ್ತಾರೆ . ಹಾಗೆಯೇ ಈ ನುಸಿ ರೋಗ ಇಲ್ಲಿಯೂ ಹರಡಿಕೊಂಡಿದೆ. ಈ ಸಬ್ಜೆಕ್ಟ್‌ಗೂ ನುಸಿರೋಗ ಬಂದಿದೆ. ನಾವು ಪ್ರತಿ ದಿವಸ ಈ ರೋಗದ ನಿಂಯತ್ರಣವನ್ನು ಮಾಡಬೇಕಾಗುತ್ತದೆ.

ಶ್ರೀ ಸಿ ಬೈರೇಗೌಡ : ನುಸಿರೋಗ ಕೇವಲ ತೆಂಗಿನ ಮರಗಳಿಗೆ ಮಾತ್ರ ಬಂದಿರತಕ್ಕಂಥಾದ್ದು ಅಲ್ಲ. ನುಸಿ ರೋಗದ ಚರ್ಚೆಗೂ ಸಹ ನುಸಿರೋಗ ಬಂದಿದೆ. ದಿನ ಆದ ಮೇಲೆ ದಿನ ಇದರ ಬಗ್ಗೆ ನಮ್ಮ ಪ್ರಾಶಸ್ತ್ಯ ಎಷ್ಟರ ಮಟ್ಟಿಗೆ ಇದೆ, ನಾವು ಯಾವ ವಿಚಾರಕ್ಕೆ ಪ್ರಾಶಸ್ತ್ಯ ಕೊಡುತ್ತಿದ್ದೇವೆ ಎನ್ನತಕ್ಕಂಥಾದ್ದು ಸ್ಪಷ್ಟ ವಾಗಿ ವ್ಯಕ್ತವಾಗುತ್ತಿದೆ. ನುಸಿ ರೋಗಕ್ಕೂ ಕೂಡ ನುಸಿ ರೋಗ.

ಶ್ರೀ ಟಿ.ಬಿ. ಜಯಚಂದ್ರ : ನುಸಿ ರೋಗದ ವಿಚಾರ ಪ್ರಸ್ತಾವ ಮಾಡುವುದಕ್ಕೆ 5 ದಿವಸ ಆಗುವುದಾದರೆ ನುಸಿ ರೋಗ ತಡೆಗಟ್ಟಲು ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ಎಷ್ಟು ಕಾಲ ಬೇಕಾಗುತ್ತದೆ?

ಶ್ರೀ ಸಿ. ಬೈರೇಗೌಡ : ಇದನ್ನೆಲ್ಲಾ ನೋಡಿದರೆ ಮಾನ್ಯ ಉಪಾಧ್ಯಕ್ಷರೇ ಸರ್ಕಾರಕ್ಕೂ ನುಸಿರೋಗ ತಗಲಿದಂತೆ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಸರ್ಕಾರಕ್ಕೆ ಖಂಡಿತವಾಗಿ ನುಸಿ ರೋಗ ಬರುವುದಕ್ಕೆ ಸಾಧ್ಯವಿಲ್ಲ. ನುಸಿ ರೋಗ ಎಲ್ಲಿ ಹುಟ್ಟಿತು ಎನ್ನುವ ಮೂಲವನ್ನು ಕಂಡು ಹಿಡಿಯುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೇ, ವ್ಯಾಪಕವಾಗಿರತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಎಲ್ಲಿಯಾದರೂ ಒಂದು ಭಾಗದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಹೋದರೆ ಕಷ್ಟವಾಗುತ್ತದೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ ನುಸಿ ರೋಗ ಪ್ರಾರಂಭವಾಗಿದ್ದೆ ಮಾನ್ಯ ಬೈರೇಗೌಡರ ಕಾಲದಲ್ಲಿ, ಅದನ್ನು ಅಂತ್ಯ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೇವೆ ನಾವು ಅಂತ್ಯಮಾಡುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈ ರೀತಿ ಪ್ರತಿ ಸಲ ಡಿಸ್ಟರ್ಬ್ ಮಾಡುತ್ತಿದ್ದರೆ ನನಗೆ ನುಸಿ ರೋಗ ಬರುತ್ತದೆ ಅಷ್ಟೇ. ಒಂದು ವ್ಯಾಪಕವಾದ ಕಾರ್ಯಕ್ರಮವನ್ನು ಮಾಡಬೇಕಾಗುತ್ತದೆ. ಮೂರು ರಾಜ್ಯಗಳು ಸೇರಿಕೊಂಡು ಮೂರು ರಾಜ್ಯಗಳ ಸಚಿವರುಗಳು ಸೇರಿಕೊಂಡು ಇದನ್ನು ಯಾವ ರೀತಿಯಲ್ಲಿ ತಡೆಗಟ್ಟಬೇಕು ಎನ್ನತಕ್ಕಂಥ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಫಲಪ್ರದವಾಗುವುದಿಲ್ಲ. ಇವತ್ತು ಸರ್ಕಾರದವರು ಏನು 2 ಕೋಟಿ 44 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿತ್ತಿದ್ದೇವೆ ಇದು ಪ್ರಯೋಜನವಾಗುವುದಿಲ್ಲ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ. ನನ್ನ ಸಲಹೆ ಏನೆಂದರೆ ಮೂರು ರಾಜ್ಯಗಳು ಸೇರಿಕೊಂಡು ಒಂದು ಕಾರ್ಯ ಕ್ರಮ ಹಮ್ಮಿಕೊಳ್ಳಬೇಕು. ಎರಡನೆಯದು ಈ ತೆಂಗಿನ ಮರಗಳಿಗೆ ಕಪ್ಪುತಲೆಹುಳು ಮತ್ತು ನುಸಿ ರೋಗದಿಂದ ಪೂರ್ಣವಾಗಿ ತೆಂಗಿನ ಮರಗಳು ಹಾಳಾಗಿವೆ ಆ ಮರಗಳನ್ನು ಗುರುತು ಮಾಡಿಸಿ ಆ ರೈತರಿಗೆಪರಿ ಹಾರವನ್ನು ಕೊಡಬೇಕು. ನಾವು ಬೆಳೆ ನಾಶವಾದರೆ ಪರಿಹಾರ ಕೇಳುತ್ತಿಲ್ಲ. ಇನ್ನು ಮೂರನೆಯದು ತಾವು ಸಂಶೋಧನೆಯನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟ. ಈ ನುಸಿ ರೋಗ ಯಾವಾಗ ಬರುತ್ತದೆ ಯಾವ ತಿಂಗಳಲ್ಲಿ ಬರುತ್ತದೆ ಎನ್ನುವುದು ಸಂಶೋಧನೆಯಿಂದ ಇನ್ನೂ ಹೊರ ಬಂದಿಲ್ಲ. ಜನವರಿ ಮತ್ತು ಡಿಸೆಂಬರ್ ತಿಂಗಳಲ್ಲಿ ನುಸಿ ರೋಗ ವ್ಯಾಪಕವಾಗಿ ಹರಡಿತು. ಮತ್ತೆ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ನುಸಿ ರೋಗ ಹರಡುತ್ತಿಲ್ಲ. ಏಕೆ ನಿಂತು ಹೋಯಿತು ? ಸೈಕ್ಲೋನ್ ತರಹ ಮಳೆಬಂತು ಅದಕ್ಕೆ ನಿಂತು ಹೋಯಿತಾ? ಕೆಲವು ಜನ ವಿಜ್ಞಾನಿಗಳು ಹೇಳುವ ಪ್ರಕಾರ ಪರಿಸರದ ಅಸಮತೋಲನದಿಂದ ಈ ರೋಗ ಬರುತ್ತದೆಂದು. ಈ ರೋಗ ಏಕೆ ಹರಡುತ್ತಿದೆ ಈ ರೋಗ

ಏಕೆ ಬರುತ್ತಿದೆ ಎನ್ನುವ ಬಗ್ಗೆ ಸಂಶೋಧನೆ ಆಗಬೇಕು. ಇದು 7 ದಿವಸಕ್ಕೆ ಒಮ್ಮೆ ಮಲ್ಟಿಪ್ಲೈ ಆಗುತ್ತಿದೆ. ಈ ನುಸಿ ರೋಗಬಹಳ ವೇಗವಾಗಿ ಹೋಗುತ್ತಿರುವುದನ್ನು ತಡೆಗಟ್ಟಲಿಕ್ಕೆ ನಾವು ಏನು ಮಾಡಬೇಕು. ತಾವು ಔಷಧಿಗೆ ಎಷ್ಟುಹಣ ವನ್ನು ಕೊಡುತ್ತಿರೋ ಎಷ್ಟು ಕಾಳಜಿಯನ್ನು ಕೊಡುತ್ತೀರೋ ಅಷ್ಟೇ ಕಾಳಜಿಯನ್ನು ಹಣವನ್ನು ಸಂಶೋಧನೆಗೆ ಕೊಟ್ಟು ಸಂಶೋಧನೆಯನ್ನು ವಿಜ್ಞಾನಿಗಳಿಂದ ಮಾಡಿಸಿ, ರೈತರಿಗೆ ಶಾಶ್ವತವಾದ ಪರಿಹಾರವನ್ನು ಕಂಡು ಹಿಡಿಯಬೇಕೆನ್ನುವ ವಿಷಯವನ್ನು ಹೇಳಿ ನಮಗೆ ಮಾತನಾಡಲು ಅವಕಾಶ ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನುಸಿ ರೋಗದ ಬಗ್ಗೆ ಅದರ ನಿಯಂತ್ರಣದ ಬಗ್ಗೆ, ಮುಂದೆ ಆಗಬೇಕಾದ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಸಹ ಬೆಳಕು ಚೆಲ್ಲಿದ್ದಾರೆ. ನಾನು ಸಹ ಅವರ ಜೊತೆ ಧ್ವನಿಗೂಡಿಸುತ್ತಾ, ಟಾಸ್ಕ್‌ಫೋರ್ಸ್‌ಗಳನ್ನು ಜಿಲ್ಲೆಗಳಲ್ಲಿ ಈಗಾಗಲೇ ರಚನೆ ಮಾಡಲಾಗಿದೆ. ಈ ಟಾಸ್ಕ್‌ಫೋರ್ಸ್‌ಗಳು ಕಾರ್ಯಪ್ರವೃತ್ತಿಯಾಗಿವೆಯೇ? ಅವುಗಳ ಕಾರ್ಯವೈಖರಿ ಏನು ಎನ್ನತಕ್ಕಂಥಾದ್ದನ್ನು ಮಾನಿಟರ್ ಮಾಡತಕ್ಕಥಾದ್ದು ಬಹಳ ಅವಶ್ಯಕ. ನಮ್ಮ ತೋಟಗಾರಿಕಾ ಇಲಾಖೆಯ ನಿರ್ದೇಶಕರ ಅಥವಾ ಕಾರ್ಯದರ್ಶಿಗಳ ಮಟ್ಟದಲ್ಲಿ ಮಾನಿಟರಿಂಗ್ ಮಾಡತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ. ಮತ್ತು ಈ ಒಂದು ರೋಗದ ಬಗ್ಗೆ ಸಂಶೋಧನೆ ಕಾರ್ಯಕ್ಕೆ ಹೆಚ್ಚು ಒತ್ತನ್ನು ತೋಟಗಾರಿಕಾ ಇಲಾಖೆಯ ಮೂಲಕ ಕೊಡಬೇಕೆನ್ನುವ ಮಾತನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆತರುತ್ತಾ, ಈ ರೋಗದಿಂದ ಬೆಳೆಯನ್ನು ಕಳೆದುಕೊಂಡಿರತಕ್ಕಂಥ ರೈತರಿಗೆ ಪರಿಹಾರವನ್ನು ಕೊಡುವಂಥಾದ್ದು ತೀರಾ ಉಚಿತವಾಗಿರತಕ್ಕಂಥಾದ್ದು, ಕಾರಣ ಇಷ್ಟೇ ರೈತ ಬಹಳ ನೊಂದು ಹೋಗಿದ್ದಾನೆ. ಯಾರು ಫಸಲು ನಷ್ಟವನ್ನು ಅನುಭವಿಸಿದ್ದಾರೆ ಮತ್ತುಈ ಒಂದು ರೋಗದ ಹಿಡಗು ತಟ್ಟಿರತಕ್ಕಂಥ ರೈತರ ಬೆಳೆಗಳಿಗೆ ನಷ್ಟವನ್ನು ತುಂಬಿಕೊಡಲುಪರಿ ಹಾರವನ್ನು ಕೊಡತಕ್ಕಂಥಾದ್ದು ಸೂಕ್ತ. ರೈತರಿಗೆ ಪರಿಹಾರವನ್ನು ಕೊಡಬೇಕೆಂದು ನಾನು ಈ ಸಂದರ್ಭ ದಲ್ಲಿ ಹೇಳುತ್ತಾ, ಈ ಕಾರ್ಯ ಸಮರೋಪಾಧಿಯಲ್ಲಿ ನಡೆದರೆ ಮಾತ್ರ ಈ ರೋಗವನ್ನು ನಿಯಂತ್ರಣ ಮಾಡಿ ರೈತರಿಗೆ ಆಗುವನಷ್ಟವನ್ನು ಉಳಿಸಬಹುದೇ ವಿನಹಃ ಇಲ್ಲದಿದ್ದರೆ ಅವನಿಗೆ ಬಹಳತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ, ಈ ನುಸಿ ರೋಗವನ್ನು ತಡೆಗಟ್ಟುವಂತಹ ಕಾರ್ಯವನ್ನು ನಮ್ಮಸ ರ್ಕಾರ ಗಂಭೀರವಾಗಿ ತೆಗೆದುಕೊಂಡು ಈ ರೋಗವನ್ನು ನಿಯಂತ್ರಣ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್(ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೇ ನಮ್ಮ ಚಾಮರಾಜನಗರ ಜಿಲ್ಲೆ ಈ ರೋಗ ಹೆಚ್ಚಿಗೆ ತಗಲಿರುವಂತಹ ಕೇರಳ ಮತ್ತು ತಮಿಳುನಾಡು ಎರಡು ಜಿಲ್ಲೆಗಳಲ್ಲಿ ಬಾರ್ಡರ್‌ನಲ್ಲಿರುವಂತಹ ನಮ್ಮ ಜಿಲ್ಲೆಯಲ್ಲಿ ಇದರ ತೊಂದರೆ ಬಹಳ ಇದೆ. ನಮ್ಮ ಚಾಮರಾಜನಗರದಲ್ಲಿ ಸುಮಾರು 20 ಲಕ್ಷ ತೆಂಗಿನ ಮರಗಳು ಇವೆ. ನನ್ನ ಕ್ಷೇತ್ರವಾದ ಗುಂಡ್ಲುಪೇಟೆಯಲ್ಲಿ ಸುಮಾರು 5-6 ಲಕ್ಷ ತೆಂಗಿನ ಮರಗಳು ಇದ್ದು ಇದರಲ್ಲಿ ಎಲ್ಲಾ ಮರಗಳಿಗೂ ತೊದರೆಯಾಗಿದೆ ಎಂದು ಹೇಳಲುಬಾರದಿದ್ದರೂ ಸಹ ಬಹುತೇಕ ಈ ರೋಗ ಎಲ್ಲಾ ಕಡೆ ಹರಡುತ್ತಿರುವುದರಿಂದ ದಿನೇ ದಿನೇ ಈ ರೋಗ ವ್ಯಾಪಕವಾಗಿ ಹರಡುತ್ತಾ ಬಂದಿದೆ. ಈ ಮನೋಕ್ರೋಟೋ ಫಾಸ್ಟ್ ಅನ್ನು ನಮ್ಮ ತೋಟಗಾರಿಕಾ ಇಲಾಖೆಯವರು 50 ಪರ್ಸೆಂಟ್ ರಿಯಾಯಿತಿ ದರದಲ್ಲಿ ಕೊಟ್ಟು ಅವರು ಕೆಲವು ತಂಡಗಳನ್ನು ಕಳುಹಿಸಿ ಈ ಮರದ ಬೇರಿಗೆ 10 ಎಂ.ಎಲ್. ಔಷಧಿ ಜೊತೆಗೆ ನೀರನ್ನು ಬೆರಸಿ ಪ್ಲಾಸ್ಟಿಕ್

ಚೀಲದಲ್ಲಿ ಕಟ್ಟು ಕಟ್ಟುವ ಒಂದು ವ್ಯವಸ್ಥೆಯನ್ನು ಚಾಲ್ತಿಯಲ್ಲಿ ಕೊಟ್ಟಿದ್ದಾರೆ . ಆದರೆ, ಏನಾಗಿದೆ ಅಂದರೆ 500 ರೂಪಾಯಿ ಬೆಲೆ ಬಾಳುವ ಔಷಧಿಯನ್ನು 50 ಪರ್ಸೆಂಟ್ ಸಬ್ಸಿಡಿಯಲ್ಲಿ 250 ರೂಪಾಯಿಗಳಿಗೆ ಕೊಡುತ್ತಿದ್ದಾರೆ. ಈ ತೋಟದ ಬೆಳೆಗಾರರನ್ನು ನಾವು ಜಾಗೃತಗೊಳಿಸುವಲ್ಲಿ ಸಾಕಷ್ಟು ಪರಿಮಾಮಕಾರಿಯಾಗಿ ಆಗಿಲ್ಲ. ನಮ್ಮ ಮುಖಂಡರುಗಳು ಅಧಿಕಾರಿಗಳು, ಪ್ರಚಾರದಲ್ಲಿ ನಾವು ಮಾತನಾಡುತ್ತಿದ್ದೇವೆಯೇ ಹೊರತು ರೈತರು ಇನ್ನೂ ಜಾಗೃತರಾಗಿಲ್ಲ. ಈಗ ನನ್ನ ಊರಿನಲ್ಲಿಯೇ ನಾನು ಕೂಡ ಒಬ್ಬ ತೆಂಗು ಬೆಳೆಗಾರನಾಗಿ ತೆಂಗಿನ ನರ್ಸರಿಯಿಂದ ಹಿಡಿದು ಎಲ್ಲಾ ತೋಟದ ಬೆಳೆಯನ್ನು ಮಾಡುತ್ತಿದ್ದೇನೆ. ನಮ್ಮ ಪಕ್ಕದ ದೊಡ್ಡ ದೊಡ್ಡ ತೋಟದವರು ಈ ಔಷಧಿಯನ್ನು ಸಿಂಪಡಿಸಬೇಕೆನ್ನುವ ಮನೋಭಾವನೆ ಬರುತ್ತಿಲ್ಲ. ಕೆಲವರು ಔಷಧಿಯನ್ನು ಸಿಂಪಡಿಸುವುದು ಕೆಲವರು ಹಾಗೆಯೇ ಬಿಡುವುದರಿಂದ ಇದನ್ನು ಮಾಡಿದರೂ ಕೂಡ ವ್ಯರ್ಥವಾಗುವುಂತಹ ಸಂದರ್ಭ ಇರುತ್ತದೆ. ಆದ್ದರಿಂದ ಸರ್ಕಾರದವರೇ ನಮ್ಮ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನರವರು ಹೇಳಿದಂತೆ ಪಲ್ಸ್‌ಪೋಲಿಯೋ ಕಾರ್ಯಕ್ರಮವನ್ನು ಯಾವ ರೀತಿ ಟೈಮ್ ಬಾಂಡ್ ಕಾರ್ಯಕ್ರಮವನ್ನಾಗಿ ಹಾಕಿಕೊಂಡು ಏಕಕಾಲಕ್ಕೆ ಎಲ್ಲಾ ಇದನ್ನು ಸಿಂಪಡಿಸುವ ಒಂದು ಕಾರ್ಯಕ್ರಮವನ್ನು ಮಾಡಿದರೆ ಒಳ್ಳೆಯದು. ಸರ್ಕಾರ ಇದನ್ನು ವಿಶೇಷವಾಗಿ ಪರಿಗಣಿಸಬೇಕು ಇಲ್ಲ ದಿದ್ದರೆ ತಾವು 50 ಪರ್ಸೆಂಟ್ ಸಬ್ಸಿಡಿಯನ್ನು ಕೊಟ್ಟಿದ್ದು ವ್ಯರ್ಥವಾಗುತ್ತದೆ. ಸರ್ಕಾರವೇ ಒಂದು ಸಮ ರೋಪಾಧಿಯಲ್ಲಿ ಕಾರ್ಯಕ್ರಮವನ್ನು ಹಾಕಿ ಕೊಂಡು ಈ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಈ ತೋಟಗಾರಿಕಾ ಬೆಳೆಗಾರರು ಬಹಳ ಚಿಂತಾಜನಕವಾದ ಪರಿಸ್ಥಿತಿಗೆ ಹೋಗಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಈ ರೈತರನ್ನು ಜಾಗೃತಗೊಳಿಸುವುದಕ್ಕೆ ತಾವು ಅಧಿಕಾರಿಗಳ ಮಟ್ಟದಲ್ಲಿ ಒಂದು ಟಾಸ್ಕ್‌ಫೋರ್ಸ್ ಮಾಡಿದ್ದೀರಿ. ಗ್ರಾಮ ಪಂಚಾಯತ್‌ಗಳ ಮೂಲಕ, ತಾಲ್ಲೂಕು ಪಂಚಾಯತ್‌ಗಳ ಮೂಲಕ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಇದನ್ನು ಮೋಟಿವೇಟ್ ಮಾಡಿದ್ದರೆ ಚೆನ್ನಾಗಿರುತ್ತಾ ಇತ್ತು. ಇದೇ ಕಾರಣಕ್ಕಾಗಿ ಗ್ರಾಮಸಭೆಗಳನ್ನು ಮಾಡಿ ಇದರ ಪರಿಣಾಮ ಏನಾಗುತ್ತದೆ ಮತ್ತು ಯಾವ ರೀತಿಯ ಅನಾಹುತಕ್ಕೆ ಗುರಿಯಾಗುತ್ತದೆ ಎಂಬ ವಿಚಾರಗ ಳನ್ನು ಅವರಿಗೆ ಸೂಕ್ತ ರೀತಿಯಲ್ಲಿ ಹೇಳಬೇಕು. ಅವರಿಗೆ ಇಂಥ ವಿಚಾರವನ್ನು ಸರಿಯಾಗಿ ಹೇಳಿಕೊಟ್ಟರೆ ಮಾತ್ರ ರೈತರು ಮುಂದೆ ಬರುತ್ತಾರೆ. ಇಲ್ಲದಿದ್ದರೆ ಒಬ್ಬರು ಔಷಧಿಯನ್ನು ಹಾಕುತ್ತಾರೆ, ಒಬ್ಬರು ಹಾಕುವುದಿಲ್ಲ, ಈ ರೀತಿಯಲ್ಲಿ ಆ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಇಲಾಖೆಯವರು ನಮ್ಮ ತಾಲ್ಲೂಕಿನಲ್ಲಿ ನಾಲ್ಕು ಜನ ನೌಕರರನ್ನು ನೇಮಿಸಿದ್ದಾರೆ. ಅವರುಗಳು ನಮ್ಮಂಥ ದೊಡ್ಡ ದೊಡ್ಡ ತೋಟಗಳವರಲ್ಲಿ ಹೋಗಿ ಒಂದಷ್ಟು ಪ್ಲಾಸ್ಟಿಕ್ ಚೀಲಗಳಲ್ಲಿ ಔಷಧಿಯನ್ನು ಬೇರುಗಳಿಗೆ ಕಟ್ಟಿ ಹೋಗುತ್ತಾರೆ. ಇಲಾಖೆಯವರು ಜನಸಾಮಾನ್ಯರ ಮನೆ ಬಾಗಿಲಿಗೆ ಹೋಗಬೇಕು. ಇದು ಕೇವಲ ತೋಟಗಾರಿಕೆ ಮತ್ತು ಕೃಷಿ ಇಲಾಖೆಯವರಿಗೆ ಮಾತ್ರ ಸಾಧ್ಯವಾಗುವುದಿಲ್ಲ. ಎಲ್ಲಾ ಇಲಾಖೆಯವರು ಸೇರಿ ಒಂದು ವಾರದ ಅಥವಾ 15 ದಿವಸಗಳ ಕಾರ್ಯಕ್ರಮವನ್ನು ಹಾಕಿಕೊಂಡು ಪೂರ್ಣ ಪ್ರಮಾಣದಲ್ಲಿ ಈ ರೋಗವನ್ನು ತಡೆಗಟ್ಟುವುದಕ್ಕೆ ಕ್ರಮ ಜರುಗಿಸಬೇಕು. ಔಷಧಿ ಸಿಂಪಡಿಸುವ ವಿಚಾರದಲ್ಲಿ ನಮ್ಮ ಗಡಿಭಾಗದ ಕೇರಳದಲ್ಲಿ ಅದರಲ್ಲೂ ನಮ್ಮ ಹತ್ತಿರದ ಬತ್ತೇರಿ ಮತ್ತು ಕ್ಯಾಲಿಕಟ್ ಪ್ರದೇಶದಲ್ಲಿ 70-80 ಅಡಿಯ ಸ್ಪ್ರೇಯನ್ನು ಇಟ್ಟುಕೊಂಡು ಈಗಾಗಲೇ ಸ್ಪ್ರೇ ಮಾಡುವ ವಿಧಾನವನ್ನು ಪ್ರಾಯೋಗಿಕವಾಗಿ ಅವರು ಮಾಡುತ್ತಾ ಇದ್ದಾರೆ. ನೀವು ನಿಮ್ಮ ಇಲಾಖೆಯವರನ್ನು ಅಲ್ಲಿಗೆ ಕಳುಹಿಸಿ ಅವರು ಯಾವ ರೀತಿಯ ಉಪಕರಣಗಳನ್ನು ಈ ಬಗ್ಗೆ

ಬಳಸುತ್ತಿದ್ದಾರೆ ಎಂಬುದನ್ನು ನೋಡಿಕೊಂಡುಬರಲು ವ್ಯವಸ್ಥೆ ಮಾಡಿರಿ. ಅಂಥ ಎಕ್ವಿಪ್‌ಮೆಂಟ್‌ಗಳನ್ನು ನಮ್ಮ ರಾಜ್ಯಕ್ಕೂ ತರಿಸಿಕೊಂಡರೆ, ನಾವು ಅದನ್ನು ಬಾಡಿಗೆಗೆ ಅಥವಾ ಇನ್ನಾವುದೋ ರೀತಿಯಲ್ಲಿ ಪಡೆದುಕೊಂಡು ಸಿಂಪಡಿಸಿಕೊಳ್ಳಲು ಅನುಕೂಲವಾಗುತ್ತದೆ. ಬೇರುಗಳಿಗೆ ಸಿಂಪಡಿಸಿ ಅಥವಾ ಬೇರೆ ರೀತಿಯಲ್ಲಿಯೋ ಅದನ್ನು ಮಾಡಲು ಆಗುವುದಿಲ್ಲ. ಬೇರುಗಳಿಗೆ ಇದನ್ನುಕಟ್ಟುವಾಗ ರಸ ಹೀರುವಂಥ ಬೇರುಗಳನ್ನು ನೋಡಿಯೇಔಷಧಿಯನ್ನು ಕಟ್ಟಬೇಕಾಗುತ್ತದೆ. ಇಲ್ಲವಾದಲ್ಲಿ ಔಷಧಿಯು ಪ್ರಯೋಜನಕ್ಕೆ ಬರುವು ದಿಲ್ಲ. ಕೆಲವು ಮರಗಳಲ್ಲಿ ಆ ತರಹದ ಬೇರುಗಳೇ ಸಿಗುವುದಿಲ್ಲ. ಇದನ್ನು ನನ್ನ ತೋಟದಲ್ಲಿಯೇ ನಾನು ಕಂಡು ಅನುಭವಿಸಿದ್ದೇನೆ. ಆದ್ದರಿಂದ ಪಕ್ಕದ ಕೇರಳ ರಾಜ್ಯದಲ್ಲಿ ಸಿಂಪಡಿಸುವ ಕ್ರಮವನ್ನು, ಉಪಕರಣಗಳನ್ನು ನಮ್ಮಲ್ಲಿಯೂ ತರಿಸಿಕೊಂಡು ನಮ್ಮ ರೈತರುಗಳಿಗೆ ಅದನ್ನು ಬಳಸಿಕೊಳ್ಳುವುದಕ್ಕೆ ಹೇಳಿದರೆ ಆದರಿಂದ ನಮ್ಮ ಜನರಿಗೂ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಜೊತೆಗೆ ಅವೇರ್‌ನೆಸ್ ಕ್ರಿಯೇಟ್ ಮಾಡುವಂಥ ವಿಚಾರದಲ್ಲಿ ಮೋಟಿವೇಟ್ ಮಾಡುವಂಥ ವಿಚಾರದಲ್ಲಿ ಹೆಚ್ಚು ಒತ್ತುಕೊಟ್ಟು ನಮ್ಮ ಚಾಮರಾಜ ನಗರ ಜಿಲ್ಲೆಗೆ ಔಷಧಿಗಾಗಿ ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೀರಿ. ಇದು ಯಾವ ಕಾರಣಕ್ಕೂ ಸಾಕಾಗುವುದಿಲ್ಲ. ನಮ್ಮ ರೈತರು ದುಡ್ಡುಕೊಟ್ಟು ತೆಗೆದುಕೊಳ್ಳುವುದು ಆದಂರೆ ಇವೊತ್ತು, ನಾಳೆ ಎಂದು ಮುಂದಕೆ ಹಾಕುತ್ತಾ ಹೋಗುತ್ತಾರೆ. ಅವರಿಗೆ ಈ ವಿಚಾರಗಳು ಕೂಡಲೇ ಗೊತ್ತಾಗುವುದಿಲ್ಲ. ಆದ್ದರಿಂದ ಸರಕಾರವೇ ಮುಂದೆ ಬಂದು ನಮ್ಮ ಜಿಲ್ಲೆಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ಅನುಕೂಲ ಮಾಡಿಕೊಡಬೇಕು. ಈ ಕಾರ್ಯಕ್ರಮವನ್ನು ಮಾಡುವುದರ ಮೂಲಕ ತೋಟದ ಬೆಳೆಗಾರರ ಹಿತರಕ್ಷಣೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ತಮ್ಮ ಮೂಲಕ ಒತ್ತಾಯಿಸುತ್ತೇನೆ.

+ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಭಾಗದಲ್ಲಿ ಈ ನುಸಿ ರೋಗದ ಪರಿಣಾಮ ಏನಾಯಿತು ಎಂದು ಹೇಳಬಯಸುತ್ತೇನೆ. ತೆಂಗಿನ ಮರಗಳು ಬೆಂಗಳೂರಿನ ಎಲ್ಲಾ ಮನೆಗಳ ಎದುರೂ ಇದೆ. ನಾನು ಕೂಡ ಎರಡು ಮರಗಳನ್ನು ಹಾಕಿದ್ದೇನೆ. ನಮ್ಮಲ್ಲಿಯೂ ಈಗಾಗಲೇ ನುಸಿ ರೋಗ ಪ್ರಾರಂಭವಾಗಿದೆ. ಬನ್ನೇರುಘಟ್ಟದ ಹತ್ತಿರ ಒಂದು ತೋಟ ಮಾಡಿದ್ದೇನೆ. ಐದು ಎಕರೆಗಳಲ್ಲಿ ತೆಂಗಿನ ಮರಗಳು ಇವೆ. ನುಸಿ ರೋಗದ ಬಗ್ಗೆ ಲ್ಲಿನ ನನ್ನ ಶಿಷ್ಯನಿಗೆ ತಿಳಿಸಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಅಥವಾ ಅಲ್ಲಂ ವೀರಭದ್ರಪ್ಪನವರನ್ನು ಕಂಡು ವಿವರಗಳನ್ನು ಪಡೆಯುವಂತೆ ಹೇಳಿದ್ದೆ. ಅವರು ಅಲ್ಲಿಗೆ ಹೋಗಿ ಅವರ್‍ಯಾರೂ ಸಿಗಲಿಲ್ಲಎಂದು ಹೇಳಿಕೊಂಡು ಬಂದ ಇಷ್ಟಾದ ಮೇಲೆ ಕೊನೆಗೆ ಏನು ಮಾಡುವುದು ಎಂದು ಯೋಚನೆ ಮಾಡುತ್ತಾ ಇದ್ದೆ. ಇದೇ ಸಮಯದಲ್ಲಿ ನಮ್ಮ ತೋಟಕ್ಕೆ ನುಗ್ಗಿದ ಆನೆಗಳು ತೆಂಗಿನ ಗಿಡಗಳನ್ನು ತಿಂದು ಹಾಳುಗೆಡವಿದವು. ಮಾನ್ಯ ಅರಣ್ಯ ಸಚಿವರ ಇಲಾಖೆಯ ಆನೆಗಳು ನುಸಿರೋಗದ ತೆಂಗಿನ ಮರಗಳನ್ನು ತಿಂದು ಸರಿಪಡಿಸಿದವು. ಆ ಮೇಲೆ ನಮ್ಮ ಮಾನ್ಯ ರಂಗನಾಥ್‌ರವರಿಗೆ ತಿಳಿಸಿ ನಮ್ಮ ಬನ್ನೇರುಘಟ್ಟ ಏರಿಯಾದಲ್ಲಿ ಆನೆಗಳಿಂದ ಬಹಳ ತೊಂದರೆಯಾಗಿ ಬಿಟ್ಟಿದೆ, ಎಂದು ವಿವರಿಸಿದಾಗ ಮಾನ್ಯ ಸಚಿವರು ಕೂಡ ಆ ಏರಿಯಾವನ್ನು ನೋಡುವುದಕ್ಕೆ ಬಂದರು. ಅವರು ಅವರಿಗೆ ಬೇಕಾಗಿರುವ ಕೆಲವು ಏರಿಯಾಗಳನ್ನು ವೀಕ್ಷಿಸಿ ಅಲ್ಲಿಂದ ಬಂದರು. ಬೆಂಗಳೂರು ಜಿಲ್ಲೆಯಲ್ಲಿಯೂ ತೆಂಗಿನ ಮರಗಳನ್ನು ಹೊಂದಿದ ಬಹಳ ಜನರಿಗೆ ಅಫೆಕ್ಟ್ ಆಗಿದೆ. ಆದ್ದರಿಂದ ನಮ್ಮ ಕೃಷಿ ಮತ್ತು ತೋಟಗಾರಿಕೆ ಇಲಾಖಾ ಸಚಿವರು ಸೇರಿ ಸೂಕ್ತ ರೀತಿಯಲ್ಲಿ ಯೋಚನೆ ಮಾಡಿ, ಎಲ್ಲೆಲ್ಲಿ ಪ್ರಾಮುಖ್ಯವಾಗಿ ಇದೆ ಅಲ್ಲಿ ಹೆಲಿಕಾಪ್ಟರ್ ಮೂಲಕ ಸಿಂಪಡಿಸುವ ಅಥವಾ ಇನ್ನಾವುದೇ ವಿಧಾನವನ್ನು

ಬಳಸಿ ಔಷಧಿಯನ್ನು ಹಾಕಬಹುದು. ಏಕೆಂದರೆ, ಮರಗಳನ್ನು ಹತ್ತಿ ಇಳಿಯುವುದೇ ಒಂದು ಕಷ್ಟದ ಕೆಲಸವಾಗಿದೆ. ಅನೇಕ ಬಾರಿ ನಮ್ಮ ರೈತರಿಗೆ ತೊಂದರೆ ಬಂದಾಗ ಇಂಥ ಕೆಲಸ ಕಾರ್ಯಗಳಿಗೆ ಖಾಸಗಿ ಹೆಲಿಕಾಪ್ಟರ್ ಬಳಕೆ ಮಾಡಿದ್ದು ಇದೆ. ಆದ್ದರಿಂದ ಸರಕಾರದವರು ಆ ಬಗ್ಗೆ ಸಕಾಲಿಕ ಚಿಂತನೆಯನ್ನು ಮಾಡಬೇಕು. ಮಾನ್ಯ ರಂಗನಾಥ್‌ರವರ ಇಲಾಖೆಯ ಆನೆಗಳು ನಮ್ಮಲ್ಲಿ ಬಂದು ನುಸಿ ರೋಗದ ಮರಗಳನ್ನು ತಿಂದು ರೋಗದ ಸಮಸ್ಯೆಯನ್ನು ದೂರಮಾಡಿದ್ದಾವೆ.

ಶ್ರೀ ಕೆ.ಹೆಚ್ ರಂಗನಾಥ್ (ಅರಣ್ಯ ಸಚಿವರು) : ಕಾಡಿಗೆ ನುಸಿ ರೋಗ ಇನ್ನೂ ಬಂದಿಲ್ಲ. ಮಾನ್ಯ ಸದಸ್ಯರು ನಾಡಿಗೆ ಆನೆಗಳು ಬಂದ ವಿಚಾರ ಹೇಳುತ್ತಿದ್ದಾರೆ .

ಶ್ರೀ ಬಿ.ಆರ್.ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೇ, ಈ ನುಸಿ ರೋಗವು ಅತ್ಯಂತ ಭಯಾನಕ ರೋಗ. ಇದು ನಮ್ಮ ಮತ್ತು ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಬ್ಬಿದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನುಸಿ ರೋಗ ಪ್ರತಿಬಂಧಕಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಭೂಮಿಯಲ್ಲಿ ಎಲ್ಲಿ ಒಣ ಪ್ರದೇಶ ಇರುತ್ತದೆ ಮತ್ತು ನೀರಿನ ಅಂಶ ಇಲ್ಲದೇ ಇರುವುದರಿಂದ ನುಸಿ ರೋಗ ಬರುತ್ತದೆ ಎಂಬ ಬಗ್ಗೆ ತಜ್ಞರ ವರದಿಯು ಬೇರೆ ಬೇರೆ ಕಡೆಗಳಿಂದ ಬರುತ್ತಿದೆ. ಆದ್ದರಿಂದ ಸರಕಾರದವರು ಅತಿ ಹೆಚ್ಚು ಹನಿ ನೀರು ಯೋಜನೆಗೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಅದೇ ರೀತಿಯಲ್ಲಿ ಈಗ ಔಷಧಿ ವ್ಯವಸ್ಥೆಯನ್ನು ಒಂದು ಕಡೆ ಕೊಟ್ಟು ಇನ್ನೊಂದು ಕಡೆಯಲ್ಲಿ ಕೊಡದೇ ಹೋದರೆ ಈ ಅಂಟುರೋಗವು ಬದಲಾವಣೆಯಾಗಿ ಮತ್ತೆ ವ್ಯಾಪಕವಾಗಿ ಬೆಳೆಯುತ್ತಾ ಹೋಗುತ್ತದೆ. ಇದರಿಂದಾಗಿ ನಮ್ಮ ಭಾಗದ ರೈತರಿಗೆ ತುಂಬಾ ತೊಂದರೆಯಾಗಿದೆ. ನಾವು ಐದು ವರ್ಷಗಳ ಕೆಳಗಡೆ ಕೇರಳ ರಾಜ್ಯಕ್ಕೆ ಹೋಗಿದ್ದಾಗ ಅಲ್ಲಿ ಸಿಂಪಡಿಸುವ ವ್ಯವಸ್ಥೆಯನ್ನು ನೋಡಿದ್ದೇವೆ. 50-60 ಅಡಿಗಳಷ್ಟು ಎತ್ತರಕ್ಕೆ ಸಿಂಪಡಿಸುವ ವಿಧಾನವನ್ನು ಅವರು ಮಾಡುತ್ತಾ ಇದ್ದಾರೆ. ಅದನ್ನು ನಮ್ಮಲ್ಲಿಯೂ ಅಳವಡಿಸ ಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ಅಂಟು ರೋಗಗಳು ಸಾಮಾನ್ಯವಾಗಿ ಬಿಜೆಪಿ, ಜನತಾದಳ ಸರಕಾರ ಗಳ ಅವಧಿಯಲ್ಲಿ ಬರುತ್ತದೆ. ಬೇರೆ ಸರ್ಕಾರಗಳು ಇರುವ ಅವಧಿಯಲ್ಲಿ ಬರುವುದಿಲ್ಲ. ಹೀಗೆ ಬಂದ ಅಂಟು ರೋಗಗಳನ್ನು ಕಾಂಗ್ರೆಸ್ ಸರಕಾರವು ವಾಸಿ ಮಾಡುತ್ತದೆ.

+ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರುಗಳು ಸಾಕಷ್ಟು ಚರ್ಚೆಯನ್ನು ಮಾಡಿದ್ದಾರೆ . ಈ ನುಸಿ ರೋಗವು ಮೆಕ್ಸಿಕೋದಿಂದ ಬಂತು. ಕೇರಳದಲ್ಲಿ ಮೂರು ವರ್ಷಗಳ ಹಿಂದಿನಿಂದಲೂ ಈ ಕಾಯಿಲೆ ಇತ್ತು ಹಾಗೆಯೇ ತಮಿಳುನಾಡಿನಲ್ಲಿ ಕೂಡ ಈ ರೋಗ ಇದೆ. ತಮಿಳುನಾಡಿನಿಂದ ನಮ್ಮ ರಾಜ್ಯದ 14 ಜಿಲ್ಲೆಗಳಿಗೆ ಈ ನುಸಿ ಅಥವಾ ಕೀಟ ಬಾಧೆಯು ಅಂಟಿಕೊಂಡಿದೆ ಎಂದು ನಾವುಗಳು ಅಂದುಕೊಂಡಿದ್ದೇವೆ. ಈಗಾಗಲೇ ಮಾನ್ಯ ಸಚಿವರುಗಳು ಎರಡೂ ಸದನಗಳಲ್ಲಿಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. ಇವೊತ್ತು 30 ಭಾಗದಷ್ಟು ಕಾಯಿಲೆ ಇದೆ ಎಂದು ಹೇಳಿದ್ದಾರೆ. ನನಗೆ ತಿಳಿದಂತೆ 50 ಕ್ಕೂ ಹೆಚ್ಚು ಭಾಗ ಆ ಖಾಯಿಲೆಯು ಹಬ್ಬಿಕೊಂಡಿದೆ. ತೆಂಗಿನ ಮರಗಳಿಗೆ ಇದು ಬಹಳ ಬೇಗ ಬಂದು ಬಿಡುತ್ತದೆ. ಈಗ ನಾವು ರೂಟ್ ಫೀಡಿಂಗ್ ಮಾಡಿದ್ದೇವೆ. ಆದರೆ ಹೊಂಬಾಳೆಗೆ ಮತ್ತು ಗೊಂಚಲಿಗೆ ಹೊಡೆಯುವಂತಹ ಕಾರ್ಯವು ನಮಗೆ ಕಷ್ಟವಾಗುತ್ತದೆ. ಆದ್ದರಿಂದ ಆ ಬಗ್ಗೆ ತಾವುಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಇವೊತ್ತು ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಈ ರೋಗವು ನಿಯಂತ್ರಣದಲ್ಲಿ ಬಂದಿದೆಯೇ? ಇವೊತ್ತು

ಕೇಂದ್ರ ಸರಕಾರದ ಬಳಿಯಲ್ಲಿ ಈ ಕುರಿತು ಮಾಹಿತಿಗಳಿದ್ದರೆ ಅದನ್ನು ನಮಗೆ ತಿಳಸಬೇಕಾಗುತ್ತದೆ. ತಾಂತ್ರಿಕ ತಜ್ಞರು ಏನಿದ್ದಾರೆ, ಅವರುಗಳಿಂದ ಎಲ್ಲಾ ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿಯೂ ಕೂಡ ಔಷಧಿಯನ್ನು ಹೊಡೆದಿರತಕ್ಕಂಥ ಭಾಗಗಳಲ್ಲಿ ಈ ರೋಗವು ನಿಯಂತ್ರಣಕ್ಕೆ ಬಂದಿದೆಯೇ? ಎಂಬ ಬಗ್ಗೆ ಸಚಿವರು ತಿಳಿಸಬೇಕು. ನಮ್ಮ ಕೃಷಿ ವಿಶ್ವವಿದ್ಯಾನಿಲಯದಲ್ಲಿ ತಾಂತ್ರಿಕವಾಗಿ ಅನಾಲಿಸಸ್ ಮಾಡಿ, ರೋಗ ನಿಯಂತ್ರಣದ ಕುರಿತಾದ ಅವರ ವರದಿಯು ತಮ್ಮ ಮುಂದಿದ್ದರೆ ಅದನ್ನು ಕೂಡ ನಮಗೆ ತಿಳಿಸಬೇಕೆಂದು ಕೋರುತ್ತೇನೆ. ಈ ಕುರಿತು ಯಾವುದೇ ತಜ್ಞರು ವರದಿಯ ಬಗ್ಗೆ ತಾವುಗಳು ಸದನದಲ್ಲಿ ತಿಳಿಸಬೇಕಾಗುತ್ತದೆ. ಇದನ್ನು ಸುಮ್ಮನೆ ಮಾಡಿಕೊಳ್ಳುತ್ತಾ ಹೋದರೆ ಎರಡು ತಿಂಗಳು ಉಪಯೋಗಿಸಬಾರದು ಅಂತಾರೆ, 15 ದಿವಸ ಉಪಯೋಗಿಸಬಾರದು ಅಂತಾರೆ 40 ದಿವಸ ಉಪಯೋಗಿಸಬಾರದು ಅಂತಾರೆ. ಇದರ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲ. ಇವತ್ತು ತಾವು ಮಾಡಿರುವ ಕಾರ್ಯ ನುಸಿಬಾಧೆ ವಿಷಯದಲ್ಲಿ ಹೋಬಳಿ ಮಟ್ಟ ಮತ್ತು ಪಂಚಾಯಿತಿ ಮಟ್ಟಕ್ಕೆ ತಲುಪಿದೆ. ಆದರೆ ಹಳ್ಳಿ ಮಟ್ಟಕ್ಕೆ ತಲುಪಿಲ್ಲ. ಈಗ ರೋಗ ಆಗಿರುವುದನ್ನು ಸ್ಯಾನಿಟೇಶನ್ ಕಲ್ಚರ್ ಎಂದು ಅದನ್ನು ಕಿತ್ತು ಸಂಪೂರ್ಣ ಸುಟ್ಟು ಹಾಕಬೇಕು. ಇನ್ನೂ ಆ ಕಾರ್ಯ ಆಗಿಲ್ಲ. ಮತ್ತು ತಮ್ಮಲ್ಲಿ ಇಲಾಖೆಗಳ ಸಮನ್ವಯ ಇಲ್ಲ. ತಾವು ಜಿಲ್ಲಾಧಿಕಾರಿಗಳನ್ನು ಮಾಡಿದ್ದೀರಿ. ಇತರೆ ಇಲಾಖೆಗಳನ್ನೂ ಸೇರಿಸಿಕೊಂಡು ಒಟ್ಟಾರೆ ಸಮರೋಪಾದಿಯಲ್ಲಿ ಮಾಡಬೇಕೆಂಬ ನಮ್ಮೆಲ್ಲರ ಬಯಕೆ ಏನಿದೆ ಆ ಕಾರ್ಯ ಕೆಳಹಂತದಲ್ಲಿ ಆಗುತ್ತಿಲ್ಲ. ಅದಕ್ಕೆ ಸಮನ್ವಯ ಮಾಡಿ ಅವರಿಗೆ ಜೀಪ್ ಒದಗಿಸುವುದು ಅಧಿಕಾರಿಗಳನ್ನು ಕೊಡುವುದು -ತೋಟಗಾರಿಕೆ ಇಲಾಖೆ ಬಹಳ ಸಣ್ಣದು. ಅವರಿಂದಲೇ ಎಲ್ಲಾನೂ ಆಗುತ್ತದೆಂಬುದು ಸಾಧ್ಯವಿಲ್ಲ. ಆದ್ದರಿಂದ ಎಲ್ಲ ಇಲಾಖೆಗಳನ್ನೂ, ಯಾವ ರೀತಿ ಹಿಂದಿನ ಸರ್ಕಾರದಲ್ಲಿ ಪೋಲಿಯೋ ಲಸಿಕೆ ಕೊಡುವ ಬಗ್ಗೆ ಕೇಂದ್ರ ರಾಜ್ಯ ಸರ್ಕಾರಗಳು ಬಹಳ ಮಾಡಿದವು. ಅದನ್ನು ಎರಾಡಿಕೇಟ್ ಸಂಪೂರ್ಣ ಮಾಡಬೇಕು ಎಂದು ಆ ರೀತಿ ಇವತ್ತು 8 ಕೋಟಿ ತೆಂಗಿನ ಮರಗಳು ಅಥವಾ ಸಚಿವರು ತಿಳಿಸಿರುವಂತೆ 60 ಲಕ್ಷ ಮರಕ್ಕೆ ಇದುವರೆಗೂ ಮಾಡಿದ್ದೇವೆ ಅನ್ನುವುದೂ ಸಾಧ್ಯವಾಗುವುದಿಲ್ಲ. ತಾವು ಸಂಪೂರ್ಣ ಮಾಡಬೇಕಾಗುತ್ತದೆ. ತಿಪಟೂರು ತುಮಕೂರುಗಳಲ್ಲಿ ಬಹಳ ಎತ್ತರಕ್ಕೆ ಮರಗಳಿವೆ ಅವುಗಳ ಹೊಂಬಾಳೆಗೆ ಹೊಡಿಯಬೇಕು ಅಂದರೆ ಸಾಧ್ಯವಾಗುವುದಿಲ್ಲ. ರೂಟ್‌ಫೀಡಿಂಗ್‌ನಲ್ಲಿ ಏನು ಪರಿಣಾಮ ಆಗಿದೆ ಅನ್ನುವುದನ್ನು ದಯಮಾಡಿ ತಿಳಿಸಬೇಕು. ಮತ್ತು ಸಮನ್ವಯ ಆಗಬೇಕು. ಇನ್ನು ಉಳಿದ ಅವಧಿಯಲ್ಲಿ, ನೀವು ಮಾಡಿರುವುದು ಕೇವಲ 30 ಪರ್ಸೆಂಟ್, ಇನ್ನು 70 ಪರ್ಸೆಂಟ್ ತೆಂಗು ಇದೆ. ಇದು ಪೂರಕವಾಗಿ ರೈತನಿಗೆ ಬಹಳ ತೊಂದರೆ ಆಗುವಂಥದ್ದು. ನಮ್ಮ ಕಡೆಯೇನೋ ಹಾಲು ಉತ್ಪಾದನೆಯಿದೆ, ರೇಷ್ಮೆ ಕೃಷಿಯಿದೆ, ಬೇರೆ ಬೇರೆ ತೋಟಗಾರಿಕೆ ಇದೆ. ಆದರೆ ಕೆಲವು ಜಿಲ್ಲೆಗಳಲ್ಲಿ ಸಂಪೂರ್ಣ ಅವಲಂಬನೆ ತೆಂಗಿನಿಂದ ಅವರ ಬದುಕು. ಅವರ ಬದುಕೇ ಹಾಳಾಗುವ ಪರಿಸ್ಥಿತಿ ಬಂದಿರುವುದರಿಂದ ಆ ದಿಸೆಯಲ್ಲಿ ತಾವು ಸಾಕಷ್ಟು ಮಾಹಿತಿ, ಕರಪತ್ರ, ರೈತನಿಗೆ ಕೊಡುವ ಮಾಹಿತಿ ನಮಗೆ ನಾವೇ ಮಾಡಿಕೊಳ್ಳುವ ವ್ಯವಸ್ಥೆ ಇವೆಲ್ಲ ಸೇರುತ್ತದೆ. ತಾವು 50 ಭಾಗದಷ್ಟು ಡೈಕೊಫಾಲ್ 50 ಭಾಗ ಮೆನೋಪ್ರೋಟೊಫಾಸ್ -ಇವನ್ನು ಕೊಡುತ್ತಿದ್ದೀರಿ ಆದರೆ ಇದು ಸಾಕಾಗುತ್ತಿಲ್ಲ. ಯಾವ್ಯಾವ ಕಂಪನಿಗಳಿವೆಯೋ, ಗುಣಮಟ್ಟ ಇರುವಂಥದ್ದು ಇದನ್ನೆಲ್ಲ ತಾವು ಪೂಲ್ ಮಾಡಿ ಇನ್ನೂ ಯಶಸ್ವಿಯಾಗಿ ಈ ತಿಂಗಳಲ್ಲಿ ಮಳೆ ಬರುವ ಮೊದಲೇ ಕೊಡಬೇಕಾಗುತ್ತದೆ. ಬಹಳ ಮುಖ್ಯವಾದ ಮಾಹಿತಿ ತೆಂಗು ಬೆಳೆಗಾರನಿಗೆ ತಲುಪಬೇಕಾಗಿದೆ ಇದನ್ನು ನಿಯಂತ್ರಿಸುವ ಶಕ್ತಿಯಿದೆ. ನಾವು ಮಾಡುತ್ತೇವೆ ಎನ್ನುವ ದಿಸೆಯಲ್ಲಿ ಪರಿಣಾಮಕಾರಿಯಾಗಿ

ಅಧಿಕಾರಿಗಳು ಸಮನ್ವಯ ಮಾಡಿಕೊಂಡು ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿಕೊಡಬೇಕೆಂದು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಎಂ. ಚಂದ್ರಶೇಖರಪ್ಪ (ಶಿವಮೊಗ್ಗ) : ಅಧ್ಯಕ್ಷರೇ ತೆಂಗು ಬಗ್ಗೆ ಬಹಳ ಚರ್ಚೆಯಾಗಿದೆ. ಅದೇ ರೀತಿ ಶಿವಮೊಗ್ಗ ಚಿಕ್ಕಮಗಳೂರು ಚಿತ್ರದುರ್ಗಗಳಲ್ಲಿ ಅಡಿಕೆ ಬೆಳೆ ಪಕ್ಕಕ್ಕೆ ಕೂಡ ಹರಡಬಹುದು. ಆದ್ದರಿಂದ ಆ ರೋಗದ ಬಗ್ಗೆ ಈಗಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳುತ್ತೇನೆ. ಅದೇ ರೀತಿ ನಮ್ಮಲ್ಲಿ ಪಾಮಾಯಿಲ್ ಬೆಳೆಗೆ 10- 15 ವರ್ಷಗಳಿಂದ ಸರ್ಕಾರವೇ ಹೆಚ್ಚು ಆದ್ಯತೆ ಕೊಟ್ಟು ಬೆಳೆಸುತ್ತಿತ್ತು. ಇವತ್ತು ಅದನ್ನು ಕೇಳುವವರು ಇಲ್ಲ. ಆ ಶಿವಮೊಗ್ಗ ಭದ್ರಾವತಿ ನಡುವೆ ಇರುವ ಕಾರ್ಖಾನೆ ಮುಚ್ಚಿಹೋಗಿ ಅವರ ಸ್ಥಿತಿ ಕೂಡ ಹೇಳುವಂತಿಲ್ಲ. ಮೊನ್ನೆ ಆ ಕಂಪನಿಯವರು ರೈತರು ಬಂದು ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ಪಾಮಾಯಿಲ್ ಕತೆ ಏನಾಗಿದೆಯೋ ದೇವರಿಗೇ ಗೊತ್ತು. ರೈತರ ಕಷ್ಟ ಹೇಳುವಹಾಗಿಲ್ಲ. ಆದ್ದರಿಂದ ಪಾಮಾಯಿಲ್ ಬಗ್ಗೆ ಕೂಡ ತೋಟಗಾರಿಕೆ ಸಚಿವರು ಹೆಚ್ಚಿನ ಆದ್ಯತೆ ಕೊಟ್ಟು ಅವರನ್ನು ಉಳಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಹಾಗೇ ಅಡಿಕೆ ಬೆಳೆ, ಇವತ್ತು ಕೋಟ್ಯಾಂತರ ರೂಪಾಯಿ ಉತ್ಪತ್ತಿ ತರುತ್ತದೆ ಅದು. ಆ ಅಡಿಕೆಗೆ ಏನಾಗಿದೆ ಅಂದರೆ, ಅಡಿಕೆ ಸೆಟ್ಟ 10 ವರ್ಷಗಳ ನಂತರ ಆ ಬೆಳೆ ಬರುವುದು. ಆ ತಕ್ಷಣವೇ ರೋಗವೂ ಶುರುವಾಗುತ್ತದೆ. ಶಿವಮೊಗ್ಗದಲ್ಲಿ ಕೃಷಿ ವಿಜ್ಞಾನ ಕಾಲೇಜಿದೆ. ತಾವು ಅದಕ್ಕೆ ಆದೇಶ ಕೊಟ್ಟು ಇದರ ಬಗ್ಗೆ ಒಳ್ಳೆಯ ಸಂಶೋಧನೆಗೆ ಮಾಡಿಸಬೇಕೆಂದು ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಲ್ಲದೇ ಹೋದರೆ ರೈತನಿಗೆ ಆ 10 ವರ್ಷ ವಾಪಸ್ ಬರುವುದಿಲ್ಲ. ಹಾಕಿರುವ ಮರವನ್ನು ಕಡಿಯಬೇಕಷ್ಟೇ ವಿನಾ ಬೇರೆ ಮಾರ್ಗ ಇಲ್ಲ. ಅದಕ್ಕೂ ಔಷಧಿ ಸಿಂಪಡಿಸುತ್ತಾರೆ. ಅದಕ್ಕೆ ಸಂಬಂಧಿಸಿದ ಇಲಾಖೆಯನ್ನು ಕೇಳಿದರೆ ಇತರ ಸಂಶೋಧನೆ ಬಗ್ಗೆ ನಮಗೇನು ಹೇಳಿಲ್ಲ ಎನ್ನುತ್ತಾರೆ. ಆದ್ದರಿಂದ ಸರ್ಕಾರ ಇದಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಜೊತೆಗೆ ಈ ತೆಂಗಿನ ರೋಗ ಎಲ್ಲ ಕಡೆ ಶುರುವಾಗುತ್ತದೆ. ಆದ್ದರಿಂದ ತಕ್ಷಣ ಅದಕ್ಕೆ ಟಾಸ್ಕ್‌ಫೋರ್ಸ್ ಮೂಲಕ ಹೆಚ್ಚಿನ ಆದ್ಯತೆ ಕೊಡಿ. ಹಿಂದೆ ಮಂಗಳೂರಿನಲ್ಲಿ 10- 15 ವರ್ಷಗಳ ಹಿಂದೆ ರೋಗ ತೆಂಗಿಗೆ ಬಂದಿತ್ತು. ಆಗ ಕೇಂದ್ರ ಸರ್ಕಾರ ಹೆಲಿಕಾಪ್ಟರ್ ಮೂಲಕ ಸ್ಪ್ರೇ ಮಾಡಿದಾಗ ತಕ್ಷಣ ಅದು ಕಂಟ್ರೋಲ್‌ಗೆ ಬಂದಿತ್ತು. ಆದ್ದರಿಂದ ಹೆಚ್ಚಿನ ತೆಂಗು ಇರುವ ಭಾಗದಲ್ಲಿ ತಕ್ಷಣ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಅಧ್ಯಕ್ಷರೇ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಪಾಪಣ್ಣ (ಹುಣಸೂರು) :ಅಧ್ಯಕ್ಷರೇ, ತೋಟಗಾರಿಕೆ ಹಾಗೂ ಕೃಷಿ ಸಚಿವರಿಬ್ಬರೂ ಇದ್ದಾರೆ. ಇಂತಹ ಸಮಯದಲ್ಲಿ ಡೈಕೋಫಾಲ್ ಏಕೆ ಶಿಫಾರಸ್ಸು ಮಾಡುತ್ತಾರೆ ಎಂದು ನನಗೆ ಅರ್ಥವಾಗುತ್ತಿಲ್ಲ ಕಾರಣವೇನೆಂದರೆ ಮೈಟ್ಸ್ ಬಂದು ರಸ ಹೀರಿ ಸಾಯುವ ಕೀಟ ಇದು. ಮೈಟ್ಸ್ ಇದರ ಬಗ್ಗೆ ಅವತ್ತೇ ನಾನು ಹೇಳಿದ ಡೈಕೋಫೂಲ್ ಅಗತ್ಯ ಇಲ್ಲವೆಂದು. ಅದರಿಂದ ಮೈಟ್ ಸಾಯುವುದಿಲ್ಲ. ಸಚಿವರು ಇದರ ಬಗ್ಗೆ ಸ್ಪಷ್ಟವಾದ ಉತ್ತರ ಹೇಳಬೇಕೆಂದು ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು :ಈಗ ಸಚಿವರಿಂದ ಉತ್ತರ.

ಶ್ರೀ ಸಿ. ಬೈರೇಗೌಡ : ಇಂತಹ ವಿಚಾರದಲ್ಲಿ ಸಿಂಧ್ಯಾ ಅವರು ಮಾತನಾಡಿದಿದ್ದರೆ ಹೇಗೆ ? ನಮ್ಮ ಪಕ್ಷದ ಸದನದ ನಾಯಕರಿಗೇ ಮಾತನಾಡಲು ಅವಕಾಶ ವಿಲ್ಲವೇ? ಅವರೂ ಚರ್ಚೆಗೆ ಅವಕಾಶ ಕೊಡಬೇಕೆಂದು ಮನವಿ ಕೊಟ್ಟ ಮುಖಂಡರಲ್ಲಿ ಒಬ್ಬರು.

ಉಪಾಧ್ಯಕ್ಷರು : ಆಯಿತು ಎರಡು ನಿಮಿಷ ಮಾತನಾಡಿ.

+ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಅಧ್ಯಕ್ಷರೇ, ನನಗೆ ಸರ್ಕಾರದ ಅವಸರಗಳು ಆದ್ಯತೆಗಳು ಅರ್ಥವಾಗುತ್ತಿಲ್ಲ ಅಥವಾ ನೀವೇ ಹೀಗೆ ಮಾಡುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ಅಲ್ಲಿ ನುಸಿ ರೋಗದ್ದಿದು ಸುಮಾರು 8 ಕೋಟಿ ಮರಗಳಿಗೆ ಬಾಧೆ ಬಂದಿದೆ ಇದರ ಬಗ್ಗೆ ಚರ್ಚೆ ಮಾಡ ಬೇಕೆಂದು ನಾನು ಸುಮಾರು ಒಂದು ತಿಂಗಳಿಂದ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಜೊತೆ ಮಾತನಾಡಿ ನನ್ನ ಕ್ಷೇತ್ರದ ಸಂಬಂಧಿಸಿದ ರೈತರ ಸಭೆ ಕರೆದು, ಜಿಲ್ಲಾ ಪಂಚಾಯತಿ ಸಭೆಯಲ್ಲಿ ಭಾಗವಹಿಸಿ ಇಲ್ಲಿ ಮಾತನಾಡ ಬೇಕೆಂದರೆ ಒಂದೆರಡು ನಿಮಿಷ ಕೊಟ್ಟರೆ ನನಗೆ ಅರ್ಥವಾಗುವುದಿಲ್ಲಪ್ಪ. ಯಾವ ರೀತಿ ಸಂಸದೀಯ ವ್ಯವಹಾರಗಳ ಸಚಿವರು ತಮಗೆ ಬ್ರೀಫ್ ಮಾಡುತ್ತಾರೆ ಎಂದು ನನಗೆ ಅರ್ಥವಾಗುವುದಿಲ್ಲ. ಜಿಲ್ಲಾಪಂಚಾಯಿತಿ ಮಸೂದೆ ಮೇಲೂ ನಾವು ಬೇಡ ಅಂದರೂ ತರಾತುರಿಯಲ್ಲಿ ಪಾಸ್ ಮಾಡಿಕೊಂಡು ಹೋಗುತ್ತೀರಿ. ನಿಮ್ಮ ಹಣಕಾಸಿನ ಮಸೂದೆಗಳನ್ನೂ, ನೋ, ಸೋ ನಾನು ಅಧ್ಯಕ್ಷ ಪೀಠವನ್ನೇ ಪ್ರಶ್ನಿಸುತ್ತಿರುವೆ. ಏನಾಗಿಬಿಡುತ್ತದೆ? ಚರ್ಚೆಗೆ ಅದನ್ನು ಏಕೆ ಒಳಪಡಿಸಬಾರದು? ಇವತ್ತು ಶುಕ್ರವಾರ ಹೋಗ ಬೇಕೂಂತ ಏನಿದೆ ? ಏಕೆ ನಾಳೆವರೆಗೂ ಸದನ ಮುಂದೂಡಬಾರದು? ಬಿಎಸಿಯಲ್ಲಿ ನಾವೇನಾದರು ಹೇಳ ಹೋದರೆ ಅದಕ್ಕೂ ನೈತ ವಿರುದ್ಧವಾಗೇ ಮಾತನಾಡಿತ್ತೀರಿ. ನಾವು ಏಕೆ ಬರಬೇಕು ಇಲ್ಲಿಗೆ? ನೋಡಿ ಸ್ವಾಮಿ, ಅದಲ್ಲ ನೀವು, ನೋಡಿ ನಾನು ಒಂದು ರಾಷ್ಟ್ರೀಯ ಪಕ್ಷದ ಮುಖಂಡನಾಗಿ ಕೆಲಸಮಾಡುತ್ತಿದ್ದೇನೆ. ಒಂದೆರಡು ನಿಮಿಷ ಅಂದರೆ, ಏನು ನಾವು ಇಲ್ಲೇ ಹೇಳಬೇಕು ಎಂದು ಎಲ್ಲಿದೆ? ನಾನು ನೀವು ಹೇಳುವುದನ್ನು ಕೇಳಲು ಸಿದ್ದವಿಲ್ಲ. ನಾನು ಅಧ್ಯಕ್ಷ ಪೀಠದ ಮೇಲೆ ಆರೋಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ನೀವಿರಲಿಲ್ಲ, ನಿಮ್ಮ ಪಕ್ಷದ ಸಾಕಷ್ಟು ಜನರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ತಾವು ಮಾತನಾಡಲು ಎದ್ದಾಗ, ಉತ್ತರಿಸಲು ನಿಂತಿದ್ದ ಸಚಿವರು ಈಲ್ಡ್ ಆಗಿದ್ದಾರೆ.

-ಗದ್ದಲ-

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಇದು ಶಾಸಕರಿಗೆ ಮಾಡಿದ ಅವಮಾನ. ಒಂದು ನಿಮಿಷ ಎರಡು ನಿಮಿಷ ಎಂದು ನೀವು ಹೇಳಬಾರದು. ಬೇರೆಯವರು ಮಾತನಾಡಿದ್ದರೆ ನನಗೆ ಅವಕಾಶವಿಲ್ಲ ಎಂದು ಹೇಳಿ. ಜಗತ್ತಿಗೆ ಗೊತ್ತಾಗಲಿ ಇವರು ಮಾತನಾಡಲು ಅವಕಾಶ ಕೊಡಲಿಲ್ಲ ಎಂದು ನಮಗೇನು ಚಟ ಇದೆ ಅಂದುಕೊಂಡಿದ್ದೀರಾ ನೋಡಿ ಉಪಾಧ್ಯಕ್ಷರೇ, ನಾವು ಅನಾವಶ್ಯಕವಾಗಿ ಸಭೆ ಸಮಯ ಹಾಳು ಮಾಡಬೇಕೂಂತ ಇಲ್ಲ. ಇತರೆ ಸದಸ್ಯರು ಮಾತನಾಡಿರುವುದನ್ನು ನಾನು ಮತ್ತೆ ಹೇಳಹೋಗುವುದಿಲ್ಲ. ನನಗೂ ಅನುಭವ ಇದೇರಿ ಉಪಾಧ್ಯಕ್ಷರೇ, ನಾವು ಮಾತನಾಡುವಾಗ ಇತಿಮಿತಿ ತಿಳಿದುಕೊಂಡು ಮಾತನಾಡುತ್ತೇನೆ. ಸರ್ಕಾರ ನಡೆಸಿರುವವರು ನಾವು ನಮಗೂ ಗೊತ್ತಿದೆ. ನಮಗೆ ಇದು ಅರ್ಥವಾಗುವುದಿಲ್ಲ.

1.40 ಪಿ.ಎಂ.

ಉಪಾಧ್ಯಕ್ಷರು : ನಿಮಗೆ ಮಾತನಾಡುವುದಕ್ಕೆ ಹೇಳಿದ್ದೇನಲ್ಲ, ಮತ್ತೆ ಏಕೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಇದು ಸರಿಯಲ್ಲ. ನಾನಿಷ್ಟೆ ಹೇಳುವುದು. ಇಷ್ಟೊಂದು ಅವಸರವಿರುವುದರಿಂದಾಗಿ ನಾನು ಈ ಸರ್ಕಾರಕ್ಕೆ ಹೇಳುವುದೇನೆಂದರೆ ಶ್ರೀಮಾನ್ ಬೈರೇಗೌಡರು ಸೋಮಶೇಖರ್‌ರವರು, ಆಡಳಿತ ಪಕ್ಷದ ಅನೇಕ ಗೌರವಾನ್ವಿತ ಸದಸ್ಯರುಗಳು, ಬಿಜೆಪಿ ಸದಸ್ಯರು ಎಲ್ಲಾ ಮಾತನಾಡಿದ್ದಾರೆ. ನಾನುಸರ್ಕಾರಕ್ಕೆ ಕೇಳುವುದು ಎರಡೇ ಲೋಕಸಭಾ ಸದಸ್ಯರುಗಳು 28 ಜನ ಇದ್ದಾರೆ. ಕರ್ನಾಟಕದಿಂದ ದೆಹಲಿಗೆ ಹೋಗಿರುವವರು ಈ ಕಾರ್ಯಕ್ರಮವನ್ನು ಬೆಂಗಳೂರು ಜಿಲ್ಲೆ ಅಥವಾ ಮಂಗಳೂರು ಜಿಲ್ಲೆ ಒಂದರಲ್ಲೇ ಔಷಧಿ ಹೊಡದರೆ ಕಂಟ್ರೋಲ್ ಮಾಡುವುಕ್ಕಾಗುವುದಿಲ್ಲ. ಟೆಕ್ನಿಕಲ್ ಪಾಯಿಂಟ್ಸ್ ಬಗ್ಗೆ ನಾನು ಹೋಗುತ್ತಿಲ್ಲ. 28 ಜನ ಲೋಕಸಭಾ ಸದಸ್ಯರುಗಳು 15-16 ಜನ ರಾಜ್ಯಸಭಾ ಸದಸ್ಯರುಗಳಿದ್ದಾರೆ. ಅದರಲ್ಲಿ ತುಮಕೂರಿನ ಬಸವರಾಜುರವರು ಸ್ವಲ್ಪ ಇನಿಸಿಯೇಟಿವ್ ತೆಗೆದುಕೊಂಡು ಡೆಲಿಗೇಷನ್ ಹೋಗಿ ಸ್ವಲ್ಪ ಕೆಲಸವನ್ನು ಮಾಡುವುದಕ್ಕೆ ಬಂದಿದ್ದಾರೆ. ಕೇಂದ್ರ ಸರ್ಕಾರ ಇದರ ಬಗ್ಗೆ ಗಮನಹರಿಸಿಲ್ಲ ಎಂದು ಬಹಳ ದುಃಖದಿಂದ ನಾನು ಈ ಮಾತನ್ನು ಹೇಳಬೇಕಾಗುತ್ತದೆ. ನಾನು ಕೇಂದ್ರ ಸರ್ಕಾರದ ಮಂತ್ರಿಗಳಿಗೂ ಸಹಿತ ಈ ವಿಷಯವನ್ನು ಹೇಳಿದ್ದೇನೆ. ನೀವು ಮಾಡುತ್ತಿರುವುದು ಸರಿಯಿಲ್ಲ. ಸತ್ಯನಾರಾ ಯಣರಾವ್, ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಏನುಹೇಳಿದ್ದಾರೆಂದರೆ ರಾಜ್ಯ ಸರ್ಕಾರ 2 ಕೋಟಿ 34 ಲಕ್ಷರೂ ಪಾಯಿಗಳನ್ನು ಬಿಡುಗಡೆ ಮಾಡಿದೆ ಅವರು ಔಷಧಿಯನ್ನು ಸ್ಪ್ರೇ ಮಾಡಿದ್ದಾರೆ, ಅದನ್ನು ಬಿಟ್ಟು ಉಳಿದಿದ್ದನ್ನು 5 ವರ್ಷದ ಅವಧಿಯಲ್ಲಿ 80 ಕೋಟಿ ರೂಪಾಯಿಗಳ ಸ್ಪ್ರೇ ಮಾಡುವುದಕ್ಕೆ ದುಡ್ಡು ಕೊಡಿ ಎಂದು ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎನ್ನುವ ಹೇಳಿಕೆಯನ್ನು ಫೆಬ್ರವರಿ 24ನೇ ತಾರೀಖು ಪಾರ್ಲಿಮೆಂಟಿನಲ್ಲಿ ಕೊಟ್ಟಿರುವುದು ಬಿಟ್ಟರೆ ಕೇಂದ್ರ ಸರ್ಕಾರದವರು ಇದುವರೆಗೂ ಸಹಾ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ತೆಂಗಿನ ಅಭಿವೃದ್ಧಿ ಮಂಡಳಿ ಇದೆ. ಅದೂ ಸಹಿತ ಏನೂ ಕೆಲಸವನ್ನು ಮಾಡುತ್ತಿಲ್ಲ. ನಮ್ಮ ಲೋಕಸಭಾ ಸದಸ್ಯರುಗಳು ರಾಜ್ಯಸಭಾ ಸದಸ್ಯರುಗಳು ಏನು ಮಾಡುತ್ತಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ನಿಮ್ಮ ಪಕ್ಷದವರೂ ಇದ್ದಾರೆ ಏನು ಉಪಯೋಗವಾಗಿಲ್ಲ. ಅದಕ್ಕೆ ನಾನು ಬಜೆಟ್ ಮೇಲೆ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಅರ್ಜಿ ಮಾಡಿದೆ. ನಿಮ್ಮ ಕ್ಯಾಬಿನೆಟ್‌ನಲ್ಲಿ 44-45 ಜನರು ಇದ್ದೀರಿ. ನಿಮ್ಮ ಕ್ಯಾಬಿನೆಟ್‌ನಿಂದ ಒಬ್ಬರನ್ನು ಅಪಾಯಿಂಟ್ ಮಾಡಿ. ಅವರು ಇದನ್ನೆಲ್ಲಾ ಕೋ-ಆರ್ಡಿನೇಟ್ ಮಾಡುತ್ತಾರೆ. ಬರೀ ಬ್ಯುರೋಕ್ರಾಟ್ಸ್ ಇದನ್ನು ಮಾಡುತ್ತಿದ್ದರೆ ಆಗುವುದಿಲ್ಲ. ಪ್ರಧಾನಮಂತ್ರಿಗಳ ಮೇಲೆ ಸಂಬಂಧಪಟ್ಟ ಮಂತ್ರಿಗಳು, ಹಣಕಾಸಿನ ಮಂತ್ರಿಗಳ ಮೇಲೆ ಒತ್ತಾಯ ತರಬೇಕಾಗುತ್ತ ಪೊಲಿಟಿಕಲ್ ಲಾಬಿಯಿಂಗ್ ಬೇಕಾಗುತ್ತದೆ. ಪ್ರೆಷರ್ ಬೇಕಾಗುತ್ತದೆ. ಕೇರಳದಲ್ಲಿರುವ ಚೀಫ್ ಮಿನಿಸ್ಟರ್, ಪಕ್ಕದ ರಾಜ್ಯವಾದ ಗೋವಾದ ಚೀಫ್ ಮಿನಿಸ್ಟರ್, ಇವರನ್ನೆಲ್ಲಾ ಕರೆಯಿಸಿ ನೀವೇನಾದರೂ ಮೀಟಿಂಗ್‌ನ್ನು ಮಾಡಿದ್ದೀರಾ? ಪಲ್ಸ್ ಪೋಲಿಯೋ ಪ್ರೋಗ್ರಾಮ್‌ನ್ನು ಇಡೀ ದೇಶದಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು, ಪ್ರೆಸಿಡೆಂಟ್ ಆಫ್ ಇಂಡಿಯಾ ಎಲ್ಲಾ ಸೇರಿಕೊಂಡು ಮಾಡಿದರು. ಆ ರೀತಿ ಇದನ್ನೂ ಕೂಡ ಉಳಿಸುವುದಕ್ಕೆ ಏನಾದರೂ ಮಾಡಿದ್ದೀರೊ ಇಲ್ಲವೋ? ಇದರ ಬಗ್ಗೆ ನಾವು ತಿಳಿದುಕೊಳ್ಳುವುದಕ್ಕೆ ಸರ್ಕಾರಕ್ಕೆ ನಾವು ಸಲಹೆಗಳನ್ನು ಕೊಡಬೇಕಾಗುತ್ತದೆ. ಆ ಕಾರಣದಿಂದಲೇ ನಾವು ಮಾತನಾಡಬೇಕು ಎಂದು ಹೇಳತಕ್ಕಂಥದ್ದು. ಇವರು 80 ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ನಮ್ಮಲ್ಲಿ ಕೃಷಿ ಮಂತ್ರಿಗಳಾಗಿದ್ದ ಶ್ರೀಮಾನ್ ಬೈರೇಗೌಡರು ಹೇಳಿದರು, ಹಣಕಾಸಿಗಿಂತ ಹೆಚ್ಚಾಗಿ ಒಂದು ಕಡೆ ಇದು ಬಗೆಹರಿದರೆ ಆಗುವುದಿಲ್ಲ. ಇಡೀ ಎಲ್ಲಾ ರಾಜ್ಯಗಳಲ್ಲೂ ಸಹಿತ ಇದು ಬಗೆಹರಿಯಬೇಕಾಗುತ್ತದೆ. ಇದನ್ನು ತಿಳಿವಳಿಕೆ ದೃಷ್ಟಿಯಿಂದ ಮಾಡಬೇಕಾಗುತ್ತದೆ ಎಂದು ಹೇಳಿದರು.

ಮಾನ್ಯ ಮುಖ್ಯಮಂತ್ರಿಗಳು ಬಾಕಿ ವಿಷಯಗಳ ಬಗ್ಗೆ ಹೇಗೆ ಇನಿಸಿಯೇಟಿವ್ ತೆಗೆದುಕೊಂಡು ಮಾಡಿದರೋ ಮಾಹಿತಿ ತಂತ್ರಜ್ಞಾನದ ನನ್ನ ಪ್ರಿಯಾರಿಟಿ ಎಂದು ಹೇಳಿದರು. ಈಗ ಹಾರ್ಟಿಕಲ್ಚರ್ ಡೆವೆಲಪ್‌ಮೆಂಟ್ ಬಗ್ಗೆ. ಇದು ಸುಡುತ್ತಾ ಇದೆ. ಬೆಂಕಿ ಹತ್ತಿಕೊಂಡಿದೆ. ಇನ್ನು ನಿಮ್ಮ ಡೆವಲಪ್‌ಮೆಂಟ್ ಏನು ಬರುತ್ತದೆ. ಆ ಕಾರಣದಿಂದಾಗಿ ಇದಕ್ಕೆ ಯಾವ ಒಂದು ಆದ್ಯತೆಯನ್ನು ಕೊಟ್ಟು ಯಾವ ಒಂದು ಸಮರೋಪಾದಿಯಲ್ಲಿ ಕೆಲಸವಾಗಬೇಕಾಗಿತ್ತೋ ಆ ಕೆಲಸವಾಗಿಲ್ಲ ಇದು ಕೇಂದ್ರ ಸರ್ಕಾರಕ್ಕೂ ಸಹಿತ ನೀವು ಇದನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಈಗ ಟೊಬಾಕೊ ಗ್ರೋಯರ್ಸ್ ಸಮಸ್ಯೆ ಬಗ್ಗೆ ಒಂದು ಡೆಲಿಗೇಷನ್‌ನ್ನು ತೆಗೆದುಕೊಂಡುಹೋಗುತ್ತಿದ್ದೇವೆ ಎಂದು ಹೇಳುತ್ತೀರಿ. ಎಲ್ಲದಕ್ಕೂ ನಾವು ಡೆಲಿಗೇಷನ್ನೇ ಹೋಗುವುದಕ್ಕಾಗುವುದಿಲ್ಲ. ಲೋಕಸಭಾಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಇರುವುದೇ ಆ ದೃಷ್ಟಿಯಿಂದಾಗಿ. ಅದರ ಮೇಲೆ ಒತ್ತಡ ತರಬೇಕು. ಮುಖ್ಯಮಂತ್ರಿಗಳು ಕರ್ನಾಟಕದ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳನ್ನು ಕರೆಯಬೇಕು. ಕೇರಳದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು. ಪಕ್ಕದ ರಾಜ್ಯದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು. ಇದಕ್ಕೊಂದು ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಎನ್ನತಕ್ಕಂಥದ್ದು ನನ್ನ ಸಲಹೆ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಬಹಳಷ್ಟು ಹಿರಿಯ ಶಾಸಕರುಗಳು ನಮ್ಮ ಕರ್ನಾಟಕ ರಾಜ್ಯದ ಅತಿ ಮುಖ್ಯವಾದ ಬೆಳೆಗಳಲ್ಲಿ ಹಾಗೂನಮ್ಮ ದೇಶದ ಎರಡನೇ ದೊಡ್ಡ ಭಾಗವಾದ ಕರ್ನಾಟಕದ ಎರಡನೇ ಭಾಗದಷ್ಟು ತೆಂಗನ್ನು ಬೆಳೆಯುತ್ತೇವೆ. ಅದರಲ್ಲೂ ಕೂಡ ಸುಮಾರು 60 ರಿಂದ 70 ಪರ್‌ಸೆಂಟ್ ಸಣ್ಣ ರೈತರು, ಅತಿ ಸಣ್ಣ ರೈತರುಗಳು ಬಹಳಷ್ಟು ರೈತರು ಈ ತೆಂಗಿನ ಬೆಳೆ ಬೆಳೆದು ಮಾರುವುದರಿಂದ ಇದರ ಮೇಲೆ ಜೀವನವನ್ನು ಅವಲಂಬಿಸಿದ್ದಾರೆ ಎಂದು ಎಲ್ಲರೂ ಹೇಳಿದ್ದಾರೆ. ಎಲ್ಲಾ ಶಾಸಕರುಗಳದ್ದು ಒಂದೇ ಕಾಳಜಿ. ರೈತರುಗಳನ್ನು ಉಳಿಸುವುದೇ ಒಂದು ಮುಖ್ಯವಾದ ವಿಷಯವಾಗಿದೆ. ಈಗಾಗಲೇ ವಿಸ್ತೀರ್ಣದ ಬಗ್ಗೆ ನಷ್ಟವಾಗಿರುವ ಬಗ್ಗೆ ಎಲ್ಲಾ ಬಗೆಯ ವಿಷಯಗಳನ್ನು ಹೇಳಿದ್ದಾರೆ. ಅದರ ಬಗ್ಗೆ ಮತ್ತೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನೆಲ್ಲಾ ಅರಿತುಕೊಂಡು ಕ್ರಿಯೆಯನ್ನು ಯಾವ ರೀತಿ ಇದಕ್ಕೆ ಆಂದೋಲನ ಕೊಡಬೇಕೆಂದು ಹೇಳಿ ಮೊಟ್ಟಮೊದಲನೆಯದಾಗಿ ಔಷಧಿಯನ್ನು ಖರೀದಿಸುವ ಬಗ್ಗೆ ನಾವು ಇದಕ್ಕಾಗಿ ಅಗ್ರಿಕಲ್ಚರ್ ಸ್ಪೆಷಲಿಸ್ಟ್ ಗಳನ್ನು ಡಾ॥ ಮೂಲಿಂಗ್ ಮತ್ತು ಡಾ ॥ ಪುಟ್ಟಸ್ವಾಮಿ ಎಂದು ಕರೆಸಿದ್ದೇವೆ . ಅವರುಗಳು ಹೇಳಿದ ಪ್ರಕಾರ ಅವರು ಏನು ಪ್ರಿಸ್ಕ್ರೈಬ್ ಮಾಡಿದರು ಹಾಗೂ ಅದರಲ್ಲಿ ಹೆಚ್ಚಿನದಾಗಿ ಡಿಡಿಟಿ ಕಡಿಮೆ ಇರಬೇಕು ಆ ಔಷಧದಲ್ಲಿ ಎಂದು ಕೂಡ ಹೇಳಿದ್ದಾರೆ. ವಾತಾವರಣದಲ್ಲಿ ಕೂಡ ಯಾವ ರೀತಿ ತೊಂದರೆಯಾಗಬಾರದು ಎಂದು ಹೇಳಿದ ಪ್ರಕಾರವೇ ನಾವು ಈ ಔಷಧಗಳನ್ನು ಉಪಯೋಗಿಸುವುದಕ್ಕೆ ಅನುಮತಿಯನ್ನು ಕೊಟ್ಟಿದ್ದೇವೆ. ಇದರಲ್ಲಿ ಕೆಮಿಕಲ್‌ನ ಬೇರೆ ರೀತಿ ಬೇರೆ ಬ್ರಾಂಡ್ ಹೆಸರಿನಲ್ಲಿ ಕೊಡುತ್ತಿದ್ದಾರೆ. ಇದರಲ್ಲಿ ಯಾವುದೇ ರೀತಿ ಒತ್ತಡ ಇರಬಾರದು ಎಂದು ಹೇಳಿ ಬಹಳಷ್ಟು ರೈತರುಗಳಿಗೆ ಅನುಭವವಿರುವುದರಿಂದ ತಮ್ಮ ಅನುಭವದ ಔಷಧಿಗಳು ಯಾವುದು ಬೇಕೊ ಆ ರೀತಿ ಹೇಳುವ ಒಂದು ಸ್ವಾತಂತ್ರ್ಯವನ್ನು ಕೂಡ ನಾವು ರೈತರಿಗೆ ಕೊಟ್ಟಿದ್ದೇವೆ. ಇದರಲ್ಲಿ ಕ್ರಿಷ್ಟಲ್‌ಕ್ಲಿಯರ್ ಇದೆ. ಒಳ್ಳೆಯ ಔಷಧವನ್ನು ಕೊಡಬೇಕು, ಈ ರೋಗವನ್ನು ನಿರ್ಮೂಲನ ಮಾಡಬೇಕೆನ್ನುವ ಉದ್ದೇಶದಿಂದ ನಾವು ಆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಮಾನ್ಯ

ಬೈರೇಗೌಡರು ಈ ಸದನಕ್ಕೆ ಬಹಳಷ್ಟು ಮಾರ್ಗದರ್ಶನ ರೂಪದಲ್ಲಿ ಹೇಳಿದ್ದಾರೆ. ಈ ರೋಗ ಹೇಗೆ ಬಂತು? ಈ ರೋಗವನ್ನು ಡೆಮಾನ್‌ಸ್ಟ್ರೇಷನ್ ಮಾಡುವ ಕಾಲಕ್ಕೆ ಬೇರಿಗೆ ಪ್ಲಾಸ್ಟಿಕ್ ಚೀಲದಲ್ಲಿ ಔಷಧಿಯನ್ನು ಹಾಕಿದನ್ನು ಬುಡದಲ್ಲಿ ಕಟ್ಟಬೇಕು, ಅದನ್ನು ನಾನೇ ಮಾಡಿದ್ದೇನೆ ಎಂದು ತಮ್ಮ ಅನುಭವದ ಮಾತನ್ನು ಆ ಸಭೆಯಲ್ಲಿ ಹೇಳಿದ್ದಾರೆ. ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಅಭಿನಂದನೆಸಲ್ಲಿಸುತ್ತೇನೆ. ಇವತ್ತು ಔಷಧಿ ಬಿಟ್ಟು ಬೇರೆ ಎರಡನೇ ವಿಷಯವಿಲ್ಲ. ಈಗ ಇದು ಒಂದು ಆಂದೋಲನದ ರೀತಿ ಆಗಬೇಕು. ಇವತ್ತು ಕೆಲವರು ಸಾಹುಕಾರರು ಔಷಧಿಯನ್ನು ಹೊಡೆದು ಬಡವರು ಔಷಧಿಯನ್ನು ಹೊಡೆಯದಿದ್ದರೆ ಕಷ್ಟವಾಗುತ್ತದೆ. ಆ ಭಾಗದವರು ಹೊಡೆದು ಈ ಭಾಗದವರು ಹೊಡೆಯದಿದ್ದರೆ ಈ ರೋಗ, ಈ ಬಾಧೆ ನಿರ್ಮೂಲವಾಗುವುದಿಲ್ಲ ಎಂದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಎಲ್ಲಾ ಜಿಲ್ಲೆಯ ರೈತರುಗಳು ಒಂದೇ ಸಲ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಒಂದು ತೆಂಗಿನ ಮರವನ್ನು ಬುಡದಿಂದ ಎಲ್ಲಾ ತೆಂಗಿನ ಮರಗಳಿಗೂ ಈ ಔಷಧಿಯನ್ನು ಹೊಡೆದರೆ ಮಾತ್ರ ಇದು ಈ ರೋಗ ನಿರ್ಮೂಲನವಾಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲವೆಂದು ಹೇಳಿ ಬರೆದಿದ್ದಾರೆ. ಆದರೆ ನಾವೇನು ಅಂದುಕೊಂಡಿದ್ದೇವೆ , ಆ ರೀತಿ ಇನ್ನು ರೈತರುಗಳು ಮುಂದೆ ಬಂದಿಲ್ಲ. ಇವತ್ತು ನಾವು ಈಗಾಗಲೇ ಎಲ್ಲಾ ಶಾಸಕರುಗಳಿಗೂ, ಎಂಪಿಗಳಿಗೂ ಮತ್ತು ಜಿಲ್ಲಾ ಪರಿಷತ್ತಿನವರಿಗೂ ಪತ್ರವನ್ನು ಬರೆದು ಈ ಕಾರ್ಯಕ್ರಮವನ್ನು ಸಣ್ಣ ಗ್ರಾಮಗಳ ಮಟ್ಟಕ್ಕೂ ಇದನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿ ಸಲಹೆಗಳನ್ನು ಸೂಚಿಸಿದ್ದೇವೆ. ಇದರ ಬಗ್ಗೆ ಒಂದು ಪತ್ರವನ್ನು ಸಹಿತ ಪ್ರಿಂಟ್ ಮಾಡಿಸಿ ಎಲ್ಲಾ ಊರುಗಳಿಗೂ ಮುಟ್ಟಿಸಿದ್ದೇವೆ. ಆದರೂ ಕೂಡ ಕೆಲವು ಶಾಸಕರು ಇದರ ಬಗ್ಗೆ ಅನುಮಾನಪಟ್ಟಿದ್ದಕ್ಕೆ ನಾಳೆ 1ನೇ ತಾರೀಕಿನಿಂದ 10ನೇ ತಾರೀಖಿನೊಳಗೆ 14 ಜಿಲ್ಲೆಗಳಿಗೂ ಖುದ್ದಾಗಿ ನಾನೇ ಭೇಟಿಕೊಟ್ಟು ಅಲ್ಲಿರುವ ಶಾಸಕರುಗಳನ್ನು, ಎಂಪಿಗಳನ್ನು ಮತ್ತು ಜಿಲ್ಲಾ ಪರಿಷತ್ ಸದಸ್ಯರುಗಳನ್ನು ಕಂಡು ಇದರ ರಿವ್ಯೂ ಮಾಡುತ್ತೇನೆ. ಮತ್ತು ಇಲಾಖೆಯ ಅಧಿಕಾರಿಗಳ ಜೊತೆ ಕೂಡ ರಿವ್ಯೂ ಮಾಡುತ್ತೇನೆ. ತಕ್ಕ ನಿರ್ದೇಶನವನ್ನು ಕೊಟ್ಟು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು, ಈ ಯೋಜನೆ ಯಶಸ್ವಿಯಾಗಬೇಕು ಎಂದು ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಟ್ಟು ಬರುತ್ತೇನೆ. ಹಣದ ಬಗ್ಗೆ ಯಾರೂ ಸಹ ಹೇಳಿಲ್ಲ. ಔಷಧಿಯ ಬಗ್ಗೆ ಸಹ ಹೇಳಿಲ್ಲ. ಕೇಂದ್ರ ಸರ್ಕಾರದ ಕಾರ್ಯಕ್ರಮವಾದ ಪಲ್ಸ್‌ಪೋಲಿಯೋ ರೀತಿಯಲ್ಲಿ ಔಷಧಿಯನ್ನು ಒಂದೇ ಸಮನೆ ಉಪಯೋಗಮಾಡಿದರೆ ಅನುಕೂಲವಾಗುತ್ತದೆಂದು ಸದಸ್ಯರುಗಳು ಹೇಳಿದ್ದಾರೆ. ಇದರ ಬಗ್ಗೆ ಬಹಳ ಗಂಭೀರವಾಗಿ ನಮ್ಮ ಇಲಾಖೆಯಿಂದ ನಿರ್ದೇಶನವನ್ನು ಕಳಿಸಿಕೊಡುತ್ತೇವೆ. ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಇದರ ಬಗ್ಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆಯಾಗಿದೆ. ನಾನಾ ಕಾರಣಗಳಿಂದ ಅದು ಹೊರಗಡೆ ಬಂದಿಲ್ಲ. ಇದರ ಬಗ್ಗೆ ಅಲ್ಲಿ ಯಾರು ನಿಜವಾಗಿ ಸಂಶೋಧನೆ ಮಾಡಿದ್ದಾರೆ ಅವರಿಗೆ ಸರಿಯಾದ ರೀತಿಯಲ್ಲಿ ಪ್ರೋತ್ಸಾಹ ಸಿಕ್ಕಿಲ್ಲ. ಅದರ ಬಗ್ಗೆ ಇಲಾಖೆಯಿಂದ ವಿಚಾರಣೆ ಮಾಡಬೇಕು ಎಂದು ತಿಳಿಸಿರುತ್ತೀರಿ. ಅದರಲ್ಲು ಸಿದ್ದಲಿಂಗಯ್ಯನವರ ಬಗ್ಗೆ ವಿಚಾರಣೆ ಮಾಡುವ ಬಗ್ಗೆ ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ತರಿಸಿ ನಮ್ಮ ಕೈಲಾದರೆ ಇಲಾಖಾ ವಿಚಾರಣೆ ನಡೆಸಿ ಅನ್ಯಾಯವಾಗಿದ್ದರೆ ಸರಿಪಡಿಸುವ ಭರವಸೆಯನ್ನು ನೀಡಬಯಸುತ್ತೇನೆ. ಮಾನ್ಯ ಸದಸ್ಯರಗುಳು ಇಂಜಕ್ಷನ್ ಬಗ್ಗೆ ಮತ್ತು ಬೇರಿನ ಬಗ್ಗೆ ಮಾತನಾಡಿದರು. ಬೇರೆ ಬೇರೆ ವಿಧಾನಗಳು ಇದೆ. ಚೀಲದಲ್ಲಿ ಔಷಧಿಯನ್ನು ಹಾಕಿ ಬೇರಿನ ಮೂಲಕ ಕೊಟ್ಟರೆ ಒಳ್ಳೆಯದು ಎಂದು ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್‌ರವರು ಹೇಳಿದ್ದಾರೆ. ಆದರೆ ಇವೆಲ್ಲ ಇನ್ನು ಪ್ರಾಯೋಗಿಕ ಹಂತದಲ್ಲಿರುವುದರಿಂದ

ಯಾವುದನ್ನು ಮಾಡಿದರೆ ಸರಿಹೋಗುತ್ತದೆ ಎಂಬುದು it is only in trail and error basis. We are Still in the initial stages, ಡೈಕೋಫಾಲ್ ಮತ್ತು ಮಾನೋಕ್ರೋಟೋಫಾಸ್ ಏಕೆ ಸಿಂಪರಣೆ ಮಾಡಬೇಕು ಎಂದು ಮಾನ್ಯ ಸದಸ್ಯರಾದ ಪಾಪಣ್ಣನವರು ಹೇಳಿದ್ದಾರೆ. ಕೆಮಿಕಲ್ಸ್‌ನಲ್ಲಿ one is systematic and one is contract. ನಾವೇನು ಮೊನೋಕ್ರೋಟೊಫಾಸ್ ಸಿಂಪರಣೆ ಮಾಡುತ್ತೇವೆ ಅದರ ಪರಿಣಾಮ ಎಂಟು ಹತ್ತು ದಿವಸ ಅಲ್ಲಿ ಇರುತ್ತದೆ. ಅದು ಆದ ಮೇಲೆ ಇನ್ನು ಕೆಲವು ಕ್ರಿಮಿಗಳು ಅಲ್ಲಿ ಇರುತ್ತವೆ ಎಂಬುದಾಗಿ ಮಾಹಿತಿ ಪ್ರಕಾರ ತಿಳಿದುಬಂದಿರತಕ್ಕದ್ದು. ಅದಕ್ಕೆ ಮಾನೋಕ್ರೋಟೊ ಫಾಸ್ ಉಪಯೋಗಿಸ ಬಾರದು, ಡೈಕೋಫಾಲ್‌ನ್ನು ಸಿಂಪರಣೆ ಮಾಡಿದರೆ ಮಾತ್ರ ಪರಿಣಾಮಬೀರುತ್ತದೆ. ಎಂದು ತಂತ್ರಜ್ಞಾನ ಬಂದಿರುವುದರಿಂದ ಎಷ್ಟೇ ಕಷ್ಟವಾದರೂ ಅದನ್ನು ಸಿಂಪರಣೆ ಮಾಡಬೇಕು ಎಂಬ ಉದ್ದೇಶದಿಂದ ಪರಿಣಿತರು ಹೇಳಿದಂತೆ ಅದನ್ನು ಸಿಂಪರಣೆ ಮಾಡುತ್ತಿದ್ದೇವೆ. ಇನ್ನು ಸ್ಪ್ರೆಯರ್ಸ್‌ನ ಬಗ್ಗೆ ಹೇಳುವುದಾದರೆ ರಂಗಸ್ವಾಮಿ ಎಂಬುವವರೇನು ಸ್ಪ್ರೆಯರ್ಸ್‌ನ್ನು ಉತ್ಪಾದನೆ ಮಾಡುತ್ತಿದ್ದಾರೆ ಬಾಂಬೆಯಿಂದ ಅವರನ್ನು ಕರೆಸಿದ್ದೆ. ತೆಂಗಿನ ಮರಕ್ಕೆ ಔಷಧಿ ಸಿಂಪರಣೆ ಮಾಡಲು ಯಾವುದಾದರು ಸ್ಪ್ರೆಯರ್ಸ್ ಇದೆಯೆ ಎಂದು ವಿಚಾರ ಮಾಡಿದ್ದೇನೆ. ಇದಲ್ಲದೆ ವಿದೇಶದಲ್ಲಿ ಇದೆಯೆ ಎಂದು ಮಾಹಿತಿ ಪಡೆದಿದ್ದೆ. ಮಲೇಶಿಯಾದಲ್ಲಿ ಆ ರೀತಿ ಸ್ಪ್ರೆಯರ್ಸ್‌ಗಳು ಏನಾದರೂ ಇದೆಯೆ ಎಂದು ವಿಚಾರಮಾಡಿದ್ದೇನೆ. ವಿದೇಶಗಳಲ್ಲಿರುವ ತೆಂಗಿನ ಮರಗಳು ನಮ್ಮಲ್ಲಿರುವಷ್ಟು ಎತ್ತರದಲ್ಲಿ ಇಲ್ಲ ಆದ್ದರಿಂದ ಅಲ್ಲಿ ಆ ಸಮಸ್ಯೆ ಬಂದಿಲ್ಲ. ನಮ್ಮಲ್ಲೇನು ಹಳೆ ಕಾಲದಲ್ಲಿ ಬೆಳೆದಿರುವ ತೆಂಗಿನ ಗಿಡಗಳು ಇವೆ ಅದು 60-70 ಅಡಿ ಎತ್ತರ ಇದೆ. ಈ ತೆಂಗಿನ ಗಿಡಗಳಿಗೆ ಔಷಧಿ ಸಿಂಪರಣೆಯ ಕಷ್ಟ ಬರುತ್ತದೆ. ನಾವು ಇದರ ಬಗ್ಗೆ ಕೇರಳದಲ್ಲಿ ಕೇಳಿದಾಗ ಅವರು ಒಂದು ತೆಂಗಿನ ಮರಕ್ಕೆ ಔಷದಿ ಸಿಂಪರಣೆ ಮಾಡಲು ಐದು ರೂಪಾಯಿಂದ ಹತ್ತು ರೂಪಾಯಿಯವರೆಗೆ ಗುತ್ತಿಗೆಯನ್ನು ಕೊಡುತ್ತಾರಂತೆ. ಕೇರಳ ಮತ್ತು ತಮಿಳುನಾಡಿನಿಂದ ತರಬೇತಿ ಹೊಂದಿದ ಬಹಳಷ್ಟು ಜನರು ಆ ಕೆಲಸವನ್ನು ಮಾಡಲು ಇಲ್ಲಿಗೆ ಬರಲು ಸಿದ್ಧರಾಗಿದ್ದಾರೆ. ಅವರಿಗೆ ಇಂತಿಷ್ಟು ಮರಗಳಿಗೆ ಔಷಧಿ ಸಿಂಪರಣೆ ಮಾಡಿಸಿಕೊಡಿ ಎಂದರೆ ಅವರು ಎಲ್ಲ ವ್ಯವಸ್ಥೆ ಮಾಡಿಕೊಡುತ್ತಾರೆ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸರ್ಕಾರದಿಂದ ಔಷಧಿಯನ್ನು ಒದಗಿಸುತ್ತೇವೆ ಆದರೆ ಅದನ್ನು ಸಿಂಪರಣೆ ಮಾಡಿಸಿಕೊಳ್ಳುವ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳಬೇಕು. ಸರ್ಕಾರ ಅದನ್ನು ಮಾಡುವುದುಸಾಧ್ಯವಾಗದ ಮಾತು. ತಮಿಳುನಾಡಿನಲ್ಲಿ ಬೇವಿನ ಹಿಂಡಿ ರಸ ಮಾಡಿ, ಬಳ್ಳಗಳಿಂದ ರಸವನ್ನು ತಯಾರು ಮಾಡಿ ಬೇರುಗಳ ಮೂಲಕ ಕೊಡತಕ್ಕದ್ದು ಇದೆ. ಇದು ಸಹ ಪ್ರಾಯೋಗಿಕ ಹಂತದಲ್ಲಿದೆ. This is a new disease, new treatment ತಮಿಳುನಾಡಿನಲ್ಲಿ ಬೇವಿನ ರಸವನ್ನು ಏಕೆ ಉಪಯೋಗ ಮಾಡುತ್ತಾರೆಂದರೆ, ಅಲ್ಲಿ ಪ್ರತಿ ಗಿಡದ ಕೆಳಗೆ ಬಾವಿಗಳು ಇವೆ. ಅದರ ನೀರನ್ನು ಮನೆಗೆ ಮತ್ತು ತೋಟಗಳಿಗೆ ಉಪಯೋಗ ಮಾಡುತ್ತಾರೆ. ಕೆಮಿಕಲ್ಸ್‌ನ್ನು ಕೊಟ್ಟರೆ ಬೇರಿನ ಮೂಲಕ ಬಾವಿಯಲ್ಲಿರುವ ನೀರಿಗೆ ಅದು ಹೋಗಬಹುದುಎಂಬ ಉದ್ದೇಶದಿಂದ ಕೆಮಿಕಲ್ಸ್‌ನ್ನು ಉಪಯೋಗ ಮಾಡುವಲ್ಲಿ ಅವರಿಗೆ ಆಸಕ್ತಿ ಇಲ್ಲ. ಅದು ಸಹ ಸರಿಯಾಗಿ ಆಗಿಲ್ಲ. ಈಗ ವೆಟ್ಟಬಲ್‌ಸಲ್ಫರ್ ಎಂದು ಸಿಂಪರಣೆ ಮಾಡುತ್ತಿದ್ದಾರೆ. They are spraying new variety of chemicals. Then where are we? which is the. right answer? Which is the right chemical? ಎಂಬ ಪ್ರಶ್ನೆ they are asking for an end to it. ಬಂದಾಗ ನಮ್ಮ ಕೃಷಿ

ವಿಶ್ವವಿದ್ಯಾನಿಲಯ ದವರು ಇದರ ಬಗ್ಗೆ ಸಂಶೋಧನೆ ಮಾಡುತ್ತಿದ್ದಾರೆ. ಅದಲ್ಲದೆ ತೆಂಗು ಅಭಿವೃದ್ಧಿ ಮಂಡಳಿಯವರು ಕೂಡ project Director, Biological Control, Bangalore ನಲ್ಲಿ ಇದರ ಬಗ್ಗೆ ಕೇಂದ್ರ ಸರ್ಕಾರ ಎರಡು ಲಕ್ಷ ರೂಪಾಯಿಗಳನ್ನು ಈ ಔಷಧಿಗಳ ಬಗ್ಗೆ ಸಂಶೋಧನೆ ಮಾಡುವುದಕ್ಕೆ ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಇಲ್ಲಿ ಸಂಶೋಧನೆ ನಡೆದಿದೆ. ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ Islucalla Tamsani ಇದರ ಬಗ್ಗೆ ಸಂಶೋಧನೆ ನಡೆದಿದೆ. It is a fungus. It is a new funges. ಇವತ್ತು They are developing a new fungus. ಕಪ್ಪು ತಲೆ ಹುಳುವನ್ನು ಬಹಳಷ್ಟು ಯಶಸ್ವಿಯಾಗಿ ತಡೆಗಟ್ಟಿದ್ದೇವೆ. ಅದಕ್ಕೆ ಕಾರಣ ನಾವು ಕ್ರಿಮಿನಾಶಕಗಳನ್ನು ಬಿಟ್ಟು ಈ ಕಪ್ಪು ತಲೆ ಹುಳುವನ್ನು ತಿನ್ನುವಂಥ ಪ್ಯಾರಾಸೈಟ್ಸ್‌ನ್ನು ಈಗಾಗಲೆ ಅಭಿವೃದ್ಧಿ ಮಾಡಿದ್ದೇವೆ. ಇದೇ ರೀತಿ ಈ ಫಂಗಸ್‌ನ್ನು ಕೂಡ ಅಭಿವೃದ್ಧಿ ಪಡಿಸಿ, ಹೊಸ ನಮೂನೆಯ ಪ್ಯಾರಾಸೈಟ್ಸ್‌ನ್ನು ಕಂಡುಹಿಡಿದರೆ ಮಾತ್ರ ಅಲ್ಟಿಮೇಟ್‌ವ್ ಆಗಬಹುದು ಎಂಬುದು ಎಲ್ಲರ ಉದ್ದೇಶವಾಗಿದೆ. ಈ ಸಂಶೋಧನೆ ಅಂತಿಮ ಮಟ್ಟದಲ್ಲಿದೆ. ಮುಂದಿನ ಒಂದೆರಡು ತಿಂಗಳಿನಲ್ಲಿ ಸರಿಯಾದ ಪರಿಹಾರವನ್ನು ಒದಗಿಸುವ ವ್ಯವಸ್ಥೆಗೆ ನಾವು ತಲುಪಬಹುದು ಎಂದು ಊಹಿಸಿದ್ದೇನೆ. ಹಿರಿಯ ನಾಯಕರಾದ ಮಾನ್ಯ ಸಿಂಧ್ಯರವರು ಇದರ ಬಗ್ಗೆ ಬಹಳಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಹಾಗೆಯೇ ಮಾನ್ಯ ಬಚ್ಚೇಗೌಡರು ಸಹ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಮೇ ತಿಂಗಳಿನಲ್ಲಿ ಕರ್ನಾಟಕ, ಕೇರಳ ತಮಿಳುನಾಡು ಈ ಮೂರು ರಾಜ್ಯಗಳಲ್ಲಿರುವ ಎಲ್ಲಾ ಇಲಾಖೆಯವರನ್ನು, ರೈತರನ್ನು, ಸರ್ಕಾರದವರನ್ನು ಕರೆಸಿ ಬೆಂಗಳೂರಿನಲ್ಲಿ ಒಂದು ಸೆಮಿನಾರ್ ಮಾಡಬೇಕೆಂದಿದ್ದೇನೆ. ಅದಕ್ಕೆ ಅಂತರಾಷ್ಟ್ರೀಯ ತಜ್ಞರನ್ನು ಸಹ ಕರೆಸುವ ಉದ್ದೇಶವಿದೆ. ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಾಗ ಮೂರು ರಾಜ್ಯಗಳು ಒಟ್ಟಿಗೆ ಹಮ್ಮಿಕೊಂಡರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ನಾವು ಒಂದು ಸಲ, ಅವರು ಒಂದು ಸಲ ಕಾರ್ಯಕ್ರಮ ಹಮ್ಮಿಕೊಂಡರೆ ಆ ಕ್ರಿಮಿಗಳಿಗೆ ಆಕ್ರಮಣ ಮಾಡಲು ಅವಕಾಶ ಕೊಟ್ಟಂತೆ ಆಗುತ್ತದೆ. ಆದ್ದರಿಂದ ಈ ಮೂರು ರಾಜ್ಯಗಳು ಒಟ್ಟಿಗೆ ಸೇರಿ ಆ ಆಂದೋಲನ ಕಾರ್ಯಕ್ರಮವನ್ನು ಹಾಕಿಕೊಂಡರೆ ಮಾತ್ರ ನಾವು ಯಶಸ್ವಿಯಾಗುತ್ತೇವೆ. ಬರುವ ಮೇ ತಿಂಗಳಿನಲ್ಲಿ ಇಂಥ ಸೆಮಿನಾರ್‌ನ್ನು ಬೆಂಗಳೂರಿನಲ್ಲಿ ಏರ್ಪಡಿಸುತ್ತೇನೆ. ಇದರ ಬಗ್ಗೆ ತೆಂಗು ಅಭಿವೃದ್ಧಿ ಮಂಡಳಿಯವರು ಸಂಶೋಧನೆ ಮಾಡುತ್ತಿದ್ದಾರೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೊ ಗೊತ್ತಿಲ್ಲ. ಪ್ರತಿಸಲ ತೆಂಗು ಅಭಿವೃದ್ಧಿ ಮಂಡಳಿಯವರ ಸಂಶೋಧನೆಯನ್ನು ಪಡೆದು ಅಳವಡಿಸಿಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರದ ವತಿಯಿಂದ ಉತ್ತಮವಾದ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡುವುದಾಗಿ ಭರವಸೆಯನ್ನು ಕೊಡುತ್ತೇನೆ. ಅಡಿಕೆ ಬಗ್ಗೆ ಸಹ ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ, ಆದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ. ಬೇರೆ ಸಮಯದಲ್ಲಿ ಅದರ ಬಗ್ಗೆ ಮಾತನಾಡುತ್ತೇನೆ. ಸರ್ಕಾರ ಇದಕ್ಕಾಗಿ ಹಣವನ್ನು ಕೊಟ್ಟಿದೆ. ಒಳ್ಳೆಯ ರೀತಿಯಲ್ಲಿ ಇದನ್ನು ತಡೆಗಟ್ಟುವಲ್ಲಿ ಮುಂದಿನ ಹತ್ತು ದಿವಸಗಳಲ್ಲಿ ನಾನು, ನಮ್ಮ ಇಲಾಖೆಯ ಕಾರ್ಯದರ್ಶಿ, ನಿರ್ದೇಶಕರು ಪ್ರತಿ ಜಿಲ್ಲೆಗಳಿಗೆ ಹೋಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಪ್ರತಿ ಹಳ್ಳಿಗಳಿಗೆ ಭೇಟಿ ಕೊಟ್ಟು ಇದರ ಬಗ್ಗೆ ರೈತರಿಗೆ ಮಾಹಿತಿ ಕೊಟ್ಟು ಏನೇನು ಮಾಡಬೇಕು ಎಂದು ತಿಳಿಸುವಲ್ಲಿ ವ್ಯವಸ್ಥೆ ಮಾಡುತ್ತೇನೆ. ಇದಲ್ಲದೆ ನಾನೇ ಖುದ್ದಾಗಿ ಹತ್ತು ಜಿಲ್ಲೆಗಳಲ್ಲಿ ಇದರ ಬಗ್ಗೆ ರಿವ್ಯೂ ಮಾಡಲು ಹೋಗುತ್ತಿದ್ದೇನೆ. ಇದಾದ ನಂತರ ಇವೊತ್ತು ನಮ್ಮ ಸರ್ಕಾರ ಶೇಕಡಾ 50 ರಷ್ಟು ಡಿಸ್ಕೌಂಟ್ ನೀಡಿ ಸಬ್ಸಿಡಿ ಕೊಟ್ಟಿದೆ. ಆದರೂ ರಾಜ್ಯದ

ಎಲ್ಲಾ ಜಿಲ್ಲೆಗಳಿಗೆ ಸುಮಾರು ಐವತ್ತು ಸಾವಿರದಷ್ಟು ಲೀಟರ್‌ಗಳ ಔಷಧಿಯನ್ನು ಕಳುಹಿಸಿಕೊಟ್ಟಿದ್ದರೂ ಉಪಯೋಗಿಸಿರುವುದು ಬಹಳ ಕಡಿಮೆ, ಅಂದರೆ ಹದಿಮೂರು ಸಾವಿರದಷ್ಟು ಮಾತ್ರ ಉಪಯೋಗಿಸಿದ್ದಾರೆ. ನಾನು ಮೇಲ್ಮನೆ ಮತ್ತು ಈ ಕೆಳಮನೆಯಲ್ಲಿ ಹೇಳುವುದೇನೆಂದರೆ, ಇಲ್ಲಿಯವರೆಗೆ ಔಷಧಿಯನ್ನು ಕೇವಲ ದೊಡ್ಡ ರೈತರುಗಳು ಮಾತ್ರ ಉಪಯೋಗಿಸಿದ್ದು ಸಣ್ಣ ರೈತರುಗಳು ಉಪಯೋಗಿಸಿಲ್ಲದಿರುವುದರಿಂದ, ಇವರೂ ಕೂಡ ಉಪಯೋಗಿಸಿದ್ದರೆ ಕಾರ್ಯಕ್ರಮ ಯಶಸ್ವಿಯಾಗುತ್ತಿತ್ತು ಎಂಬ ಭಾವನೆ ನನಗೆ ಬಂದಿದೆ. ಈ ವಿಚಾರವನ್ನು ನಮ್ಮ ಮುಖ್ಯಮಂತ್ರಿಗಳಾದ ಕೃಷ್ಣರವರಿಗೆ ತಿಳಿಸಿದಾಗ ಶೇಕಡ 75ರಷ್ಟು ಸಬ್ಸಿಡಿ ಕೊಡಲು ಹೇಳಿರುವುದರಿಂದ ಇಷ್ಟೊಂದು ಪ್ರಮಾಣದಲ್ಲಿ ಸಬ್ಸಿಡಿ ನೀಡಲು ಇವತ್ತು ನಮ್ಮ ಸರ್ಕಾರ ಮುಂದೆ ಬಂದಿದೆ. ಆದಕಾರಣ, ಬಡವರಿಗೆ, ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ, ಸಣ್ಣ ರೈತರಿಗೆ ಶೇಕಡ 75ರಷ್ಟು ಸಬ್ಸಿಡಿ ಕೊಟ್ಟು ಇವರುಗಳಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಂದೋಲನ ರೀತಿಯಲ್ಲಿ ಮಾಡುವುದಕ್ಕೆ ಇವೊತ್ತು ಸರ್ಕಾರ ಮುಂದೆ ಬಂದಿದ್ದು, ತಾವುಗಳೆಲ್ಲರೂ ಈ ಹಿನ್ನೆಲೆಯಲ್ಲಿ ಹೇಳಿರುವ ಎಲ್ಲಾ ಸಲಹೆಗಳನ್ನೂ ಸರ್ಕಾರ ಗಮನಕ್ಕೆ ತೆಗೆದುಕೊಂಡಿದ್ದು ಸ್ಪ್ರೇ ಸಿಸ್ಟಂ ಅಳವಡಿಸುವ ಕುರಿತು ಬಹಳಷ್ಟು ಇಂಜಿನಿಯರ್‌ಗಳನ್ನು ಕರೆಸಿ ಚರ್ಚಿಸಿದ್ದೇವೆ. ಸುಮಾರು ಅರವತ್ತು ಅಡಿಗಳಷ್ಟು ಯಾವುದಾದರೂ ಲ್ಯಾಡರ್‌ನಂಥ ಸಾಧನದ ಮೇಲೆ ಏರಿ ಹೋಗಿ ಔಷಧಿಯನ್ನು ಸಿಂಪಡಿಸುವುದಕ್ಕೆ ಸಾಧನವನ್ನು ತಯಾರಿಸಿಕೊಡಬೇಕೆಂದು ಹೇಳಿರುವುದರಿಂದ ಬೆಂಗಳೂರಿನ ಅಲ್ಯೂಮಿನಿಯಂ ಫ್ಯಾಕ್ಟರಿಯೊಂದು ಸದರಿ ಸಾಧನವನ್ನು ತಯಾರಿಸಿಕೊಡುವುದಾಗಿ ಹೇಳಿದೆ. ಆದುದರಿಂದ, ಇವೊತ್ತು ಅಥವಾ ನಾಳೆ ನಮ್ಮ ಇಲಾಖೆಯ ಅಧಿಕಾರಿಗಳನ್ನು ಕೇರಳಕ್ಕೆ ಕಳುಹಿಸಿ ಅಲ್ಲಿ ಅವರು ಯಾವ ಯಂತ್ರದ ಸಾಧನದ ಮೂಲಕ ಔಷಧಿಯನ್ನು ಸಿಂಪಡಿಸುತ್ತಿದ್ದಾರೋ ಅದೇ ರೀತಿ ನಾವು ಇಲ್ಲಿಯೂ ಸಹ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಇದು ಬೇಕಾಗುತ್ತದೆ. ಆದುದರಿಂದ, ಇದೊಂದು ಕಂಟಿನ್ಯೂಯಸ್ ಪ್ರೋಸೆಸ್ ಆಗಿದ್ದು ಯಾವಾಗಲೂ ಉಪಯೋಗಿಸಬೇಕಾಗುತ್ತದೆ. ತಾವು ಕೊಟ್ಟಿರುವ ಎಲ್ಲಾ ಸಲಹೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿದ್ದು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದಕ್ಕೆ ಸಿದ್ಧವಾಗಿದೆಯೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತೆಂಗು ಬೆಳೆಗೆ ತಗುಲಿರುವ ನುಸಿರೋಗದ ಬಗ್ಗೆ ಈಗಾಗಲೇ ಮೇಲ್ಮನೆ ಮತ್ತು ಈ ಕೆಳಮನೆಯಲ್ಲಿ ವ್ಯಾಪಕವಾಗಿ ಚರ್ಚೆಯಾಗಿದ್ದು, ಮಾನ್ಯ ಸದಸ್ಯರುಗಳೆಲ್ಲರೂ ಕೂಡ ರೈತರ ಬಗ್ಗೆ, ಬೆಳೆಯತಕ್ಕಂಥ ಬೆಳೆ ಬಗ್ಗೆ ಆಗುತ್ತಿರುವ ಅನಾಹುತಗಳ ಕುರಿತು ಸದನದಲ್ಲಿ ಚರ್ಚೆ ಮಾಡುವುದರ ಮೂಲಾಂತರ ಸರ್ಕಾರದ ಗಮನವನ್ನು ಸೆಳೆದಿದ್ದಾರೆ ಮತ್ತು ಈ ದಿಸೆಯಲ್ಲಿ ಈಗಾಗಲೇ ಸರ್ಕಾರ ಏನೇನು ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎನ್ನುವುದರ ಬಗ್ಗೆಯೂ ತೋಟಗಾರಿಕೆ ಸಚಿವರು ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಚರ್ಚೆಯ ಸಂದರ್ಭದಲ್ಲಿ ಬಹಳ ಪ್ರಮುಖವಾದ ವಿಷಯವೇನೆಂದರೆ, ಸಂಶೋಧನೆ ಏನಾಗಿದೆ? ರೋಗ ಎಲ್ಲಿ ಹುಟ್ಟಿದೆ? ಎಲ್ಲಿಗೆ ಹೋಗುತ್ತಿದೆ? ಮುಂದೇನಾಗುತ್ತದೆ? ಎನ್ನುವುದರ ಬಗ್ಗೆ ಊಹಿಸಿ ಮಾತನಾಡುವುದೆಲ್ಲವೂ ಕೂಡ ಒಂದು ಗೊಂದಲದ ರೀತಿಯಲ್ಲಿದೆ. ಆದರೆ, ವಾಸ್ತವಾಗಿರುವ ಸಂಗತಿಯನ್ನು ಸದನದ ಮುಖಾಂತರ ಈ ನಾಡಿನಲ್ಲಿ ತೆಂಗು ಬೆಳೆಯತಕ್ಕಂಥ ಜನರು ಯಾರಿದ್ದಾರೆ ಅವರಿಗೆ ತಿಳಿಸಲೇಬೇಕಾಗುತ್ತದೆ. ಮುಖ್ಯವಾಗಿ ಸಂಶೋಧನೆ ಯಾವ ಮಟ್ಟದಲ್ಲಿದೆ? ರೋಗ ಎಲ್ಲಿಂದ ಬಂತು? ಎಂಬುದರ ಬಗ್ಗೆ ಹೇಳುವುದಾದರೆ

ಕಳೆದೆರಡು ವರ್ಷಗಳಿಂದಲೂ ಈ ರೋಗ ರಾಜ್ಯದಲ್ಲಿದೆ. ಪಕ್ಕದ ಕೇರಳ ರಾಜ್ಯದ ಎರ್ನಾಕುಲಂನಲ್ಲಿ ಮತ್ತು ತಮಿಳುನಾಡಿನಲ್ಲಿ ಹಬ್ಬಿದ್ದು ಈ ರೋಗ ಕರ್ನಾಟಕದಲ್ಲಿ ಮೊದಲು ಕಾಣಿಸಿಕೊಂಡಿದ್ದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವರ್ತೂರು ಕ್ಷೇತ್ರದಲ್ಲಿ. ಅಲ್ಲಿ ಕಾಣಿಸಿಕೊಂಡಾಗ ರೋಗ ಏತಕ್ಕೋಸ್ಕರ ಬಂದಿದೆಯೆಂಬುದು ಪ್ರಾರಂಭದಲ್ಲಿ ಯಾರಿಗೂ ಕೂಡ ಗೊತ್ತಾಗಲಿಲ್ಲ. ರೋಗ ಬಂದಿದೆ.ಯೆಂದು ಗೊತ್ತಾದ ನಂತರ ಟ್ರೀಟ್‌ಮೆಂಟ್ ಮಾಡತಕ್ಕಂಥ ಪ್ರಯತ್ನ ಮಾಡಿದ್ದಾರೆ. ಯಾವುದಾದರೂ ರೋಗ ಬಂದಾಗ ತಕ್ಷಣವೇ ರೋಗಕ್ಕೆ ಕಾರಣವಾಗುವ ರೋಗಾಣುಗಳ ಸಂಖ್ಯೆಯ ಮಲ್ಟಿಪ್ಲಿಕೇಶನ್ ಆಗುವುದನ್ನು ಕಡಿಮೆ ಮಾಡಿದಾಗ ರೋಗ ಅಷ್ಟೊಂದು ಸವಿಸ್ತಾರವಾಗಿ ಹರಡಲು ಸಾಧ್ಯವಿಲ್ಲ. ಮೊದಲು ತಪ್ಪು ಏನೆಂದರೆ, ಆ ರೋಗ ಕಂಡ ತಕ್ಷಣ ರೋಗಾಣುಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಕ್ರಿಯೆಯೇ ಆಗಲಿಲ್ಲ. ಹಾಗಾಗಿ, ಈ ವರ್ಷ ಯಥೇಚ್ಛವಾಗಿ ರಾಜ್ಯದ ಸುಮಾರು 14- 15 ಜಿಲ್ಲೆಗಳಲ್ಲಿ ಮತ್ತು ಅನೇಕ ತಾಲ್ಲೂಕುಗಳಲ್ಲಿ ಈ ರೋಗ ವ್ಯಾಪಕವಾಗಿ ಕಾಣಿಸುತ್ತಿದೆ. ರೋಗ ಬಂದಿದೆಯೆಂದು ಗೊತ್ತಾದ ತಕ್ಷಣ ಸರ್ಕಾರ ಸಂಬಂಧಪಟ್ಟ ಕ್ಷೇತ್ರದ ಪರಿಣತರನ್ನು, ವಿಜ್ಞಾನಿಗಳನ್ನು ಕೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅವರ ಅನುಭವಗಳೇನೆಂದು ಕೇಳಿ ತಿಳಿದುಕೊಂಡು, ಅವರುಗಳು ಕೊಟ್ಟಂಥ ಸಲಹೆಗಳನ್ನೇ ಇವೊತ್ತು ನಾವು ಅಪ್ಲೈ ಮಾಡುತ್ತಿದ್ದೇವೆ. ಆದರೆ, ವಿಶೇಷವಾಗಿ ಕೇರಳದಲ್ಲಿ ಈ ರೋಗ ಕಳೆದ 2-3 ವರ್ಷಗಳಿಂದ ವ್ಯಾಪಕವಾಗಿ ಹರಡಿದೆ. ರೋಗ ಯಾವ ಪ್ರಮಾಣದಲ್ಲಿ ಹರಡಿದೆಯೆಂದರೆ, ಕೇರಳದಲ್ಲಿರುವ ನೂರಕ್ಕೆ ಶೇಕಡ 85- 90ರಷ್ಟು ತೆಂಗಿನ ಮರಗಳು ರೋಗಕ್ಕೆ ತುತ್ತಾಗಿವೆ. ಇದಕ್ಕೆ ಅವರ ಟ್ರೀಟ್‌ಮೆಂಟ್ ಏನು? ಅವರ ಅನುಭವಗಳೇನು? ಎಂದು ಗಮನಿಸಿದಾಗ ರೋಗ ತಡೆಗಟ್ಟಲು ಕಳೆದ ವರ್ಷ ಅಲ್ಲಿನ ಸರ್ಕಾರದವರು ಬಜೆಟ್‌ನಲ್ಲಿ ಮೂವತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಪ್ರಾಯೋಗಿಕವಾಗಿ ಒದಗಿಸಿಕೊಟ್ಟರು. ಆ ಹಣದಿಂದ ಮಾನೋಕ್ರೋಟ ಫಾಸ್ ಮತ್ತು ಡೈಕೋಫಾಲ್ ಔಷಧಿಗಳನ್ನು ಕೊಂಡುಕೊಂಡು ಸಿಂಪಡಿಸಿದರು. ಇದರಿಂದ ಏನೂ ಪ್ರಯೋಜನವಾಗದೇ ಕೈ ಬಿಟ್ಟು ಈಗ ಅವರದೇ ಆದಂಥ ಹೊಸ ಪದ್ಧತಿ ಮೊರೆ ಹೋಗಿದ್ದಾರೆ . ಆದುದರಿಂದ, ಕೇರಳದವರ ಮತ್ತು ತಮಿಳುನಾಡಿನವರ ಅನುಭವಗಳನ್ನು ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಮನವಿಯ ಮೇರೆಗೆ ಕೇಂದ್ರ ಸರ್ಕಾರದ ಒಂದು ತಂಡ ಕೂಡ ಬಂದು ಭಾರತದ ದಕ್ಷಿಣ ಭಾಗದ ರಾಜ್ಯಗಳ ಕೆಲವು ತಜ್ಞರುಗಳನ್ನೊಳಗೊಂಡಂತೆ ಒಂದು ಸಮಿತಿ ರಚನೆ ಮಾಡಿ, ಆ ಸಮಿತಿಯು ಎಲ್ಲಾ ರಾಜ್ಯಗಳಿಗೆ ಪ್ರವಾಸ ಹೋಗಿ ಬಂದ ನಂತರ ಅಂತಿಮ ವರದಿ ತಯಾರಿಸಿ ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಮುಖಾಂತರ ಸುಮಾರು ಎಂಭತ್ತು ಕೋಟಿ ರೂಪಾಯಿಗಳಷ್ಟು ಧನ ಸಹಾಯ ಮಾಡಬೇಕೆಂದು ಕೇಳಲಾಯಿತು. ಆದರೆ , ಇದುವರೆವಿಗೂ ಕೇಂದ್ರ ಸರ್ಕಾರದಿಂದ ಯಾವುದೇ ರೀತಿಯಾದ ಹಣಕಾಸಿನ ನೆರವು ಬಂದಿರುವುದಿಲ್ಲ. ಅಂದಮೇಲೆ ನಮ್ಮ ಲಿಮಿಟೆಡ್ ರಿಸೋರ್ಸಸ್ ಅನ್ನು ನಾವು ಯಾವ ರೀತಿಯಾಗಿ ಉಪಯೋಗಿಸಿಕೊಳ್ಳಬೇಕು? ನಮ್ಮ ಬಜೆಟ್‌ನಲ್ಲಿ ಇದ್ದುದು ಕೇವಲ ಮೂವತ್ತು ಲಕ್ಷ ರೂಪಾಯಿಗಳು. ಇದರಲ್ಲಿ ಯಾವ ರೀತಿಯಾಗಿ ನಾವು ಸಮಗ್ರವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು? ನಾವು ಏನು ಜಿಲ್ಲಾವಾರು ಹಣ ಬಿಡುಗಡೆ ಮಾಡಿದೆವು, ಅದನ್ನು ಚಿಕ್ಕಮಗಳೂರಿನ ಸ್ನೇಹಿತರು ಉಪಯೋಗಿಸಿಕೊಳ್ಳುವ ಪ್ರಯತ್ನ ಮಾಡಿದರು. ತೆಂಗಿಗೆ ತಗುಲಿರುವ ನುಸಿರೋಗ ವ್ಯಾಪಕವಾಗಿ ಹರಡಿದೆಯೆಂದು ನಮಗೆ ಗೊತ್ತಾದ ತಕ್ಷಣ ವಿಶೇಷವಾದಂಥ ಯೋಜನೆಯೊಂದನ್ನು ಹಮ್ಮಿಕೊಳ್ಳಬೇಕೆಂದು ತೀರ್ಮಾನಿಸಿದಾಗ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಿಗೆ ಕೊಟ್ಟು ವಿಶೇಷ ಪರಿಸ್ಥಿತಿ ಎಂದು ಪರಿಗಣಿಸಿ ಸುಮಾರು ಮೂರು ಕೋಟಿ ಎಪ್ಪತ್ತಾರು ಲಕ್ಷ ರೂಪಾಯಿಗಳ

ಯೋಜನೆಗೆ ಮಂಜೂರಾತಿ ನೀಡಿದರು. ನಂತರ ಔಷಧಿಗಳನ್ನು ಕೊಳ್ಳಬೇಕಾದರೆ ವಿಜ್ಞಾನಿಗಳನ್ನೂ ಬಿಡಲಿಲ್ಲ. ಅವರುಗಳೂ ಒಳಗೊಂಡಂತೆ ನಮ್ಮ ಇಲಾಖೆಯ ಮತ್ತು ತೋಟಗಾರಿಕೆ ಇಲಾಖೆಯ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಒಂದು ಸಮಿತಿ ರಚಿಸಿ ಅವರ ಸಲಹೆ ಮೇರೆಗೆ ಔಷಧಿಗಳನ್ನು ವಿತರಿಸುವ ಪ್ರಕ್ರಿಯೆ ಪ್ರಾರಂಭಿಸಿ ಟೆಂಡರುಗಳನ್ನು ಕರೆದು ಟ್ರಾನ್ಸ್‌ಪರೆನ್ಸಿಯನ್ನು ಮೈನ್‌ಟೈನ್ ಮಾಡಿ ಉತ್ತಮ ಗುಣಮಟ್ಟದ ಔಷಧಿಗಳನ್ನು ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಆದರೂ ಈ ವಿಷಯದ ಬಗ್ಗೆ ಮಾತನಾಡಿದ ಅನೇಕ ಮಾನ್ಯ ಸದಸ್ಯರುಗಳು ಸ್ಪೂರಿಯಸ್ ಮೆಟೀರಿಯಲ್ ಎಂದು ಹೇಳಿದರು. ಸ್ಪೂರಿಯಸ್ ಮೆಟೀರಿಯಲ್ ಯಾವುದೇ ಸಂದರ್ಭದಲ್ಲೂ ಈ ಜಾಲದೊಳಗೆ ಬರಲು ಸಾಧ್ಯವಿಲ್ಲ. ಆ ದೃಷ್ಟಿಯಿಂದ ಇವೊತ್ತು ನಾವು ಎಲ್ಲಾ ರೀತಿಯಾದ ಎಚ್ಚರಿಕೆಯನ್ನು ವಹಿಸಿದ್ದೇವೆ. ಮುಖ್ಯವಾಗಿ ಈ ಕುರಿತು ಸಂಶೋಧನೆಯಾಗಬೇಕಿದೆ. ಸಂಶೋಧನೆಗೆ ಸಂಬಂಧಿಸಿದಂತೆ ಅರಸೀಕೆರೆಯಲ್ಲಿ ಒಂದು ರೀಸರ್ಚ್ ಸ್ಟೇಶನ್ ಇದೆ. ತೆಂಗು ಬೆಳೆ ಅಭಿವೃದ್ಧಿ ಮತ್ತು ಆ ಕುರಿತ ಸಂಶೋಧನೆ ಮತ್ತು ವಿಚಾರ ಮಾಡುವುದಕ್ಕೋಸ್ಕರ ಈ ಸಂಸ್ಥೆ ಸ್ಥಾಪನೆ ಯಗಿದೆ. ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಮಾತನಾಡುತ್ತಾ ಈ ಕುರಿತ ಸಂಶೋಧನೆ ನಡೆದಿದ್ದರೂ ಹೊರಬಂದಿರುವುದಿಲ್ಲವೆಂದು, ಅದನ್ನು ಯಾರು ಪ್ರಿಂಟ್ ಮಾಡಿಸಿದರು ಎಂಬ ಬಗ್ಗೆ ಸೂಕ್ಷ್ಮವಾಗಿ ಗಮನಕ್ಕೆ ತಂದಿರುವ ಬಗ್ಗೆ ಹೇಳುವುದದರೆ ಈಗಾಗಲೇ ಸರ್ಕಾರಕ್ಕೆ ಕೂಡ ಗೊತ್ತಿದೆ. ಬಹುಶಃ ಅಲ್ಲಿ ಸಂಶೋಧನೆಗೆ ನಡೆಸಿದಂಥ ಒಬ್ಬ ವಿಜ್ಞಾನಿ ಕೊಟ್ಟಿರುವ ಸಲಹೆಗಳನ್ನು ತೆಗೆದು ಕೊಂಡು ಆ ಸಂಶೋಧನೆಯನ್ನು ನಾವೇ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯದ ಅಧಿಕಾ ರಿಗಳು ತಿಳಿಸಿರುವೂದು ಕೂಡ ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ಸರ್ಕಾರ ಆಡಳಿತಾತ್ಮಕವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತದೆ. ಯಾವುದೇ ವಿಜ್ಞಾನಿಯಾಗಲೀ, ಸರ್ಕಾರಿ ನೌಕರರಾಗಿತಕ್ಕಂಥ ಯಾರೇ ಆದರೂ ಕೂಡ ಕೊಡುವ ಸಲಹೆ ಅದು ಸರ್ಕಾರಕ್ಕೋಸ್ಕರ ಕೊಡತಕ್ಕಂಥಾದ್ದಾಗಿದೆ. ಅದನ್ನು ಯಾರು ಅಚ್ಚು ಹಾಕಿದ್ದಾರೆ, ಯಾರು ಖರೀದಿಗೆ ತೆಗೆದುಕೊಂಡಿದ್ದಾರೆಂಬುದು ಬೇರೆ ಪ್ರಶ್ನೆ. ಆದರೆ, ಕೊಡತಕ್ಕಂಥ ಸಲಹೆಗಳೆಲ್ಲವನ್ನೂ ನಾವು ಪರಿಶೀಲಿಸ ಸಧ್ಯದ ಪರಿಸ್ಥಿಯಲ್ಲಿ ನಾವು ಮಾನೋಕ್ರೋಟೋಫಾಸ್ ಮತ್ತು ಡೈಕೋಫಾಲ್ ಔಷಧಿಗಳನ್ನು ಸರ್ಕಾರದಿಂತ ವಿತರಿಸುತ್ತಿದ್ದು, ಇದರಿಂದ ಸಾಕಷ್ಟು ಮಟ್ಟಿಗೆ ರೋಗಾಣುಗಳ ಸಂಖ್ಯೆಯನ್ನು ಕಡಿಮೆ ಮಾಡಿ ರೋಗವನ್ನು ನಿಯಂತ್ರಿಸಬಹುದೆನ್ನುವ ಒಂದು ತೀರ್ಮಾನಕ್ಕೆ ಬಂದಿರುವ ನಿಮಿತ್ತ ಈ ಕಾರ್ಯಕ್ರಮದ ಪ್ರಕ್ರಿಯೆ ಇವೊತ್ತು ಇಡೀ ರಾಜ್ಯಾದ್ಯಂತ ನಡೆದಿದೆ. ಆದರೂ ಈ ಕಾರ್ಯಕ್ರಮ ರಾಜ್ಯದ ಬರೀ ತಾಲ್ಲೂಕು ಹಾಗೂ ಹೋಬಳಿ ಮಟ್ಟಕ್ಕೆ ಮಾತ್ರ ಸೀಮಿತವಾಗಿದೆಯೆಂದು ಹೇಳುತ್ತಿದ್ದೀರಿ. ನಿಜ, ನಾವು ಒಪ್ಪುತ್ತೇವೆ. ಇವೊತ್ತು ತೆಂಗು ಬೆಳೆಗೆ ತಗುಲಿರುವ ನುಸಿರೋಗವನ್ನು ತಡೆಗಟ್ಟಲು ಪಲ್ಸ್‌ಪೋಲಿಯೋ ಮಾದರಿಯಲ್ಲಿ ಸಮರೋಪಾದಿಯಲ್ಲಿ ಇವೊತ್ತು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಈಗಾಗಲೇ ನಿರ್ದೇಶನ ನೀಡಿದ್ದು ಜಿಲ್ಲಾಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಎಕ್ಸಿಕ್ಯೂಟೀವ್ ಆಫೀಸರ್ ಅವರನ್ನು ನೋಡಲ್ ಆಫೀಸರ್ ಎಂದು ಮಾಡಿದ್ದು ಸದರಿ ಕಾರ್ಯಕ್ರಮವನ್ನು ಎಲ್ಲಾ ಹಳ್ಳಿಗಳಿಗೆ ವಿಸ್ತರಿಸುವ ಕೆಲಸ ಮಾಡಿದ್ದಾರೆ. ನಾವು ಸಾಕಷ್ಟು ಪಾಂಪ್ಲೆಟ್ಸ್ ಮುಖೇನ ಅವೇರ್‌ನೆಸ್

2. 10 ಪಿ.ಎಂ

ಅನ್ನು ಕ್ರಿಯೇಟ್ ಮಾಡತಕ್ಕದ್ದು ಬಹಳ ಇಂಪಾರ್ಟೆಂಟ್. ಇವತ್ತು ರೈತರ ಸಹಕಾರ ಇಲ್ಲದೇ ಪ್ರತಿನಿಧಿಗಳ ಸಹಕಾರ ಇಲ್ಲದೇ ಈ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಾಧ್ಯವೇ ಇಲ್ಲ. ಈಗಾಗಲೇ ತಮಗೆಲ್ಲಾ

ಗೊತ್ತಿರತಕ್ಕದ್ದು ಈ ರೋಗಾಣು ಹುಟ್ಟಿದ 7 ದಿವಸಕ್ಕೆ ಸತ್ತುಹೋಗುತ್ತದೆ. ಅಷ್ಟೇ ಮಲ್ಟಿಪ್ಲೈ ಆಗಿ ವಾತಾವರಣವನ್ನು ಕೆಡಿಸುತ್ತಾ ಹೋಗುತ್ತದೆ. ಇದನ್ನು ತಪ್ಪಿಸಬೇಕಾಗಿದೆ. ಇದನ್ನು ಮಾಡಬೇಕಾದರೆ ರೈತರ ಸಹಕಾರ ಬೇಕು, ಅವೇರ್‌ನೆಸ್ ಬೇಕಾಗುತ್ತದೆ. ಅವೇರ್‌ನೆಸ್ ಅನ್ನು ಕ್ರಿಯೇಟ್ ಮಾಡುವುದಕೋಸ್ಕರ ಈಗಾ ಗಲೇ ನಮ್ಮ ಆಗ್ರಿಕಲ್ಚರಲ್ ಮಾರ್ಕೆಟಿಂಗ್ ವ್ಯಾಪ್ತಿಯಲ್ಲಿ ಬರತಕ್ಕಂತಹ ಎಲ್ಲಾ ಸಂಸ್ಥೆಗಳೂ ನಿರ್ದೇಶನ ಕೊಟ್ಟು ಪಾಂಪ್ಲೆಟ್‌ಗಳನ್ನು ಮಾಡಿ ಎಲ್ಲ ರೈತರಿಗೆ ಇವತ್ತು ರೋಗ ಹೇಗೆ ಬಂದಿದೆ ? ಏಕೆ ಬಂದಿದೆ ಎನ್ನತಕ್ಕದ್ದರ ಬಗ್ಗೆ ಮಾಹಿತಿ ಕೊಡತಕ್ಕ ಪ್ರಕ್ರಿಯೆ ಪ್ರಾರಂಭ ಆಗಿದೆ. ಪ್ರಾರಂಭಆಗುವುದು ಮನಮುಟ್ಟುವಂತೆ ಇವತ್ತು ಎಲ್ಲ ರೈತರ ಮನೆ ಬಾಗಿಲಿಗೆ ಹೋಗಿದೆ ಎನ್ನುವಂತಹ ವಿಷಯವನ್ನು ನಾವು ಹೇಳಿದರೆ ತಪ್ಪಾಗಲಾರದು. ಯಾವುದೇ ರೈತರು ಇರಲಿ. ನಾವು ಸಹ ತೆಂಗಿನ ಬೆಳೆ ಬೆಳೆಯುವ ಪ್ರದೇಶದಿಂದ ಬಂದಿರತಕ್ಕವರು. ನಾವು ತೆಂಗಿನ ಬಗ್ಗೆ, ಏನಾದರೂ ಕೂಡ ಆ ನುಸಿರೋಗದ ಬಗ್ಗೆ ಪ್ರಶ್ನೆ ಮಾಡಿದಾಗ, ಆ ರೈತರು ಕೊಡತಕ್ಕಂಥ ಸಲಹೆಗಳನ್ನು ನೋಡಿದಾಗ ಅವರು ಈ ವಿಚಾರದ ಬಗ್ಗೆ ಎಷ್ಟೊಂದು ವಿಚಾರವನ್ನು ಮಾಡಿದ್ದಾರೆ . ಇದರ ಜೊತೆಗೆ ನಮ್ಮ ಮೆಡಿಸನ್ಸ್ ಇದಲ್ಲ, ಇದು ಸರಿಯಿಲ್ಲ, ಅದು ಸರಿಯಿಲ್ಲ ನಾವು ಈ ರೀತಿಯಾಗಿ ಮಾಡಬೇಕೆ ಎಂದು ಸಾಮಾನ್ಯ ಮಟ್ಟದ ರೈತರು ಹೇಳತಕ್ಕ ಮಟ್ಟಕ್ಕೆ ಇದು ಪ್ರಚಾರ ಆಗಿದೆ. ಇನ್ನೂ ಹೆಚ್ಚು ವ್ಯಾಪಕವಾಗಿ ಪ್ರಚಾರ ಆಗಬೇಕು ಎನ್ನತಕ್ಕ ಮಾತನ್ನು ಕೂಡ ಹೇಳುತ್ತೇವೆ. ಆದರೆ ನಿಮ್ಮೆಲ್ಲರ ಸಹಕಾರ ಇಲ್ಲದೇ ಇದ್ದರೆ ಇದು ಸಾಧ್ಯವಿಲ್ಲ ಉನ್ನತಕ್ಕ ಮಾತನ್ನು ಕೂಡ ನಾವು ಹೇಳುತ್ತೇನೆ. ಏಕೆಂದರೆ ಇದು ಎಲ್ಲೋ ಒಂದು ಸ್ಪ್ರೇ ಆಗಿ ಇನ್ನೊಂದು ಕಡೆ ಬಿಡತಕ್ಕದ್ದು ಅಲ್ಲ. ಇದು ಸಮಗ್ರವಾಗಿ ಒಂದೇ ಸಮಯದಲ್ಲಿ, ಒಂದೇ ಸಂದರ್ಭದಲ್ಲಿ ಆದಾಗ ಮಾತ್ರ ಕಂಟ್ರೋಲ್ ಮಾಡುವು ದಕ್ಕೆ ಸಾಧ್ಯ ಆಗುತ್ತದೆ ಎನ್ನತಕ್ಕ ವಿಚಾರ ಇದೆ. ಅದಕ್ಕಾಗಿ ನಿಮ್ಮೆಲ್ಲರ ಸಹಕಾರ ಕೂಡ ಬೇಕಾಗುತ್ತದೆ. ಮತ್ತು ಸರ್ಕಾರ ಎಲ್ಲರೀತಿಯ ಕಾರ್ಯಕ್ರಮಗಳನ್ನು ಕೂಡ ಹಾಕುತ್ತದೆ ಎನ್ನುವುದರ ಜೊತೆಗ ನಾವು ಮಾನೋಕೋಟೋಫಾಸ್ ಅನ್ನು ಮತ್ತು ಡೈಕೋಫಾಲ್ ಮಾಡುವುದರಿಂದ ಎಳನೀರನ್ನು ಕುಡಿಯತ ಕ್ಕದ್ದು ಕಷ್ಟ ಆಗುತ್ತದೆ. ಆದರಿಂದ ಜನ ಸತ್ತು ಹೋದರು ಎನ್ನತಕ್ಕ ಅನೇಕ ತರಹದ ಗುಮಾನಿಗಳು ಇವೆ. ಆದರೆ ವಿಚಾರ ಸ್ಪಷ್ಟವಾಗಿ ಇರತಕ್ಕದ್ದು; ಇದನ್ನು ನಾನು ನೇರವಾಗಿ ಹೇಳುತ್ತೇನೆ. ನಾನು ಸಂಶೋಧನೆಯ ವಿಷಯದಲ್ಲಿ ಬಹಳಷ್ಟು ತಲೆ ಕೆಡಿಸಿಕೊಂಡು ವಿಚಾರವನ್ನು ಮಾಡಿದ್ದೇನೆ. ಡೈಕೋಫಾಪಾಲ್‌ನ್ನು ನಾವು ಸ್ಪ್ರೇ ಮಾಡತಕ್ಕದ್ದು ಈಗಲ್ಲ. ಬ್ಲಾಕ್ ಕೇಟೆಡ್ ಕ್ಯಾಟರ್‌ಫಿಲ್ಲರ್ ಬಂದಂತ ಹ ಸಂದರ್ಭದಲ್ಲಿ ಕೂಡ ಸ್ಪ್ರೇ ಮಾಡುತ್ತಿದ್ದೆವು. ಇವತ್ತು ಮಾನೋಕೋಟೋಫಾಸ್‌ನ್ನು ರೂಟ್ ಫೀಡಿಂಗ್‌ನಲ್ಲಿ ಕೊಡುತ್ತಿದ್ದೆವು. ಕಳೆದ ಎಂಟು ಹತ್ತು ವರ್ಷದಿಂದ ಅದು ಜಾರಿಯಲ್ಲಿದೆ. ಅಷ್ಟು ಬಿಟ್ಟರೆ ಆಗ ನಾವೇನು ಸಿಸ್ಟಂ ರೀತಿಯಲ್ಲಿ ನಾವು ಇನಾಕ್ಯುಲೇಷನ್ ಮುಖೇನ ಅಥವಾ ಇನ್ನೊಂದು ಮುಖೇನ ಕೊಡುತ್ತೇವೆ, ಅದು ಎಷ್ಟು ದಿವಸ ಇರುತ್ತದೆ ಎಂದರೆ ಕೆಲವು ದಿವಸ ಮಾತ್ರ ಇರುತ್ತದೆ. ನಾವು ಕೊಡತಕ್ಕದ್ದು ಎರಡು ಅಥವಾ ಮೂರು ಎಂ.ಎಲ್.ಕೊಡುತ್ತೇವೆ. ಅಷ್ಟು ದೊಡ್ಡ ಮರಕ್ಕೆ ಅಷ್ಟೊಂದು ಪರಿಣಾಮವಾಗಿರತಕ್ಕಂಥಹ ಆ ಟಿಶ್ಯೂ ಮೇಲೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎನ್ನತಕ್ಕದ್ದು ವಿಜ್ಞಾನಿಗಳ ಅಭಿಪ್ರಾಯ ಬಹುಶಃ ಅದು ಆಗುವುದಿಲ್ಲ ಎನ್ನತಕ್ಕದ್ದು ಕೂಡ ಕಳೆದ ಎಂಟು ಹತ್ತು ವರ್ಷಗಳಲ್ಲಿ ನಮ್ಮ ಟ್ರೀಟ್‌ಮೆಂಟ್‌ನಿಂದ ನಮ್ಮ ತೆಂಗಿನ ಮರಗಳು ಫಸಲು ಕೊಡುತ್ತಿರುವುದೇ ಸಾಕ್ಷಿ. ಆದರೆ ಈ ರೋಗವನ್ನು ಮತ್ತು ಡೈಕೋಫಾಲ್‌ನ್ನು ಏಕೆ ಸ್ಪ್ರೇ ಮಾಡಬೇಕು ಎನ್ನುವ ವಿಚಾರ ಇದೆ. ಒಂದು ಸಾರಿ ಆ ತೊಟ್ಟಿನಿಂದ ರೋಗ ಹೊರಗಡೆ ಬಂದಾಗ, ಕ್ರಿಮಿಗಳು ಹೊರಗಡೆ ಬಂದಾಗ ತೆಂಗಿನ ಮರದಮೇಲೆ ಇವತ್ತು ಕಪ್ಪಾಗಿರುವುದನ್ನು ನಾವು ಕಾಣುತ್ತೇವೆ. ಅದನ್ನು ಕೊಲ್ಲುವುದಕೋಸ್ಕರ ನಾವು

ಇವತ್ತು ಡೈಕೋಪಾಲ್‌ಫೂಲ್‌ನ್ನು ಹಾಕಬೇಕು ಎನ್ನತಕ್ಕದ್ದು ಇದೆ. ಆ ರೀತಿಯಾಗಿ ಮಾಡಿದರೆ ನಾವು ಕೊನೆಯ ಪಕ್ಷ 70-80 ಪರ್ಸೆಂಟ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಎನ್ನುವ ಕಾರಣಕ್ಕೋಸ್ಕರವಾಗಿ ನಾವು ಆ ಕಾರ್ಯಕ್ರಮವನ್ನು ಹಾಕಿರತಕ್ಕದ್ದು ಮತ್ತು ಇದರ ಮೇಲೆ ಏನಾಗಿದೆ? ಎಳನೀರನ್ನು ಕುಡಿಯಬಾರದು, ಕುಡಿದರೆ ಸತ್ತು ಹೋಗುತ್ತಾರೆ ಎನ್ನತಕ್ಕದ್ದು ಆದೂ ಸತ್ಯಕ್ಕೆ ದೂರವಾಗಿರತಕ್ಕದ್ದು, ನಮ್ಮ ಸಂಶೋಧನೆ ಮುಖೇನ, ನಮ್ಮ ವಿಜ್ಞಾನಿಗಳ ಮುಖೇನ ನಾವು ಖಚಿತಪಡಿಸಿಕೊಂಡಿರತಕ್ಕದ್ದು ಆದರೆ ನಾವು ಟ್ರೀಟ್‌ಮೆಂಟ್ ಮಾಡಿದಂತಹ, ಕಳೆದ 10-15 ದಿವಸಗಳಲ್ಲಿ ಎಳನೀರನ್ನು ಕುಡಿಯ ಬಾರದು. ಅಕಸ್ಮಾತ್ ಕುಡಿದಂತಹ ಸಂದರ್ಭದಲ್ಲಿ ಪ್ರಾಣದ ಮೇಲೆ ಹಾನಿ ಆಗುತ್ತದೆ ಎನ್ನತಕ್ಕದ್ದು, ಅದು ವಾಸ್ತವಿಕವಾಗಿ ಇರತಕ್ಕಂಥ ಸಂಗತಿಯಲ್ಲ. ಆದರೆ ಈಗಾಗಲೇ ರಾಜ್ಯದಲ್ಲಿ ಅನೇಕ ಕಂಪನಿಗಳೆಲ್ಲಾ ಗೊತ್ತಿದೆ. ನಾವೆಲ್ಲ ಬಹುಶಃ ಹಳ್ಳಿಗಳಿಗೆ ಹೋದಾಗ ನಾವು ಎಳನೀರನ್ನು ಕುಡಿಯುವುದಕ್ಕೆ ಹೋಗುವುದಿಲ್ಲ. ತೆಂಗಿನ ಕಾಯಿ ಅವರು ಕೊಡುವುದಕ್ಕೆ ಬರುವುದಿಲ್ಲ. ಅವರೇನು ಕೊಡುತ್ತಾರೆಂದರೆ ಪೆಪ್ಸಿ ಕೊಡುತ್ತಾರೆ ಇಲ್ಲವೇ ಕ್ಯಾಂಪೋಕೋಲಾ ಅಥವಾ ಇನ್ನೊಂದು ಕೋಲಾವನ್ನು ಕೊಡುತ್ತಾರೆ. ಈ ಕಂಪನಿಗಳೂ ಕೂಡ ಇವತ್ತು ನಮ್ಮ ರಾಜ್ಯದಲ್ಲಿದ್ದಾವೆ. ಅವರಿಗೆ ಈ ರೋಗ ಬಂದಿರುವುದು ಯಥೇಚ್ಛವಾಗಿರತಕ್ಕ ಪ್ರಚಾರವನ್ನು ಕೊಡತಕ್ಕ ಕೆಲಸವನ್ನು ಮಾಡಿದ್ದಾರೆ ಆದಕ್ಕೋಸ್ಕರ ಈ ರಾಜ್ಯದ ರೈತರಾಗಲೀ ಅಥವಾ ಜನರಾಗಲೀ ತಪ್ಪು ಕಲ್ಪನೆಗೆ ಹೋಗತಕ್ಕದ್ದು ಬೇಡ. ಅದರಿಂದ ಪ್ರಾಣಕ್ಕೆ ಅಪಾಯದ ಪ್ರಶ್ನೆ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ನಾವು ಇಷ್ಟಕ್ಕೇ ಸೀಮಿತವಾಗಿ ಮಾಡಲಿಲ್ಲ. ನಾವು ಇವತ್ತು ಕೊಡತಕ್ಕ ಕೆಮಿಕಲ್ ಪೆಸ್ಟಿಸೈಡ್ಸ್‌ನಿಂದ ರೋಗ ಬಂದರೆ ಮರಕ್ಕೆ ತೊಂದರೆ ಆಗುವುದಿಲ್ಲ ಎಂತಲೇ ನಾವು ತಿಳಿದಿದ್ದೇವೆ. ಮರಕ್ಕೆ ಯಾವುದೇ ರೀತಿಯಾದ ತೊಂದರೆ ಆಗುವುದಿಲ್ಲ. ತೊಂದರೆ ಆಗತಕ್ಕದ್ದು ಇವತ್ತು ಬೆಳೆಗೆ ತೊಂದರೆ ಆಗುತ್ತದೆಯೇ ವಿನಹ ಮರಕ್ಕೆ ತೊಂದರೆ ಆಗುವುದಿಲ್ಲ. ಏಕೆಂದರೆ ಕೆಲವು ಮಾನ್ಯ ಸದಸ್ಯರುಗಳು ಮರಕ್ಕೇ ತೊಂದರೆ ಆಗುತ್ತದೆ ಎಂಬ ಒಂದು ಆತಂಕವನ್ನು ವ್ಯಕ್ತಪಡಿಸಿದರು. ಆದರೆ ಆ ರೀತಿಯಾಗಿ ಅಲ್ಲ ಎಂದು ಹೇಳುವುದರ ಜೊತೆಗೆ ಮಾನ್ಯ ಸೋಮಶೇಖರ್ ಅವರು ಹೇಳಿದರು. ನಾವು ಯಾವ್ಯಾವ ರೀತಿಯಾಗ ಸಂಶೋಧನೆ ಮಾಡಬೇಕು ಎಂಬ ಬಗ್ಗೆ ಹೇಳಿದಿರಿ. ನಾವು ಈಗಾಗಲೇ ಸಂಶೋಧನೆ ಮುಖೇನ ಬೇವು ಮೂಲದಿಂದ ಸಂಸ್ಕರಿಸಿದಂತಹ ಸ್ಯಾಲ್ಲೂನೀಮ್ ಇರಬಹುದು, ಮ್ಯಾಗ್ನಿಮ್ ಇರಬಹುದು ಎಕೊನೀಮ್ ಇರಬಹುದು ಬೇವಿ-ನ ಎಣ್ಣೆಯನ್ನು ಇವತ್ತು ಗಾರ್ಲಿಕ್ ಪೌಡರ್‌ನ ಎಣ್ಣೆಯಲ್ಲಿ ಮಿಕ್ಸ್ ಮಾಡಿ ಸೋಪ್ ವಾಟರ್ ಹಾಕಿ ಸ್ಪ್ರೇ ಮಾಡತಕ್ಕದ್ದು. ಇವೆಲ್ಲವೂ ಕೂಡ ಕೇರಳ ರಾಜ್ಯದಲ್ಲಿ ಈಗಾಗಲೇ ಜಾರಿಯಲ್ಲಿದೆ. ರೈತರು ಕೂಡ 100 ಪರ್ಸೆಂಟ್ ಪಾರ್ಟಿಸಿಪೇಟ್ ಮಾಡಿ ಅದನ್ನು ಕಂಟ್ರೋಲ್ ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ನಾವು ಇಲ್ಲಿ ಮುಖ್ಯವಾಗಿ ಸರ್ಕಾರದಮಟ್ಟದಲಿ ಈ ಕಾರ್ಯಕ್ರಮವನ್ನು ಹಮ್ಮಿ ಕೊಂಡಾಗ ಅದಕ್ಕೆ ಒಂದು ಅರ್ಥ ಬರುತ್ತದೆ ಎನ್ನುವಂತಹ ಒಂದು ಸಲಹೆಯನ್ನು ಕೂಡ ಕೆಲವಾರು ಸದಸ್ಯರು ಹೇಳಿದ್ದಾರೆ. ಆದಕ್ಕೋಸ್ಕರ ನಾವು ಅಂತಿಮವಾಗಿ ಕೃಷಿ ಸಂಶೋಧನೆಗೆ ಹೆಚ್ಚು ಒತ್ತನ್ನು ಕೊಡಬೇಕು ಎನ್ನತಕ್ಕ ದೃಷ್ಟಿಯಿಂದ ಮಾಡಿ, ಆದರಿಂದ ಬರತಕ್ಕ ರಿಸಲ್ಟ್‌ನ್ನು ನಾವು ಅಲ್ಟಿಮೇಟ್‌ಆಗಿ ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಬಗ್ಗೆ ಹೇಳಿದ್ದೇವೆ. Package of practice exclusively coconutmite, has to be published in consultation with the University. We will come back to it. There is no problem. ಇದಕ್ಕೆ ಸಮಗ್ರವಾಗಿ ಒಂದು ಚಿತ್ರವನ್ನು ಕೊಡಬೇಕು. ಒಂದು ಅರ್ಥ ಕೊಡಬೇಕು ಇದರ ಸಂಶೋಧನೆ ಮಾಡಬೇಕು. ಹೆಚ್ಚು ಒತ್ತನ್ನು ಕೊಡಬೇಕು. ಇದನ್ನು

ನಂಬಿರತಕ್ಕಥ ಕೇವಲ ಈ ರಾಜ್ಯದ ಅರ್ಧ ಜನರು ನಂಬಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಅನ್ನು ಮಂಡನೆ ಮಾಡಬೇಕಾದರೆ ಸಂಶೋಧನೆಗೆ ಹೆಚ್ಚು ಒತ್ತು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿ ಆ ನುಸಿ ರೋಗದ ಬಗ್ಗೆ ಹಣವನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ಈಗ ಸ್ಪಷ್ಟ ಮಾಡಿದ್ದಾರೆ. ಈ ಸಂಶೋಧನೆಗೆ ನಾವು ಯಾವ ಮೂಲದಿಂದ ಹಣವನ್ನು ತರತಕ್ಕದ್ದು ಎನ್ನುವುದಕ್ಕೆ ಮೊನ್ನೆ ನಾನು ದೆಹಲಿಗೆ ಹೋದಂತಹ ಸಂದರ್ಭದಲ್ಲಿ ಐಸಿಆರ್‌ನಲ್ಲಿ ಪ್ರಸ್ತಾವನೆ ಮಾಡಿದಾಗ ಐಸ್ಸಾರ್‌ನಿಂದ ಸುಮಾರು 1.43 ಲಕ್ಷ ರೂಪಾಯಿಗಳನ್ನು ಈ ಸಂಶೋಧನೆಗೆ ಮಂಜೂರು ಮಾಡಿದ್ದಾರೆ. ಅದು ಕೇರಳ, ಕರ್ನಾಟಕ ಮತ್ತು ತಮಿಳುನಾಡು ಮೂರು ರಾಜ್ಯಕ್ಕೂ ಕೂಡ ಹಂಚಿಕೆಯನ್ನು ಮಾಡಿ ಸಂಶೋಧನೆ ಮಾಡತಕ್ಕ ಕೆಲಸದಲ್ಲಿ ಈಗಾಗಲೇ ನಮ್ಮ ಪ್ರಕ್ರಿಯೆ ಪ್ರಾರಂಭವಾಗಿದೆ. ಅದಕ್ಕಿಂತ ಹೆಚ್ಚಾಗಿ ನಾವು ಐಸಿಆರ್ ನಿಂದ ಅಥವಾ ಕೇಂದ್ರ ಸರ್ಕಾರವನ್ನು ಕಾದು ಕುಳಿತುಕೊಳ್ಳತಕ್ಕಂಥ ಕೆಲಸಕ್ಕೆ ಹೋಗಿಲ್ಲ. ನಾವು ಸ್ಪಷ್ಟವಾಗಿ ಹಣವನ್ನು ಈಗ ಬಿಡುಗಡೆ ಮಾಡುತ್ತೇವೆ. ನಾವು ನಿರ್ದಿಷ್ಟವಾಗಿ ಇರತಕ್ಕ ಯೋಜನೆಯನ್ನು ಸರ್ಕಾರದ ಮುಂದೆ ಮಂಡಿಸಿ ಆಶ್ವಾಸನೆ ಕೊಟ್ಟಿದೆ. ಅದನ್ನು ಯಾವ ರೀತಿಯಾಗಿ ಮಾಡುತ್ತಿದ್ದೇವೆ ಎನ್ನುವುದಕ್ಕೆ ಒಂದು ವಿಷಯವನ್ನು ಹೇಳಬೇಕಾಗಿದೆ. ನಮ್ಮ ಈ ರೋಗದ ವಿಚಿತ್ರ ಸ್ಥಿತಿ ನಮಗೆ ಅರ್ಥ ಆಗುವುದಿಲ್ಲ. ಕೇರಳ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ತೀರ ಪ್ರದೇಶದಲ್ಲಿ ಆ ರೋಗ ಇಲ್ಲ. ಉತ್ತರ ಕರ್ನಾಟಕದಲ್ಲಿ ಇಲ್ಲ ಮತ್ತು ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕಿನಲ್ಲಿ, ಶಿರಾ ತಾಲ್ಲೂಕಿನಲ್ಲಿ ಆ ರೋಗ ಕಾಣುತ್ತಾ ಇಲ್ಲ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿದೆ, ತಿಪಟೂರು ತಾಲ್ಲೂಕಿನಲ್ಲಿದೆ ಇನ್ನೊಂದು ತಾಲ್ಲೂಕಿನ ಲ್ಲಿದೆ. ಈ ರೀತಿಯಾಗಿ ಒಂದು ಕಡೆ ಬರುತ್ತದೆ, ಇನ್ನೊಂದು ತಾಲ್ಲೂಕಿನಲ್ಲಿದೆ. ಈ ರೀತಿಯಾಗಿ ಒಂದು ಕಡೆ ಬರುತ್ತದೆ, ಇನ್ನೊಂದು ಕಡೆ ಬರುತ್ತಿಲ್ಲ. ಈ ಎಲ್ಲದಕ್ಕೂ ಮೂಲವಾಗಿರತಕ್ಕ ಕಾರಣ ಎಂದು ಹೇಳಿದರೆ ನಾವು ಈಗಾಗಲೇ ಮಾನ್ಯ ಭೈರೇಗೌಡರು ಭಾಷಣ ಮಾಡುತ್ತಾ ಇಂಟಿಗ್ರೇಟೆಡ್ ಪೆಸ್ಟ್ ಮ್ಯಾನೇಜ್‌ಮೆಂಟ್ ಎನ್ನತಕ್ಕ ಮಾತನ್ನು ಹೇಳಿದರು. ಆ ಪರಿಕಲ್ಪನೆ ಏನು ಇದೆ ಆ ಪರಿಕಲ್ಪನೆಗೆ ಕೂಡ ಅರ್ಥ ಇದೆ. ಆ ಹಿನ್ನೆಲೆಯಲ್ಲಿ ಈ ರೋಗ ಹೆಚ್ಚು ಬರುವುದಕ್ಕೆ ಸಾಧ್ಯ ಆಗುತ್ತದೆ ಎನ್ನುವುದು ಕೂಡ ಗಮನದಲ್ಲಿದೆ. ಇಂಟಿಗ್ರೇಟೆಡ್ ಪೆಸ್ಟ್ ಮ್ಯಾನೇಜ್‌ಮೆಂಟನ್ನು ಯಾವ ರೀತಿಯಾಗಿ ಜಾರಿಗೊಳಿಸಬೇಕು ಎನ್ನತಕ್ಕದ್ದರ ಬಗ್ಗೆ ಕೂಡ ನಾವು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಅದರ ಬಗ್ಗೆ ಕಾರ್ಯಕ್ರಮವನ್ನು ನಾವು ಖಂಡಿತವಾಗಿ ಹಾಕುತ್ತೇವೆ ಎನ್ನತಕ್ಕ ಮಾತು ಹೇಳುತ್ತೇನೆ ಏಕೆಂದರೆ ನಾವು ಎಷ್ಟೇ ಚರ್ಚೆ ಮಾಡಿದರೂ ಸಹ ಸರ್ಕಾರದಿಂದ ಎಷ್ಟೇ ಕೊಡುವುದಕ್ಕಿಂತ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿರತಕ್ಕ ಬಜೆಟ್‌ನಲ್ಲಿ ಸ್ಪಷ್ಟವಾದಂತಹ ಆಶ್ವಾಸನೆಯನ್ನು ಕೊಡುವುದರ ಮುಖೇನ, ಈ ರಾಜ್ಯದ ತೆಂಗು ಬೆಳೆಗಾರರಿಗೆ ಆಗತಕ್ಕ ತೊಂದರೆ ಏನು ಇದೆ, ಎಂಬ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಅವರ ಸಮಸ್ಯೆಗೆ ಸ್ಪಂದಿಸುತ್ತಿದೆ. ಅದರ ಸಮಸ್ಯೆ ಮನದಟ್ಟುಮಾಡಿಕೊಂಡಿದೆ ಎಂಬ ಬಗ್ಗೆ ಇದಕ್ಕಿಂತ ಬೇರೆ ಏನೂ ಸಾಕ್ಷಿ ಬೇಕಾಗಿಲ್ಲ ಎಂದು ಹೇಳುತ್ತೇನೆ. ಇದರ ಜೊತೆಗೆ ಮಾನ್ಯ ತೋಟಗಾರಿಕಾ ಸಚಿವರನ್ನು ನಾನು ಅಭಿನಂದಿಸಬೇಕಾಗುತ್ತದೆ. ನಾವು ಕೊಡತಕ್ಕ ಸಬ್ಸಿಡಿ ವಿಚಾರ. ನಾನು ಆ ಮನೆ ಈ ಮನೆಯಲ್ಲಿ ಮಾತನಾಡತಕ್ಕ ಸಂದರ್ಭದಲ್ಲಿ ನಾವು ಸಪ್ಲೈ ಮಾಡಿರತಕ್ಕ ಸುಮಾರು 58 ಸಾವಿರ ಲೀಟರ್‌ನಷ್ಟು ನಾವು ಮಾಡಿದ್ದರೂ ಕೂಡ 50-50 ಪರ್ಸೆಂಟ್‌ನಲ್ಲಿ ರೈತರಿಗೆ ಯಾವುದು ಬೇಕೋ ಅದನ್ನು ಕೊಟ್ಟುಕೊಳ್ಳುವು ದಕ್ಕೆ ಅವಕಾಶವನ್ನು ಕೊಟ್ಟಾಗಲೂ ಕೂಡ ದು ಖರ್ಚಾಗಿರುವುದು ಕೇವಲ 13 ಸಾವಿರಲೀಟರ್. ಬಹುಶಃ ನಮ್ಮ ಪರಿಕಲ್ಪನೆ. ಯಾರಿಂದಲೂ ಸಲಹೆ ಬರದಿದ್ದರೂ ಕೂಡ ನಮಗೆ ವಾಸ್ತವಿಕವಾಗಿ ಅರ್ಥ ಆಗಿರುವ ಪ್ರಕಾರ ಬಹುಶಃ ಸಣ್ಣ ಮತ್ತು ಅತಿ ಸಣ್ಣ

ರೈತರು ಏನು ಇದ್ದಾರೆ ಅವರು ಕೊಳ್ಳುವುದಕ್ಕೆ ತೊಂದರೆ ಆಗುತ್ತ ದೆ ಎನ್ನುವ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇವೆ. ಅರ್ಥ ಮಾಡಿಕೊಂಡು ಈಗಾಗಲೇ 70 ಪರ್ಸೆಂಟ್ ಅಥವಾ 75 ಪರ್ಸೆಂಟ್ ಹೇಳಿದ್ದೇವೆ. 70 ಪರ್ಸೆಂಟ್ ಸಬ್ಸಿಡಿ, 30 ಪರ್ಸೆಂಟ್ ನಾವು ಕೊಡುವುದು ಎನ್ನತಕ್ಕದ್ದನ್ನು ಕೂಡ ಘೋಷಣೆ ಮಾಡಿದ್ದೇವೆ . ಬಹುಶಃ ಇದರಿಂದ ನಾವು ಸುಲಭವಾಗಿ ರೈತರಿಗೆ, ಸುಲಭ ದರದಲ್ಲಿ ಗುಣಮಟ್ಟದ ಔಷಧಿ ಇವತ್ತು ಸಿಕ್ಕಾಗ ಅದನ್ನು ಸಿಂಪಡಿಸತಕ್ಕ ಅಥವಾ ಅದನ್ನು ಉಪಯೋಗ ಮಾಡತಕ್ಕಂಥ ಕೆಲಸವನ್ನು ಮಾಡಿದರೆ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯ ಎನ್ನತಕ್ಕದ್ದು ಇದೆ. ಮತ್ತು ಅನೇಕ ರೀತಿಯಾದ ಸಲಹೆಗಳನ್ನು ಹಾಗೆಯೇ ಸಂಶೋಧನೆಯ ಬಗ್ಗೆ ಮತ್ತು ಯಾವ ರೀತಿ ಸಿಂಪಡಿಕೆ ಬಗ್ಗೆ ನೀವು ಯಾವ ಸಲಕರಣೆಗಳನ್ನು ಉಪಯೋಗಿಸಬೇಕು? ಯಾವ ರೀತಿಯಾದಂತಹ ಪರಿಹಾರಗಳನ್ನು ಉಪಯೋಗಿಸಬೇಕು? ಎನ್ನತಕ್ಕ ಬಗ್ಗೆ ಅತ್ಯಂತ ಹೆಚ್ಚಿನ ಅನುಭವದ ಮಾತುಗಳನ್ನು ಆಡಿದ್ದೀರಿ. ಎಲ್ಲದನ್ನೂ ಕೂಡ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ನಾವು ಈ ನುಸಿ ರೋಗವನ್ನು ನಿಯಂತ್ರಣ ಮಾಡಬೇಕು. ಕೇವಲ ನಿಯಂತ್ರಣ ಮಾಡಿದರೆ ಅಷ್ಟೇ ಸಾಲದು. ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ ಹೇಳುವುದಾದರೆ , ನಾವು ಈ ರೋಗವನ್ನು ತಡೆಗಟ್ಟದೇ ಇದ್ದರೆ ಆಗತಕ್ಕಂಥ ಹಾನಿ ಅಷ್ಟಿಷ್ಟಲ್ಲ. ಈ ರೋಗ ಬೇರೆ ದೇಶದಲ್ಲಿ ಇಲ್ಲವೆಂದೇನೂ ಇಲ್ಲ. ಅದು ದಕ್ಷಿಣ ಆಫ್ರಿಕಾದಲ್ಲೂ ಕೂಡ ಇದೆ. ಈ ರೋಗ ನಿಯಂತ್ರಣಕ್ಕೆ ಅವರ ಸಂಶೋಧನೆ ಏನು ಎಂಬ ಬಗ್ಗೆ ಕೂಡ ಅಲ್ಲಿಂದ ಮಾಹಿತಿಯನ್ನು ತರಿಸತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಅಲ್ಲೂ ಕೂಡ ರೋಗ ನಿಯಂತ್ರಣದಲ್ಲಿದೆಯೇ ವಿನಃ ಸಂಪೂರ್ಣವಾಗಿ ಅದನ್ನು ತೊಡೆದು ಹಾಕತಕ್ಕಂಥ ಕೆಲಸ ಅಲ್ಲೂ ಕೂಡ ಆಗಿಲ್ಲ. ಇದರಲ್ಲಿ ಇನ್ನೂ ಹೆಚ್ಚು ಸಂಶೋಧನೆ ಆಗಬೇಕಾಗುತ್ತದೆ. ಆ ದಿಸೆಯಲ್ಲಿ ಸರ್ಕಾರ ಕ್ರಮ ಹಾಕಿಕೊಂಡಿದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಕೃಷಿ ಸಚಿವರು ದಯವಿಟ್ಟು ನನ್ನ ಪ್ರಶ್ನೆಗೆ ಉತ್ತರಿಸಬೇಕು. ನುಸಿ ರೋಗ ಸೇರಿದಂತೆ ಬೇರೆ ಬೇರೆ ಬೆಳೆಗಳಿಗೆ ಸಾಕಷ್ಟು ರೋಗಗಳು ಬರುತ್ತವೆ. ಆ ರೋಗಗಳನ್ನು ನಿಯಂತ್ರಣ ಮಾಡುವುದು ಅಥವಾ ಅದು ಬರದಂತೆ ಮಾಡುವುದು ಒಂದು ಕಡೆ ಇರಲಿ. ಆ ರೋಗಗಳು ಬಂದನಂತರ ಹಾನಿಯಾಗುತ್ತದೆ. ರೈತ ನಷ್ಟ ಅನುಭವಿಸಿತ್ತಾನೆ. ಆ ರೈತನ ರಕ್ಷಣೆ ಮಾಡಬೇಕೆಂಬುದು ಬಹಳ ಮುಖ್ಯ. ಕೇಂದ್ರ ಸರ್ಕಾರ ಇತ್ತೀಚೆಗೆ ಹೊಸ ಬೆಳೆ ವಿಮಾಪಾಲಿಸಿ ಯನ್ನು ಜಾರಿಗೆ ತಂದಿದೆ. ಆ ಯೋಜನೆಡಿ ಈ ತೆಂಗು ಬೆಳೆಯನ್ನು ರಾಜ್ಯ ಸರ್ಕಾರ ಸೇರಿಸುತ್ತದೆಯೇ? ಹೇಗೆ? ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಬೇಕು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಬಜೆಟ್ ಭಾಷಣದಲ್ಲಿ ಈ ಹೊಸ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿ ಅದಕ್ಕಾಗಿ 100 ಕೋಟಿ ರೂಪಾಯಿಗಳನ್ನು ತಗೆದಿಟ್ಟಿರುವುದನ್ನು ತಾವು ಗಮನಿಸಿರಬಹುದೆಂದು ನಾನು ಭಾವಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಆ ಯೋಜನೆಯಡಿ ಯಾವ ಯಾವ ಬೆಳೆಗಳನ್ನು ಸರ್ಕಾರ ಸೇರಿಸುತ್ತದೆ ಎಂಬ ಬಗ್ಗೆ ತಾವು ಹೇಳಬೇಕಂದು ನಾನು ಕೇಳಿದೆ .

ಶ್ರೀ ಸಿ. ಬೈರೇಗೌಡ : ಆ 100 ಕೋಟಿ ರೂಪಾಯಿಗಳಲ್ಲಿ 5 ರೂಪಾಯಿಗಳನ್ನೂ ಕೂಡ ತಾವು ಖರ್ಚು ಮಾಡುವುದಕ್ಕಾಗುವುದಿಲ್ಲ. ಅದು ನನಗೆ ಗೊತ್ತಿದೆ. ಬೆಳೆ ವಿಮಾ ಯೋಜನೆ ಪರಿಲ್ಪನೆ ಬಗ್ಗೆ ಕೇಂದ್ರ ಸರ್ಕಾರವೇ ಇನ್ನೂ ಒಂದು ನಿರ್ಧಾರಕ್ಕೆ ಬಂದಿರುವುದಿಲ್ಲ. ಆದರೆ ನೀವು ರೈತರಿಗೆ ಏನೋ ಉಪಕಾರ ಮಾಡಿದ್ದೇವೆ ಎಂದು ಅನಿಸಿಕೊಳ್ಳುವುದಕೋಸ್ಕರ 100 ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಇಡಲಾಗಿದೆ ಎಂದು ಹೇಳಿಕೊಳ್ಳುತ್ತಿದ್ದೀರಿ. ತನ್ಮೂಲಕ ಹೋದ ವರ್ಷ ನಾವು ಇದಕ್ಕಾಗಿ ಕೇವಲ 6 ಕೋಟಿ ರೂಪಾಯಿಗಳನ್ನುಖರ್ಚು ಮಾಡಿದ್ದೆವು ಎಂದು ನೀವು ಹೇಳಿಲಿಕ್ಕೆ ಹೊರಟಿದ್ದೀರಿ. ನೀವು 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೀರೋ, 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತ್ತಿರೋ ಎಂಬುದು ನಂತರ ಗೊತ್ತಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಬೈರೇಗೌಡರಿಂದ ಈ ಮಾತನ್ನು ನಾನು ನಿರೀಕ್ಷಿಸಿರಲಿಲ್ಲ. ಈಗಾಗಲೇ ನಾವು 100 ಕೋಟಿ ರೂಪಾಯಿಗಳನ್ನು ಬೆಳೆ ವಿಮಾ ಯೋಜನೆಗಾಗಿ ಬಜೆಟ್‌ನಲ್ಲಿ ಇಟ್ಟಿದ್ದೇವೆ. ಯಾವ ಯಾವ ಬೆಳೆಗಳಿಗೆ ಆ ಯೋಜನ ಅನ್ವಯಿಸಬೇಕು ಎಂದು ಇನ್ನೂ ನಿರ್ಧಾರವಾಗಿಲ್ಲ. ಹಿಂದೆ ಹಾರ್ಟಿಕಲ್ಚರ್ ಕ್ರಾಪ್ಸ್‌ಗೆ ಈ ಯೋಜನೆಯಲ್ಲಿ ಅವಕಾಶ ಇರಲಿಲ್ಲ. ಈಗ ಹೊಸ ಯೋಜನೆಯಲ್ಲಿ ತೋಟಗಾರಿಕಾ ಬೆಳೆಗಳಿಗೂ ಕೂಡ ಅವಕಾಶ ಮಾಡಿ ಕೊಟ್ಟಿದ್ದಾರೆ. ಆದರೆ ಅಂತಿಮವಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ಜೊತೆಗೆ ಕುಳಿತು ಚರ್ಚೆ ಮಾಡಿ ಈ ಬೆಳೆಗಳ ಬಗ್ಗೆ ನಿರ್ಧರಿಸುತ್ತದೆ. ತೆಂಗು ಬೆಳೆಯನ್ನು ಯೋಜನೆಯ ವ್ಯಾಪ್ತಿಗೆ ತರಬೇಕಾಗುತ್ತದೆ. ಅದೊಂದು ಒಳ್ಳೆಯ ಸಲಹೆ. ಮಾನ್ಯ ಬೈರೇಗೌಡರು 100 ಕೋಟಿ ರೂಪಾಯಿಗಳನ್ನು ಮೇಲ್ನೋಟಕ್ಕೆ ಮಾತ್ರ ಮೀಸಲಿಟ್ಟಿರುವುದಾಗಿ ಹೇಳುತ್ತಿದ್ದಾರೆ. ಆದರೆ ಬಜೆಟ್‌ನಲ್ಲಿ ಹಣವನ್ನು ಮೀಸಲಿಡತಕ್ಕ ಕಾಳಜಿಯನ್ನು ನಾವು ವ್ಯಕ್ತ ಪಡಿಸಿದ್ದೇವೆ. ಬೆಳೆ ವಿಮಾ ಯೋಜನೆ ನಿಮಗೆ ಬೇಕೋ ಬೇಡವೋ ಎಂದು ಕೇಳಿದಾಗ ಅದು ನಮಗೆ ಅನಿವಾರ್ಯವಾಗಿರುವುದರಿಂದ ಅದನ್ನು ನಾವು ಒಪ್ಪಲೇಬೇಕಾಗುತ್ತದೆ. ಎಷ್ಟು ಹಣ ಬೇಕಾದರೂ ಅದಕ್ಕೆ ನಾವು ತರಲೇಬೇಕಾಗುತ್ತದೆ. ಕೇಂದ್ರ ಸರ್ಕಾರ ಈಗಿರತಕ್ಕ ಹಳೆಯ ಸ್ಕೀಮ್ ಡಿಸ್-ಕಂಟಿನ್ಯೂ ಮಾಡಿ ಹೊಸ ಯೋಜನೆಯನ್ನು ತರುತ್ತೇವೆ ಎಂದು ಹೇಳಿದಾಗ ನಾವು ಪ್ರಾಮಾಣಿಕವಾಗಿ ಅದನ್ನು ಜಾರಿಗೆ ತರತಕ್ಕ ಪ್ರಯತ್ನ ಮಾಡುತ್ತಿದ್ದೇವೆ. ಈ ಹಿಂದಿನ ಯೋಜನೆಗೂ ಈ ಯೋಜನೆಗೂ ಕೂಡ ಸಾಕಷ್ಟು ವ್ಯತ್ಯಾಸ ಇದೆ. ಆದರೆ ಅಂತಿಮವಾಗಿ ಕೇಂದ್ರ ಸರ್ಕಾರದ ಜೊತೆಗೆ ಕುಳಿತು ರಾಜ್ಯ ಸರ್ಕಾರ ಚರ್ಚೆ ಮಾಡದೇ ಅಂತಿಮವಾಗಿ ಯಾವ ತೀರ್ಮಾನವನ್ನೂ ಇಲ್ಲಿ ಹೇಳಬಾರದು ಎಂಬ ಉದ್ದೇಶದಿಂದ ನಾವು ಆ ಬಗ್ಗೆ ಏನನ್ನೂ ಇಲ್ಲಿ ಹೇಳಲಿಲ್ಲ. ಈ ಯೋಜನೆಯ ಗ್ರಾಮಗಳ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂಬ ತಿರ್ಮಾನ ಆಶಯ ನಮ್ಮದಾಗಿದೆ. ಯಾವ ಹಿನ್ನೆಲೆಯಲ್ಲಿ ತಾವು ಆ 100 ಕೋಟಿ ರೂಪಾಯಿಗಳನ್ನು ಖರ್ಚಾ ಮಾಡುವುದಕ್ಕಾಗುವಿದಿಲ ಎಂದು ಹೇಳುತ್ತಿದ್ದೀರಿ ಎಂಬುದು ನಮಗೆ ಅರಿವಾಗಿರುತ್ತದೆ. ಆದರೆ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಿಂತ ಹೆಚ್ಚಾಗಿ ಅದು ರೈತರಿಗೆಸಹಾಯವಾಗಬೇಕೆಂಬ ಉದ್ದೇಶ ನಮ್ಮದಾಗಿದೆ.

ಶ್ರೀ ಎಸ್.ಎಸ್.ಪಾಟೀಲ್ : ಯಾವ್ಯಾವ ಬೆಳೆಗಳನ್ನು ಬೆಳೆ ವಿಮಾ ಯೋಜನೆಯಡಿ ಸೇರಿಸಬೇಕೆಂಬ ನಿರ್ಧಾರವನ್ನು ರಾಜ್ಯ ಸರ್ಕಾರವೇ ಕೈಗೊಳ್ಳಬಹುದು. ಅದಕ್ಕಾಗಿ ಕೇಂದ್ರ ಸರ್ಕಾರ ಜೊತೆ ಚರ್ಚಿಸಬೇಕೆಂದೇನೂ ಇಲ್ಲ. ಆ ಅಧಿಕಾರ ರಾಜ್ಯ ಸರ್ಕಾರಕ್ಕೇ ಕೇಂದ್ರ ಬಿಟ್ಟು ಕೊಟ್ಟಿದೆ. ನೀವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಿ ಎಂದು ನಾನು ಇಲ್ಲಿ ನಿಮಗೆ ಕೇಳುತ್ತಿದ್ದೇನೆ.

ಶ್ರೀ ಡಿ.ಜಿ. ಶಾಂತನಗೌಡ (ಹೊನ್ನಾಳಿ) : ಮಾನ್ಯ ಅಧ್ಯಕ್ಷರೇ, ತೆಂಗಿನ ಬೆಳೆಗೆ ಬರುವ ನುಸಿ ರೋಗದ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಅದು ಒಂದು ರೋಗ ಅಷ್ಟೇ. ಇವತ್ತು ನಮ್ಮ ರಾಜ್ಯದಲ್ಲಿ ತಾಳೆ ಬೆಳೆಗೆ ಕ್ಯಾನ್ಸರ್ ಬಂದಿದೆ. ಅದರ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ವಿಶೇಷವಾಗಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಇದು ಉಲ್ಬಣಿಸಿ ಅಲ್ಲಿ ತಾಳೆ ಫ್ಯಾಕ್ಟರಿಗಳನ್ನು ಬಂದ್ ಮಾಡಲಾಗಿದೆ. ಸಾವಿರಾರು ರೈತರು ಲಕ್ಷಾಂತರ ಎಕರೆಗಳಷ್ಟು ತಾಳೆ ಬೆಳೆಯನ್ನು ಬೆಳೆದಿದ್ದಾರೆ. ಬೆಳೆಗಾರರಿಗೆ ಬರಬೇಕಾದ ಹಳೆಯ ಬಾಕಿ 40 ಲಕ್ಷ ರೂಪಾಯಿಗಳು ಇನ್ನೂ ಬಂದಿಲ್ಲ. ಕಂಪನಿಯಲ್ಲಿ ಸರ್ಕಾರ ಶೇ.49 ಮತ್ತು ಮಾಲೀಕ ಶೇ. 51ರಷ್ಟು ಷೇರು ಬಂಡವಾಳದಾರರಾಗಿದ್ದಾರೆ. ಫ್ಯಾಕ್ಟರಿ ವೇಳೆ ಆಗಿ ಬೆಳೆದಂತಹ ಹಣ್ಣುಗಳನ್ನೂ ಕೂಡ ತೆಗೆದುಕೊಂಡು ಹೋಗುತ್ತಿಲ್ಲ. ಒಂದು ವೇಲೆ ತೆಗೆದುಕೊಂಡ ಹೋದರೂ ಅದಕ್ಕೆ ಕಡಿಮೆ ಧಾರಣೆ ಕೊಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಗಮನಹರಿಸಿದೆ? ಬಾಕಿ ಕೊಡಿಸಲಿಕ್ಕೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದುಕೊಂಡಿದೆ ? ಮುಂದೆ ಫ್ಯಾಕ್ಟರಿ ಪ್ರಾರಂಭ ಮಾಡುತ್ತಾರೋ ಇಲ್ಲವೋ? ಈಗಾಗಲೇ ರೈತರು ಕಿತ್ತಿರುವ ತಾಳೆ ಬೆಳೆಯನ್ನು ಉಳಿಸಿಕೊಳ್ಳಬೇಕೋ ಬೇಡವೋ? ಈಗ 10 ವರ್ಷಗಳ ಹಿಂದೆ ನಮಗೆ ಮುಫತ್ತಾಗಿ ಗೊಬ್ಬರ ಮತ್ತು ಸಸಿಗಳನ್ನು ಕೊಟ್ಟು ಸಾಕಷ್ಟು ಅನುಕೂಲ ಮಾಡಲಾಗಿತ್ತು. ನಮಗೆ ಅದರಿಂದ ಏನು ಉತ್ಪತ್ತಿ ಬಂದಿಲ್ಲ. ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂದು ನಾನು ಮಾನ್ಯ ತೋಟಗಾರಿಕಾ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ನುಸಿ ರೋಗವನ್ನು ಸಂಪೂರ್ಣವಾಗಿ ನಿಯಂತ್ರಣ ಮಾಡಬೇಕಾದರೆ ನಮ್ಮ ರಾಜ್ಯ ಮತ್ತು ಪಕ್ಕದ ರಾಜ್ಯಗಳು ಸಂಘಟಿತರಾಗಿ ಒಮ್ಮೆಗೇ ಎಲ್ಲಾ ಕಡೆಗಳಲ್ಲೂ ರೋಗ ನಿವಾರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಸಚಿವರು ಪಕ್ಕದ ರಾಜ್ಯಗಳ ಜೊತೆಗೆ ಈ ಬಗ್ಗೆ ಇಲ್ಲಿಯವರೆಗೂ ಏನು ಚರ್ಚೆ ನಡೆಸಿದ್ದಾರೆ ? ಅಲ್ಲಿಗೆ ಎಷ್ಟು ಸಾರಿ ಅವರು ಭೇಟಿ ಕೊಟ್ಟಿದ್ದಾರೆ ? ಯಾವ ತರಹದ ಜಂಟಿ ಕಾರ್ಯಕ್ರಮವನ್ನು ಹಾಕಿ ಕೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ಮಾಹಿತಿ ನೀಡಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ರಾಜ್ಯದಲ್ಲಿ ಸಮರ್ಪಕವಾಗಿ ಕ್ರಮಗಳನ್ನು ತೆಗೆದುಕೊಂಡರೂ ಸಹಾ ಪಕ್ಕದ ರಾಜ್ಯದಲ್ಲಿ ಏನೂ ನಿಯಂತ್ರಣ ಕ್ರಮ ತೆಗೆದುಕೊಂಡಿಲ್ಲದಿದ್ದರೆ ಪುನಃ ಆ ರೋಗ ನಮ್ಮ ರಾಜ್ಯಕ್ಕೆ ಬರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಉತ್ತರ ಕೊಡುವಾಗ ಆ ಎಲ್ಲಾ ಅಂಶಗಳ ಬಗ್ಗೆ ಹೇಳಿದ್ದೇನೆ. ನಾನು ಉತ್ತರ ಕೊಡುವಾಗ ಮಾನ್ಯ ಬೈರೇಗೌಡರು ಸದನದ ಹೊರಗಿದ್ದರೆಂದು ಕಾಣುತ್ತದೆ. ಬೇರೆ ಬೇರೆ ರಾಜ್ಯಗಳಲ್ಲಿ ಏನಾಗಿದೆ ಎಂಬ ಬಗ್ಗೆ ಡೇ ಟು ಡೇ ಇನ್‌ಫರ್‌ಮೇಷನ್ ನಮ್ಮ ಹತ್ತಿರ ಇದೆ. ನಮ್ಮ ವಿಜ್ಞಾನಿಗಳನ್ನೂ ಕೂಡ ಅಲ್ಲಿಗೆ ಕಳುಹಿಸಿದ್ದೇವೆ. ಅಲ್ಲಿಯವರೂ ಕೂಡ ಇಲ್ಲಿಗೆ ಬಂದು ಸಲಹೆಗಳನ್ನು ಕೊಟ್ಟಿದ್ದಾರೆ. ನನ್ನನ್ನು ಮತ್ತು ತೋಟಗಾರಿಕಾ ಸಚಿವರನ್ನು ಅವರು ಭೇಟಿಯಾಗಿದ್ದಾರೆ. ಈ ದಿಸೆಯಲ್ಲಿ ನಾವು ಈಗಾಗಲೇ ಕಾರ್ಯಕ್ರಮವನ್ನು ಹಾಕಿದ್ದೇವೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಡಿ.ಜಿ. ಶಾಂತನಗೌಡ : ತಾಳೆಗೆ ಕ್ಯಾನ್ಸರ್ ಬಂದಿರುವ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲೇ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ತಾಳೆಗೆ ಕ್ಯಾನ್ಸರ್ ಬಂದಿರುವ ವಿಷಯ ಈಗ ತಾನೇ ನಮ್ಮ ಗಮನಕ್ಕೆ ಬಂದಿದೆ. ಇದಕ್ಕೆ ಏನಾದರೂ ಪರಿಹಾರ ಕಂಡುಹಿಡಿಯೋಣ. ನಾನು ಆ ಬಗ್ಗೆ ತಮ್ಮೊಡನೆ ಚರ್ಚೆ ಮಾಡುತ್ತೇನೆ. ಅಥವಾ ಏನಾದರೂ ವಿಷಯ ಇದ್ದರೆ ನನಗೆ ಬರೆದು ತಿಳಿಸಿ. ಆ ಬಗ್ಗೆ ಕ್ರಮ

ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ : ರೀಸರ್ಚ್ ಫೈಂಡಿಂಗ್ಸ್ ಏನು ಎಂಬ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನೂ ಹೇಳಲಿಲ್ಲ. ರೋಗ ಕಂಟ್ರೋಲ್ ಆಗಿದೆಯೇ? ಎಂಬ ಬಗ್ಗೆ ಸಹಾ ಹೇಳಲಿಲ್ಲ. ಬೇರೆ ರಾಜ್ಯಗಳಲ್ಲಿ ಮಾನೋಕ್ರೋಟೋಫಾಸ್ ಮತ್ತು ಡೈಕೋಫಾಲ್ ಔಷಧಿಗಳನ್ನು ಬಳಸಿ ರೋಗ ನಿಯಂತ್ರಣವಾಗಿದೆಯೇ? ಎಂಬ ಬಗ್ಗೆ ಸಹಾ ಮಾಹಿತಿ ಕೊಡಲಿಲ್ಲ. ದಯವಿಟ್ಟು ಮಾನ್ಯ ಸಚಿವರು ಆ ಬಗ್ಗೆ ಹೇಳಬೇಕೆಂದು ಕೋರುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ನಾನು ಈಗಾಗಲೇ ಹೇಳಿದಂತೆ ಮೊಟ್ಟ ಮೊದಲನೆಯದಾಗಿ ಈ ನುಸಿರೋಗ ನಮ್ಮ ರಾಜ್ಯದಲ್ಲಿ ಬಂದಿದೆ. ಮಾನೋಕ್ರೋಟೋಫಾಸ್‌ನಿಂದ ರೋಗ ನಿವಾರಣೆ ಆಗುತ್ತದೋ ಅಥವಾ ಕೇರಳ ರಾಜ್ಯದಲ್ಲಿರುವಂತೆ ನೀವ್ ಪೌಡರ್‌ನಿಂದ ರೋಗ ನಿವಾರಣೆಯಾಗತ್ತದೋ ಇದರಲ್ಲಿ ಯಾವುದು ಒಳ್ಳೆಯದು ಎಂಬ ಬಗ್ಗೆ ಸಂಶೋಧನೆಯಲ್ಲಿ ನಾವು ಇನ್ನೂ ಇನಿಷಿಯಲ್ ಸ್ಟೇಜ್‌ನಲ್ಲಿದ್ದೇವೆ. ಅದೊಂದೇ ಮುಖ್ಯವಲ್ಲ. ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಬಯೋಲಾಜಿಕಲ್ ಪ್ಯಾರಾಸೈಟ್ಸ್‌ಗಳನ್ನು ಕೂಡ ನಾವು ತಯಾರು ಮಾಡುತ್ತಿದ್ದೇವೆ. ಇದರ ಬಗ್ಗೆ ರೀಸರ್ಚ್ ಕೂಡ ನಡೆದಿದೆ. ಅದು ಅಂತಿಮ ಮಟ್ಟದಲ್ಲಿದೆ. ಇನ್ನು ಎರಡು ತಿಂಗಳೊಳಗಾಗಿ ನಮಗೆ ಸಂಶೋಧನೆಯ ಬಗ್ಗೆ ಮಾಹಿತಿ ಸಿಗಬಹುದು.

ಉಪಾಧ್ಯಕ್ಷರು : ಈ ವಿಷಯದ ಚರ್ಚೆಯನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ಈಗ ಒಂದು ಪ್ರಕಟಣೆ ಇದೆ.

(10) <u>ಪ್ರಕಟಣೆ</u>

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ:

(1) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 31.3.2000ರಂದು ಯಾವುದೇತಿದ್ದುಪಡಿಗಳು ಇಲ್ಲದೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಕ 2000ನ್ನು ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

(2) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 31.3.2000ರಂದು ವಿಧಾನ ಸಭೆಯು ಪುನರ್ ಅಂಗೀಕರಿಸಿದ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2000ನ್ನು ಯಾವುದೇ ತಿದ್ದುಪಡಿಗಳುಇಲ್ಲದೇ ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

ಮಾನ್ಯ ಸದಸ್ಯರುಗಳಾದ ಎ.ರಾಮದಾಸ್, ಎನ್.ಯೋಗೀಶ್ ಭಟ್, ಎಸ್.ಸುರೇಶ್ ಕುಮಾರ್, ಆರ್.ಅಶೋಕ್, ಪಿ.ಸಿ.ಮೋಹನ್ ಹಾಗೂ ಇತರರು ರಾಜ್ಯದಲ್ಲಿ ಐ.ಪಿ.ಫ್ಲ್ಯೂಯಿಡ್ ಘಟಕಗಳನ್ನು ಮುಚ್ಚಿರುವುದರಿಂದ ರೋಗಿಗಳಿಗೆ ಉಂಟಾಗಿರುವ ತೊಂದರೆಯ ಬಗೆಗಿನ ಚರ್ಚೆಯನ್ನು ದಿನಾಂಕ 10ನೇ ಏಪ್ರಿಲ್ 2000ಗೆ ಮುಂದೂಡಲಾಗಿದೆ.